ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ

ನಿಬಂಧಕಾರರು

ಉಮೇಶ್ .ಆರ್

ನೋಂದಣಿ ಸಂಖ್ಯೆ : KVTMKS - 00600

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಹೆಚ್.ಪಿ.ಗೀತಾ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು – ೫೭೦ ೦೨೩

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೨–೧೩

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್. ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ

ನಿಬಂಧಕಾರರು

ಉಮೇಶ್ .ಆರ್

ನೋಂದಣಿ ಸಂಖ್ಯೆ : KVTMKS - 00600

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಹೆಚ್.ಪಿ.ಗೀತಾ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು – ೫೭೦ ೦೨೩

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೨–೧೩

ಅಭ್ಯರ್ಥಿಯ ಘೋಷಣಾ ಪತ್ರ

"ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ KVTMKS - 00600 ವಿದ್ಯಾರ್ಥಿ ಆದ ನಾನು ೨೦೧೨-೧೩ನೇ ಸಾಲಿನ ಪರೀಕ್ಷೆಗಾಗಿ **ಡಾ. ಹೆಚ್.ಪಿ.ಗೀತಾ, ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು – ೫೭೦ ೦೨೩** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಉಮೇಶ್ .ಆರ್)

ಸ್ಥಳ: ಮೈಸೂರು

ದಿನಾಂಕ: ೨೨-೦೭-೨೦೧೩

೨೦೧೨-೧೩ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

ದೃಢೀಕರಣ ಪ್ರಮಾಣಪತ್ರ

೨೦೧೨-೧೩ನೇ ಸಾಲಿನಲ್ಲಿ ಕ್ರಮಸಂಖ್ಯೆ KVTMKS-00600ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿ ಯಾದ **ಉಮೇಶ್.ಆರ್** ಅವರು ನನ್ನ ಮಾರ್ಗದರ್ಶನದಲ್ಲಿ **"ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಳಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೨-೦೭-೨೦೧೩

ಗೀತಾ. ಎ

(ಡಾ. ಹೆಚ್.ಪಿ.ಗೀತಾ)
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು - ೫೭೦ ೦೨೩

ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ

ಪ ರಿ ವಿ ಡಿ

*****

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಸುದೀರ್ಘ ಇತಿಹಾಸವನ್ನು ಕರ್ನಾಟಕ ಸಂಸ್ಕೃತಿ ಹೊಂದಿದೆ. ಹಿಂದಿನಿಂದ ಇಂದಿನವರೆಗೂ ಬೆಳೆದು ಬಂದಿರುವ ಕರ್ನಾಟಕ ಸಂಸ್ಕೃತಿಯ ಪ್ರತಿಬಿಂಬವೇ ಕನ್ನಡ ಸಾಹಿತ್ಯ. ಇದು ಸಮೃದ್ಧವಾಗಿಯೂ ವೈವಿಧ್ಯವಾಗಿಯೂ ಇವೆ. ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯವನ್ನು ಅವಲೋಕಿಸಿದರೆ, ಅದು ಮುಖ್ಯವಾಗಿ ಧರ್ಮದ ನೆಲೆಯಲ್ಲಿ ಹುಟ್ಟಿಕೊಂಡಿರುವುದನ್ನು ಮತ್ತು ಜೈನ, ವೀರಶೈವ, ವೈದಿಕ ಮತದ ಕವಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವುದನ್ನು ಗುರುತಿಸಬಹುದು.

ಪ್ರಾಚೀನ ಕನ್ನಡ ಸಾಹಿತ್ಯದೊಳಗೆ ರೂಪಿತಗೊಂಡಿರುವ ಪ್ರತಿಯೊಂದು ಕೃತಿಯು ಸಾಹಿತ್ಯಕ ಪಠ್ಯಗಳಾಗಿಯೇ ಉಳಿಯದೆ ಸಾಂಸ್ಕೃತಿಕ ಆಕರಗಳಾಗುತ್ತವೆ. ಕೃತಿಯು ತಮ್ಮ ತಮ್ಮ ಕಾಲದ ಸಾಮಾಜಿಕ ಅಥವಾ ಸಾಂಸ್ಕೃತಿಕ ಜನಜೀವನದ ಗತಿಬಿಂಬವಾಗಿರುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಬಹುತೇಕವಾಗಿ ಸಾಮಾಜಿಕ ಸಂದರ್ಭಗಳೇ ಭೂಮಿಕೆಯನ್ನೊದಗಿಸಿವೆ.

ವ್ಯಕ್ತಿಗಳ ಸಮೂಹದಿಂದ ಕೂಡಿದ ಸಮಾಜದಲ್ಲಿ ವ್ಯಕ್ತಿಗಳ ಆಲೋಚನೆ, ಭಾವನೆ, ಆಶೋತ್ತರಗಳು, ನಾವು ಹಿಂದಿನಿಂದ ನಂಬಿಕೊಂಡು, ಅನುಸರಿಸಿಕೊಂಡು ಬಂದ ಮೌಲ್ಯಗಳು ಪರಸ್ಪರ ಭಿನ್ನವಾಗಿರುತ್ತವೆ. ಈ ಭಿನ್ನತೆಯಿಂದ ಸಮಾಜದಲ್ಲಿ ಅನೇಕ ಸಂಘರ್ಷಗಳು ಉಂಟಾಗುತ್ತವೆ, ಕೆಲವು ಬದಲಾವಣೆಗಳು ಏರ್ಪಡುತ್ತವೆ. ಕವಿಯು ಇವುಗಳನ್ನು ವಿಶಿಷ್ಟ ನೆಲೆಯಲ್ಲಿ ಪುನರ್ ನಿರ್ಮಾಣಮಾಡುತ್ತಾನೆ. ಈ ನಿರ್ಮಾಣದಲ್ಲಿ ಸಾಮಾಜಿಕತೆ ಪ್ರಮುಖ ಪಾತ್ರವಹಿಸುತ್ತದೆಂಬುದನ್ನು ಗುರುತಿಸಿಕೊಳ್ಳಬೇಕು.

ಆಧುನಿಕ ಸಾಹಿತ್ಯದಲ್ಲಿ ವಸಾಹತುಶಾಹಿ, ಜಾಗತೀಕರಣ ಮತ್ತು ದೇಶೀವಾದ ಪರಿಕಲ್ಪನೆಗಳು ಇಂದು ಹೆಚ್ಚು ಚರ್ಚೆಗೊಳ್ಳುತ್ತಿವೆ. ಇವುಗಳ ನಡುವೆ 'ಸಾಮಾಜಿಕ ಪರಿಕಲ್ಪನೆ'ಯು ಪ್ರಮುಖ ಮಾದರಿಯಾಗಿದೆ. ಸಾಮಾಜಿಕ ಪರಿಕಲ್ಪನೆ ಎಂದಾಗ ಲೇಖಕನೊಬ್ಬನ ಸಮಕಾಲೀನ ಸಾಂಸ್ಕೃತಿಕತೆಯ ಭಾಗಶಃ ಅಂಶಗಳನ್ನು ಗ್ರಹಿಸುವ ಪ್ರಯತ್ನವಾಗಿದೆ. ಈ ಪ್ರಯತ್ನ ಚಾರಿತ್ರಿಕ ವಿಮರ್ಶೆಯ ಮುಖ್ಯ ಪರಿಮಾಣಗಳಲ್ಲಿ

ಒಂದಾದರೂ, ಪಾಶ್ಚಾತ್ಯ ನವ್ಯ ವಿಮರ್ಶಕರ ಟೀಕೆಗಳಾದ ಚಾರಿತ್ರಿಕ ವಿಮರ್ಶೆಯಲ್ಲಿ ಸಾಹಿತಿಯ ವಿಶಿಷ್ಟ ಪ್ರತಿಭೆ ಮತ್ತು ಕೃತಿಯೇ ಕಡೆಗಣಿಸಲ್ಪಡಬಹುದಾದ ಸಾಧ್ಯತೆಗಳನ್ನು ಮೀರುವ ಪ್ರಯತ್ನವಾಗಿದೆ. ಒಂದು ಕೃತಿಯ ಆಸ್ವಾದನೆಯಲ್ಲಿ ಅವತ್ತಿನ ಸಾಮಾಜಿಕ ಅಂಶಗಳ ಗ್ರಹಿಕೆ ಸಾಧ್ಯ. ಇಲ್ಲಿ ಕೃತಿ ಅಗಣ್ಯವಾಗಲಾರದು. ನಮ್ಮ ಗ್ರಹಿಕೆಗಳೆಲ್ಲವೂ ಅಲ್ಲಿನ ಪಾತ್ರ, ಸನ್ನಿವೇಶ, ಘಟನೆಗಳ ತಾತ್ವಿಕತೆಯ ಮೇಲೆ ನಿರ್ಮಾಣಗೊಳ್ಳುತ್ತವೆ.

ಇಂದು ಪರಿಕಲ್ಪನಾಧಾರಿತ ಅಧ್ಯಯನಗಳು ಸಾಕಷ್ಟು ನಡೆಯುತ್ತಿವೆ. ಶಿವಕೋಟ್ಯಾಚಾರ್ಯ ಬರದನೆಂದು ಹೇಳಲಾಗಿರುವ ವಡ್ಡಾರಾಧನೆಯೆಂದು ಪ್ರಚಲಿತ-ವಾಗಿರುವ ಪ್ರಾಚೀನ ಗದ್ಯಗ್ರಂಥವು ಸಾಮಾಜಿಕ ಪರಿಕಲ್ಪನೆಯ ಅಧ್ಯಯನಕ್ಕೆ ಮಹತ್ವದ ಪಠ್ಯವಾಗಿದೆ. ಪ್ರಾಚೀನ ಕೃತಿಗಳ ಸಾಮಾಜಿಕ ಪರಿಕಲ್ಪನೆಯನ್ನು ಕಟ್ಟಿಕೊಳ್ಳುವ ಮೂಲಕ ಪ್ರಾಚೀನ ಕರ್ನಾಟಕದ ಸಾಮಾಜಿಕ ಸ್ಥಿತಿಗತಿಗಳನ್ನು ಗುರುತಿಸಿಕೊಳ್ಳುವ ಅಗತ್ಯವಿದೆ. ಅದಕ್ಕಾಗಿ ವಡ್ಡಾರಾಧನೆಯನ್ನು ಸಾಮಾಜಿಕ ಪರಿಕಲ್ಪನೆ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಮುಖ್ಯವಾಗಿ ರಾಜ ಮತ್ತು ಧರ್ಮ ಪ್ರಭುತ್ವಗಳ ಹಿಡಿತಕ್ಕೊಳಪಟ್ಟು, ಅದನ್ನು ಒಪ್ಪಿಕೊಂಡು ಬದುಕನ್ನು ರೂಪಿಸಿಕೊಂಡ ಸಾಮಾನ್ಯ ಜನರ ಜೀವನವನ್ನು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ.

ಒಟ್ಟು ೫ ಅಧ್ಯಾಯಗಳಲ್ಲಿ 'ವಡ್ಡಾರಾಧನೆ'ಯ ಸಾಮಾಜಿಕ ಪರಿಕಲ್ಪನೆಯನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ. ಮೊದಲನೆಯ ಅಧ್ಯಾಯ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಗೆ ಸಂಬಂಧಿಸಿದರೆ, ಎರಡನೆಯ ಅಧ್ಯಾಯ ಕವಿ-ಕೃತಿಯನ್ನು ಪರಿಚಯಿಸುತ್ತದೆ. ಅರಸರು ರಾಜಪ್ರಭುತ್ವದ ಮೂಲಕ ಗುರುತಿಸಿಕೊಂಡರೆ, ಧಾರ್ಮಿಕ ಮುಖಂಡರು ಧರ್ಮದ ಮೂಲಕ ಗುರುತಿಸಿಕೊಂಡಿದ್ದಾರೆ. ಇವು ಅಂದಿನ ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸಿದ್ದವು ಮತ್ತು ತಮ್ಮದೇ ಆದ ನಂಬಿಕೆ ಮತ್ತು ಆಚರಣೆಗಳನ್ನು ಕಟ್ಟಿಕೊಂಡು, ಯಜಮಾನಿಕೆ ವ್ಯವಸ್ಥೆಯನ್ನು ಒಪ್ಪಿಕೊಂಡು ಅಥವಾ ತಿರಸ್ಕರಿಸುತ್ತ ಸಾಮಾನ್ಯ ಜನರು ಬದುಕುತ್ತಿದ್ದರು. ಇದು ಅಂದಿನ ಸಾಮಾಜಿಕ ಚಿತ್ರಣ. 'ಸಾಮಾಜಿಕ ಪರಿಕಲ್ಪನೆ' ಎಂಬ ಮೂರನೆಯ ಅಧ್ಯಾಯದಲ್ಲಿ ರಾಜಪ್ರಭುತ್ವ, ಧರ್ಮಪ್ರಭುತ್ವ ಮತ್ತು ಅಧೀನ ಪರಿಕಲ್ಪನೆಯ ತಾತ್ವಿಕತೆಯನ್ನು ವಿವರಿಸಲಾಗಿದೆ. ನಂತರ ಅಧ್ಯಾಯದಲ್ಲಿ ಮೇಲಿನ ಮೂರು ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ವಡ್ಡಾರಾಧನೆಯ ಕಥೆಗಳನ್ನು ವಿಶ್ಲೇಷಣೆ ಮಾಡಲಾಗುವುದು. ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ವಿವರಿಸಲಾಗುವುದು.

ಅಧ್ಯಾಯ – ೨
ಕವಿ – ಕೃತಿ ಪರಿಚಯ

ವಡ್ಡಾರಾಧನೆ ಹಳಗನ್ನಡ ಸಾಹಿತ್ಯದ ಉಪಲಬ್ಧ ಗದ್ಯಕೃತಿಗಳಲ್ಲಿ ಮೊದಲನೆಯದು. ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತರು ಗದ್ಯ ಬರಹಗಾರರೆಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಆದರೆ ಅವರ ಕೃತಿಗಳು ಉಪಲಬ್ಧವಿಲ್ಲ. ಹಳಗನ್ನಡ ಸಾಹಿತ್ಯದಲ್ಲಿ ಗದ್ಯ ಬರವಣಿಗೆಗಳು ತುಂಬಾ ಕಡಿಮೆ. ಚಾವುಂಡರಾಯನ 'ತ್ರಿಷಷ್ಟಿಲಕ್ಷಣ ಮಹಾಪುರಾಣ', ಹಸ್ತಿಮಲ್ಲನ 'ಪೂರ್ವಪುರಾಣ', ಚಿಕ್ಕದೇವರಾಜ ಒಡೆಯರ 'ಚಿಕ್ಕದೇವರಾಜ ಬಿನ್ನಪ', 'ಭಾಗವತ', 'ಶೇಷಧರ್ಮ', ಚಿಕುಪಾಧ್ಯಾಯನ 'ವಿಷ್ಣುಪುರಾಣ', ದೇವಚಂದ್ರನ 'ರಾಜಾವಳಿ ಕಥಾಸಾರ', ಕೆಂಪು ನಾರಾಯಣನ 'ಮುದ್ರಾಮಂಜೂಷ', ಮುದ್ದಣ್ಣನ 'ರಾಮಾಶ್ವಮೇಧ' ಮುಂತಾದ ಕೃತಿಗಳು ಮಾತ್ರ ಗದ್ಯಕೃತಿಗಳಾಗಿವೆ. ಇವುಗಳಲ್ಲಿ ವಡ್ಡಾರಾಧನೆ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಶಿವಕೋಟ್ಯಾಚಾರ್ಯ ಬರೆದನೆಂದು ಹೇಳಲಾಗಿರುವ, 'ವಡ್ಡಾರಾಧನೆ'ಯೆಂದು ಪ್ರಚಲಿತವಾಗಿರುವ ಪ್ರಾಚೀನ ಗದ್ಯಗ್ರಂಥವು ಕನ್ನಡ ಸಾಹಿತ್ಯದ ಉತ್ಕೃಷ್ಟ ಸಾಹಿತ್ಯ ಕೃತಿಗಳಲ್ಲಿ ಒಂದಾಗಿ ಜನಪ್ರಿಯವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯ ಚಂಪೂ ಕಾವ್ಯಗಳಲ್ಲಿ ಗದ್ಯಭಾಗಗಳು ಸ್ವಲ್ಪಮಟ್ಟಿಗೆ ಕಾಣಿಸುತ್ತವೆ, ಆದರೆ ರೂಪ ರಚನೆಗಳು ಬಹುಮಟ್ಟಿಗೆ ಬೇರೆ ಬಗೆಯವು. ಈ ಕೃತಿಯು ಕನ್ನಡದಲ್ಲಿ ಗದ್ಯದ ಬೆಳವಣಿಗೆ, ಕಥಾಸಾಹಿತ್ಯ ಇವೇ ಮೊದಲಾದ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಂಡಿದೆ.

Style is the man ಎಂಬಂತೆ ಕವಿಯ ಶೀಲವನ್ನು ಪ್ರಕಟಪಡಿಸುವುದೇ ಶೈಲಿ ಎನ್ನಬಹುದು. ವಡ್ಡಾರಾಧನೆಯ ಗದ್ಯಶೈಲಿ ಇಡೀ ಕನ್ನಡ ಸಾಹಿತ್ಯದಲ್ಲೇ ವಿಶಿಷ್ಟವಾದುದು. ಸಂಸ್ಕೃತ – ಕನ್ನಡಗಳ ಸರಿಬೆರಕೆ, ದೇಸಿ–ಮಾರ್ಗಗಳ ಸಮನ್ವಯ, ಕಥನಾ ಕೌಶಲ್ಯ ಇವೇ ಮೊದಲಾದ ದೃಷ್ಟಿಯಿಂದ ಕೃತಿಯು ಮುಖ್ಯವಾಗಿದೆ.

ವಡ್ಡಾರಾಧನೆಯ ಕರ್ತೃವಿನ ವಿಚಾರ ಕುರಿತು ಕನ್ನಡ ವಿದ್ವತ್ ಲೋಕದಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಈಗ ಪ್ರಚಲಿತವಿರುವಂತೆ ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆಯೆಂದು ಕರೆಯಲಾಗುತ್ತಿದೆ. ವಡ್ಡಾರಾಧನಕಾರ ಕೃತಿಯೊಳಗೆ ಎಲ್ಲಿಯೂ ತನ್ನ ಹೆಸರು, ಕಾಲ, ಸ್ಥಳಗಳ ಬಗ್ಗೆ ಹೇಳಿಕೊಂಡಿಲ್ಲ. ಪ್ರತಿಯೊಂದು

ಕಥೆಯೂ "ಈ ಜಂಬೂದ್ವೀಪದ ಭರತಕ್ಷೇತ್ರದೊಳ್" ಎಂದು ಪ್ರಾರಂಭಗೊಂಡು, ಸಾಮಾನ್ಯವಾಗಿ "ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ" ಎಂದು ಅಂತ್ಯವಾಗುತ್ತದೆ. ಕೆಲವು ವಾಕ್ಯಗಳು, ಪದಪುಂಜಗಳು ಮತ್ತೆ ಮತ್ತೆ ಒಂದೇ ಅರ್ಥದಲ್ಲಿ ಕಾಣಿಸಿ-ಕೊಳ್ಳುತ್ತವೆ. ಇದು ವಡ್ಡಾರಾಧನೆಯ ಶೈಲಿಯ ಒಂದು ಲಕ್ಷಣ. ಸಾಮಾನ್ಯವಾಗಿ ಪ್ರತಿಯೊಂದು ಕಥೆಯಲ್ಲಿಯೂ ವಾಕ್ಯಗಳ ಪುನರುಕ್ತಿಯಿರುತ್ತದೆ. ಕಥೆಗಳ ಸ್ವರೂಪ, ಕಥನಾ ಕೌಶಲ್ಯ ಇವೆ ಮೊದಲಾದ ಕಾರಣಗಳಿಂದ ವಡ್ಡಾರಾಧನೆಯ ಎಲ್ಲ ಕಥೆಗಳ ಕರ್ತೃ ಒಬ್ಬನೆ ಎಂಬುದರಲ್ಲಿ ಅನುಮಾನವಿಲ್ಲ. ಕೆ.ಬಿ.ಪಾಠಕರು ಮೊದಲು ವಡ್ಡಾರಾಧನೆಯ ಕರ್ತೃವನ್ನು ರೇವಾಕೋಟ್ಯಾಚಾರ್ಯನೆಂದು ಕರೆದರು.[೧] ಆರ್.ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ'ಯಲ್ಲಿ ಈ ಕೃತಿಯ ಕರ್ತೃ ರೇವಾಕೋಟ್ಯಾಚಾರ್ಯ ಎಂದೇ ಹೇಳಿದ್ದಾರೆ.[೨] ಕೃತಿಯ ಅಂತ್ಯದಲ್ಲಿ ಬರುವ "ಈ ಪೇಟ್ಟಿ ಪತ್ತೊಂ[ಬ]ತ್ತು ಕಥೆಗ[ಳಂ] ಶಿವಕೋಟ್ಯಾಚಾರ್ಯರ್ ಪೇಳ್ದಾರ್" ಎಂಬ ವಾಕ್ಯವನ್ನು ಆಧಾರವಾಗಿಟ್ಟುಕೊಂಡು ಡಿ.ಎಲ್.ನರಸಿಂಹಾಚಾರ್ ಅವರು ವಡ್ಡಾರಾಧನೆಯ ಕರ್ತೃ ಶಿವಕೋಟ್ಯಾಚಾರ್ಯ ಎಂದು ಹೇಳುತ್ತಾರೆ.[೩] ಆದರೆ ಇವರ ಅಭಿಪ್ರಾಯಕ್ಕೆ ಡಾ. ಉಪಾಧ್ಯೆಯವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕೃತಿಯ ಅಂತ್ಯದಲ್ಲಿ ಬರುವ ವಾಕ್ಯದಲ್ಲಿನ ಶಿವಕೋಟ್ಯಾಚಾರ್ಯ ಎಂಬ ಹೆಸರು ಕನ್ನಡ ಕೃತಿಯ ಕರ್ತೃವಿನ ಹೆಸರಲ್ಲ, ಅದು ಪ್ರಾಕೃತ ಗ್ರಂಥ 'ಭಗವತೀ ಆರಾಧನಾ'ವನ್ನು ಬರೆದ ಶಿವಕೋಟಿಯನ್ನು ಹೇಳುತ್ತದೆಂದು ಅಭಿಪ್ರಾಯಪಟ್ಟರು.[೪] ಇವರ ಅಭಿಪ್ರಾಯಗಳನ್ನು ಡಿ.ಎಲ್.ನರಸಿಂಹಾಚಾರ್ ಅವರು ಪರಿಶೀಲಿಸಿ ಇಬ್ಬರು ಶಿವಕೋಟಿಯನ್ನು ಮುಖ್ಯವಾಗಿ ಗುರುತಿಸುತ್ತಾರೆ. ಒಬ್ಬ ಸಮಂತಭದ್ರನ ಶಿಷ್ಯ, ಮತ್ತೊಬ್ಬ 'ಭಗವತೀ ಆರಾಧನ'ದ ಕರ್ತೃ. ಡಿ.ಎಲ್.ನರಸಿಂಹಾಚಾರ್ ಅವರು ಇವರಿಬ್ಬರು ಪ್ರಾಚೀನ ಕಾಲಕ್ಕೆ ಸೇರಿದವರು ಹಾಗಾಗಿ ಇವರು ವಡ್ಡಾರಾಧನೆಯ ಕರ್ತೃಗಳಲ್ಲ. "ಮೂರನೆಯ ಶಿವಕೋಟಿ ಅದರ ಕರ್ತೃವಾಗಿದ್ದಿರಬಹುದಾದ ಸಂಭವವಿದೆ. ಇಲ್ಲದಿದ್ದರೆ ವಡ್ಡಾರಾಧನೆಯ ರಚಕನಾದವನು ಬೇರೊಬ್ಬ ಶಿವಕೋಟಿಯಾಗಿದ್ದನೆಂದು ಹೇಳ-ಬೇಕಾಗುತ್ತದೆ. ಒಟ್ಟಿನಲ್ಲಿ ಈ ಕನ್ನಡ ಗ್ರಂಥದ ಹೆಸರು ವಡ್ಡಾರಾಧನೆಯೆಂದೂ, ಅದನ್ನು ಹೇಳಿದವನು ಶಿವಕೋಟಿಯೆಂದು ಸದ್ಯಕ್ಕೆ ನಿರ್ಣಯಿಸಬಹುದು."[೫]

ರಾಮಚಂದ್ರ ಮುಮುಕ್ಷುವಿನ 'ಪುಣ್ಯಾಸ್ರವಕಥಾಕೋಶ'ದಿಂದ ಕನ್ನಡದಲ್ಲಿ ಭ್ರಾಜಿಷ್ಣುವಿನ ಟೀಕೆಯೊಂದಿತ್ತು ಎಂದು ತಿಳಿದುಬರುತ್ತದೆ. "ಕನ್ನಡ ವಡ್ಡಾರಾಧನೆಯೂ

ಭ್ರಾಜಿಷ್ಣುವಿನ ಆರಾಧನಾ ಕರ್ಣಾಟ ಟೀಕೆಯ ಕವಚವೆಂಬ ಒಂದು ಅಧಿಕಾರವಾಗಿರಬಹುದು ಅದರಿಂದ ಕನ್ನಡ ವಡ್ಡಾರಾಧನೆಯೆಂದು ಈಗ ನಾವು ಕರೆಯುವ ಗ್ರಂಥದ ಕರ್ತೃ ಈ ಭ್ರಾಜಿಷ್ಣುವೇ ಎಂಬ ಸೂಚನೆಯಿದೆ"[೬] ಎಂದು ಡಾ. ಹಂಪ ನಾಗರಾಜಯ್ಯನವರು ಹೇಳುತ್ತಾರೆ. ವಡ್ಡಾರಾಧನೆಯ ಕರ್ತೃ ಭ್ರಾಜಿಷ್ಣು ಎಂದು ಖಚಿತವಾಗಿ ಹೇಳಲು ಸ್ಪಷ್ಟ ಆಧಾರಗಳಿಲ್ಲ.

ಸದ್ಯದ ಮಟ್ಟಿಗೆ ಡಿ.ಎಲ್.ನರಸಿಂಹಾಚಾರ್ ಅವರ ಅಭಿಪ್ರಾಯ ಕನ್ನಡ ಸಾಹಿತ್ಯ ಸಂಶೋಧನೆಯ ವಲಯದಲ್ಲಿ ಹೆಚ್ಚು ಒಪ್ಪಿತವಾಗಿದೆ.

ವಡ್ಡಾರಾಧನೆಯ ಕರ್ತೃ ಕರ್ನಾಟಕಕ್ಕೆ ಸಂಬಂಧಿಸಿದವನು ಎಂದು ಹೇಳಬಹುದು. ಬಳ್ಳಾರಿಯ ಕೋಗಳಿ ಪ್ರದೇಶ ಈತನಿಗೆ ಹೆಚ್ಚು ಪರಿಚಯವಿದ್ದಂತೆ ಕಾಣುತ್ತದೆ. ಕಾರ್ತಿಕ ಋಷಿಯ ಕಥೆಯಲ್ಲಿ ಕೋಗಳಿಗೆ ಸಂಬಂಧಿಸಿದಂತೆ ಅನೇಕ ಮಾಹಿತಿಗಳು ದೊರೆಯುತ್ತವೆ. ಇವುಗಳ ಆಧಾರದ ಮೇಲೆ ಡಿ.ಎಲ್.ನರಸಿಂಹಾಚಾರ್ ಸೇರಿದಂತೆ ಅನೇಕ ವಿದ್ವಾಂಸರು ವಡ್ಡಾರಾಧನಕಾರ ಬಳ್ಳಾರಿ ಜಿಲ್ಲೆಯ ಕೋಗಳಿಯವನಿರಬೇಕೆಂದು ಹೇಳಿದ್ದಾರೆ.

ವಡ್ಡಾರಾಧನೆಯ ಕರ್ತೃ ಜೈನಧರ್ಮಕ್ಕೆ ಸೇರಿದವನೆಂಬುದರಲ್ಲಿ ಯಾವುದೇ ಅನುಮಾನವಿಲ್ಲ, ಆದರೆ ಯಾವ ಪಂಥಕ್ಕೆ ಸೇರಿದವನೆಂಬುದರಲ್ಲಿ ಚರ್ಚೆಗಳಿವೆ. ಹಂಪನಾಗರಾಜಯ್ಯ ಮುಂತಾದವರು ಯಾಪನೀಯ ಪಂಥದವನೆಂದು, ಕೆಲವರು ದಿಗಂಬರ ಪಂಥದವನೆಂದು ಹೇಳುತ್ತಾರೆ.

ವಡ್ಡಾರಾಧನೆಯ ಕಾಲವೂ ಕೂಡ ಬಹಳ ಚರ್ಚಿತವಾಗಿದೆ. ವಡ್ಡಾರಾಧನೆಯ ಕರ್ತೃ ರಾಜಾಶ್ರಯದಲ್ಲಿದ್ದಂತೆ ಕಾಣುವುದಿಲ್ಲ. ಮತ್ತು ಕೃತಿಯಲ್ಲಿಯೂ ಕಾಲವಿಚಾರವನ್ನು ಹೇಳಿಲ್ಲ. ಆದ್ದರಿಂದ ಕಾಲವನ್ನು ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲ. ಕೃತಿಯ ಭಾಷಾ ಸ್ವರೂಪದ ಆಧಾರದ ಮೇಲೆ ಈ ಕೃತಿಯು ೧೦ನೆಯ ಶತಮಾನದಲ್ಲಿ ರಚನೆಯಾಗಿದೆ ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ.

೧೯ ಕಥೆಗಳನ್ನು ಒಳಗೊಂಡ ಈ ಕಥಾಸಂಗ್ರಹ ವಡ್ಡಾರಾಧನೆಯೆಂದು ಪ್ರಸಿದ್ಧವಾಗಿದೆ. ಆದರೆ ಕೃತಿಯ ಹೆಸರಿನ ಬಗ್ಗೆಯು ಸಾಕಷ್ಟು ಅಭಿಪ್ರಾಯಗಳು ಇವೆ. ೧೮೮೩ ರಲ್ಲಿ ಕೆ.ಬಿ.ಪಾಠಕರು ಈ ಕೃತಿಯನ್ನು 'ಉಪಸರ್ಗ ಕೇವಲಿಗಳ ಕಥೆ' ಎಂದು ಮೊದಲು ಗುರುತಿಸಿದರು. ಡಿ.ಎಲ್.ನರಸಿಂಹಾಚಾರ್ ಅವರು ೬ ಹಸ್ತಪ್ರತಿಗಳ

ಆಧಾರದಿಂದ ಈ ಕೃತಿಯ ಹೆಸರು 'ವಡ್ಡಾರಾಧನೆ' ಎಂದು ನಿರ್ಣಯಿಸಿದರು. ಈ ಹೆಸರನ್ನೇ ಶಾಶ್ವತವಾಗಿ ನೆಲೆಗೊಳಿಸಿದರು. ಕೃತಿಯ ಶೀರ್ಷಿಕೆಗೆ ಸಂಬಂಧಿಸಿದಂತೆ 'ಕವಚದ ಕಥೆಗಳು', 'ಮಹಾಪುರುಷರ್ಕಳ ಕಥೆ' ಎಂಬ ಇತರ ಅಭಿಪ್ರಾಯಗಳು ಇವೆ.

'ವಡ್ಡಾರಾಧನೆ' ೧೯ ಜೈನ ಧಾರ್ಮಿಕ ಕಥೆಗಳ ಒಂದು ಸಂಗ್ರಹ. 'ವಡ್ಡ' ಎಂದರೆ ಹಿರಿಯರಾದವರು, ಪೂಜ್ಯರಾದವರು ಎಂದರ್ಥ. 'ಆರಾಧನೆ' ಎಂದರೆ ಸಮ್ಯಗ್ದರ್ಶನ, ಸಮ್ಯಜ್ಞಾನ, ಸಮ್ಯಕ್ಚಾರಿತ್ರ, ಸಮ್ಯಕ್ತಪಸ್ಸು ಎಂಬ ನಾಲ್ಕನ್ನು ಸಾಧಿಸುವುದನ್ನು ಬೋಧಿಸುವುದು ಎಂದರ್ಥ. ದರ್ಶನ, ಜ್ಞಾನ, ಚಾರಿತ್ರ, ತಪಸ್ಸು ಈ ನಾಲ್ಕನ್ನು ಯಥಾಯೋಗ್ಯ ರೀತಿಯಿಂದ ದೃಢವಾಗಿ ಆಮರಣ ಪಾಲಿಸುವುದು ಆರಾಧನೆಯಾಗಿದೆ.[೭] ಇವು ಜೈನಯತಿಗಳ ಆದರ್ಶ ಸಾಧನೆಯ ಅಂಶಗಳು. ವಡ್ಡಾರಾಧನೆಯು ಇಂಥ ಸಾಧಕರ ಚಿತ್ರಣವೇ ಆಗಿದೆ. ಪ್ರತಿ ಕಥೆಯ ಕಟ್ಟಡಕ್ಕೆ ಅಡಿಪಾಯ ಒಂದೇ. ಅಪಾರ ವೇದನೆಯನ್ನು ಸಹಿಸಿ ಉತ್ತಮ ಸದ್ಗತಿಯನ್ನು ಪಡೆಯುವುದು. ಮುಖ್ಯವಾಗಿ ಇವು ಮರಣ ಮೀಮಾಂಸೆಯ ಕಥೆಗಳು.

"ವಡ್ಡಾರಾಧನೆಯಲ್ಲಿಯ ೧೯ ಕಥೆಗಳು ಕ್ರಿ.ಶ. ೧ನೆಯ ಶತಮಾನದ ಶಿವಕೋಟ್ಯಾಚಾರ್ಯರ ಅಥವಾ ಶಿವಾರ್ಯರ ಭಗವತೀ ಆರಾಧನಾದಲ್ಲಿಯ ೧೯ ಗಾಹೆಗಳ ಮೇಲೆ ಆಧಾರವಾಗಿವೆ."[೮] ಭಗವತೀ ಆರಾಧನಾದಲ್ಲಿ ಬರುವ ಗಾಹೆಗಳಲ್ಲಿ ಸೂಚಿತವಾಗುವ ಕಥೆಗಳನ್ನು ಸಂಸ್ಕೃತದಲ್ಲಿ ಹರಿಷೇಣನು 'ಬೃಹತ್ಕಥಾಕೋಶ' ದಲ್ಲಿ ವಿಸ್ತರಿಸಿದನು. "ಇದರಲ್ಲಿ ಬರುವ ಕಥಾಸಂಖ್ಯೆ ೧೨೬ – ೧೪೪ ರವರೆಗಿನ ಹತ್ತೊಂಬತ್ತು ಕಥೆಗಳು ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಲ್ಲಿ ಬರುತ್ತವೆ."[೯]

ಶಾಸನಗಳಿಂದ ಸಾಹಿತ್ಯದವರೆಗೂ ಸಂಸ್ಕೃತ ಪ್ರಚುರವಾದ ಕಾಲದಲ್ಲಿ ವಡ್ಡಾರಾಧನೆಯು ಸಂಸ್ಕೃತ–ಕನ್ನಡದ ಹಿತಿಮಿತ ಸಮ್ಮಿಳನವನ್ನು ಸಾರುವ ಗದ್ಯಶೈಲಿಯಿಂದ ನಿರ್ಮಾಣವಾಗಿದೆ. ಕನ್ನಡ ಸಾಹಿತ್ಯದಲ್ಲೇ ಅಪೂರ್ವವಾಗಿದೆ. ಮತ್ತು ದೇಸೀಯ ಬಳಕೆಯು ಮಿಗಿಲಾಗಿದೆ. ಸಂಸ್ಕೃತವನ್ನು ಮೊದಲ ಸ್ಥಾನಕ್ಕೆ ಬಿಡದೆ ಕನ್ನಡದ ಜಾಯಮಾನಕ್ಕೆ ಊನಬರದಂತೆ ಅಲ್ಲಲ್ಲಿ ಸಂಸ್ಕೃತವನ್ನು ಸೇರಿಸಿಕೊಂಡು ದೇಸಿ ಚೆಲುವನ್ನು ಮೆರೆಸಿದ್ದಾನೆ ವಡ್ಡಾರಾಧನಕಾರ.

'ವಡ್ಡಾರಾಧನೆ' ಜೈನಧರ್ಮಕ್ಕೆ ಸೇರಿದ ಕೃತಿ. ವಡ್ಡಾರಾಧನಕಾರ ಕಥೆಯನ್ನು ಹೇಳುವಾಗಲೇ ಓದುಗನಿಗೆ ಅರಿವಾಗದಂತೆ ಧರ್ಮ ಸಂಬಂಧದ ಸಂಗತಿಗಳನ್ನು

ಹೇಳುತ್ತದೆ. ಕೃತಿಯ ಧಾರ್ಮಿಕ ಚೌಕಟ್ಟು ಬಹಳ ಸರಳ. ಮನುಷ್ಯನಿಗೆ ಪಾಪದ ಫಲವಾಗಿ ನರಕ, ಪುಣ್ಯದ ಫಲವಾಗಿ ಸ್ವರ್ಗ ಪ್ರಾಪ್ತಿಯಾಗುತ್ತದೆ. ಕಥೆಯಲ್ಲಿ ಸ್ವರ್ಗ ದೊರೆತಾಗ ಸುಖ-ಭೋಗಗಳ ವರ್ಣನೆಯೂ, ನರಕ ಪ್ರಾಪ್ತಿಯಾದಾಗ ದಂಡನೆ, ನೋವು, ಸಂಕಟಗಳ ಚಿತ್ರಣ ನಿರೂಪಿತಗೊಳ್ಳುತ್ತದೆ. ಪಾಪಕರ್ಮದ ಫಲದಿಂದ ಹೀನ ಜನ್ಮಗಳು ಪ್ರಾಪ್ತಿಯಾಗುತ್ತವೆ.

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಪಂಚಾಣುವ್ರತಗಳ ವಿಚಾರಗಳು ಕಥೆಗಳಲ್ಲಿ ಪದೇ ಪದೇ ಕಾಣಿಸುತ್ತವೆ. ಇವು ಗೃಹಸ್ಥರು ಆಚರಿಸುವ ಅಣುವ್ರತಗಳು. ಇದೇ ವ್ರತಗಳನ್ನು ಮುನಿಗಳು ಆಚರಿಸಿದರೆ ಅದು ಮಹಾವ್ರತ. ಈ ಆಚರಣೆಯಿಂದ ಮುನಿಗಳು ವಿರಕ್ತ ಜೀವನದ ತುತ್ತತುದಿ ತಲುಪುತ್ತಾರೆ. ವ್ರತಚಾರಿತ್ರ್ಯದಲ್ಲಿ ಒಂದೆಡೆ ಮುನಿಗಳಿದ್ದರೆ, ಮತ್ತೊಂದೆಡೆಯಲ್ಲಿ ಪ್ರಭುಗಳಿದ್ದಾರೆ. ಪ್ರಭುಗಳದ್ದು ಭೋಗಜೀವನದ ತುತ್ತತುದಿಯಾಗಿರುತ್ತದೆ. ವಡ್ಡಾರಾಧನೆಯ ಕಥೆಗಳಲ್ಲಿ ಪ್ರಭುಗಳಿಗಿಂತ ಮುನಿಗಳೆ ದೊಡ್ಡವರು. ಆದರೆ ಕಥೆಗಳಲ್ಲಿ ನಿರ್ಮಾಣವಾಗಿರುವ ಧಾರ್ಮಿಕ ಚೌಕಟ್ಟು ಲೌಕಿಕ ಜೀವನವನ್ನೇ ವಿರೋಧಿಸುತ್ತದೆ.

ವಡ್ಡಾರಾಧನೆಯು ಧಾರ್ಮಿಕ ಕೃತಿಯಾದರೂ ಅಂದಿನ ಬದುಕನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಿದ್ದ ಸಾಮಾಜಿಕ ವ್ಯವಸ್ಥೆ, ನಂಬಿಕೆ, ಆಚರಣೆ, ಹಬ್ಬಗಳು, ವಿವಿಧ ವೃತ್ತಿಗಳು, ಹೆಣ್ಣು-ಗಂಡಿನ ಸ್ಥಿತಿಗತಿಗಳು, ವಂಚನೆ, ಮಾನವೀಯತೆ, ಭಕ್ತಿ ಮೊದಲಾದವುಗಳು ಕಥೆಗಳಲ್ಲಿ ಅನಾವರಣಗೊಂಡಿವೆ. ಒಟ್ಟಾರೆಯಾಗಿ ವಡ್ಡಾರಾಧನೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಅಧ್ಯಯನಕ್ಕೆ ಮುಖ್ಯ ಆಕರವಾಗಿದೆ.

ವಡ್ಡಾರಾಧನೆ ಭಾಷೆಯು ಪೂರ್ವದ ಹಳಗನ್ನಡ ಪ್ರಯೋಗಗಳಿಂದ ಕೂಡಿದೆ. ವಡ್ಡಾರಾಧನೆಯಲ್ಲಿರುವ ಆಡುಮಾತಿನ ಸೊಗಸು ಮತ್ತು ಧ್ವನಿ ಆ ಕಾಲದ ಕನ್ನಡ ಭಾಷಾ ಪ್ರಯೋಗದ ಕಡೆಗೆ ಕರೆದುಕೊಂಡು ಹೋಗುತ್ತದೆ. "ಕೊಯ್‌ತಲೆಯ ಧಮಾನೀಚಾ ಸ್ವಾಮಿಯನಿಂತೆಂಬಾ", "ಏನೆಯ್ಯ ಅರಸರ ವಾರಕದ ಮಾಣಿಕ-ದುಂಗುರಮಂ ಕಿಡಿಸಿ ಬಂದಿರೆ" ಎಂಬ ಮಾತುಗಳು ಆ ಕಾಲದ ದೇಸಿ ಭಾಷೆಗೆ ಹಿಡಿದ ಕನ್ನಡಿಯಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯ ಜನಭಾಷೆ ಸರಳವೂ ಧ್ವನಿ ಪೂರ್ಣವೂ ಆಗಿ ಸದಾಕಾಲ ಮುಂದುವರಿದುಕೊಂಡು ಬರುತ್ತಿತ್ತು ಎಂಬುದು.

ವಡ್ಡಾರಾಧನೆ ವಿಶಿಷ್ಟವಾದ ಕಥನ ತಂತ್ರವನ್ನು ಒಳಗೊಂಡಿದೆ. ಸಂಭಾಷಣೆ-ಯನ್ನು ತಕ್ಕ ರೀತಿಯಲ್ಲಿ ಉಪಯೋಗಿಸಿಕೊಂಡು, ಹಿತಮಿತವಾದ ವರ್ಣನೆಗಳಿಂದ ಕಥೆ ಹೇಳುತ್ತಾನೆ ವಡ್ಡಾರಾಧನೆಕಾರ. ವಡ್ಡಾರಾಧನೆ ಹರಿಷೇಣನ ಕಥಾಕೋಶದಲ್ಲಿ ಕಂಡುಬರುವ ಕಥಾನಕದ ಸ್ಥೂಲ ಸಾಮಗ್ರಿಯಲ್ಲಿ, ಭಾವ ಮತ್ತು ವಾಕ್ಯಗಳಲ್ಲಿ ನಿಕಟವಾಗಿ ಹೋಲುವುದಾದರೂ ಕೆಲವು ಕಡೆ ವ್ಯತ್ಯಾಸಗಳಿಂದ ತನ್ನತನವನ್ನು ಮೆರೆಯುತ್ತದೆ. ಧರ್ಮವನ್ನು ಮುಖ್ಯವಾಗಿಟ್ಟುಕೊಂಡು ಕೃತಿರಚನೆಯಾಗಿದ್ದರೂ ಕೃತಿಯಲ್ಲಿ ಸಾಮಾಜಿಕ ಚಿತ್ರಣವೂ, ಇತರ ವಿವರಣೆಯು ಕಂಡು ಬರುತ್ತದೆ. ಧರ್ಮ ಬೋಧನೆಯ ಸಂದರ್ಭದಲ್ಲಿ ಕಥನಕಾರ ದುರ್ಬಲನಾಗುತ್ತಾನೆ. ಆದರೆ ಕಥೆಯನ್ನು ಹೇಳುವಾಗ ನಮ್ಮ ಆಸಕ್ತಿಯನ್ನು ಕೆರಳಿಸಿ ಮುಂದೆ ಮುಂದೆ ಸಾಗುವಂತೆ ಕರ್ತೃಮಾಡಿದ್ದಾನೆ. ವಡ್ಡಾರಾಧನೆ ವಸ್ತುನಿಷ್ಠವಾದ ಕೃತಿ. ವಡ್ಡಾರಾಧನೆಕಾರ ಸಮಕಾಲೀನ ಅನುಭವಗಳನ್ನು ಕಥೆಯೊಡನೆ ಕಸಿಮಾಡಿಕೊಂಡು ಹೇಳಿರುವುದನ್ನು ತೌಲನಿಕ ವಿಧಾನದಿಂದ ತಿಳಿಯಬಹುದಾಗಿದೆ.

ವಡ್ಡಾರಾಧನೆಯ ಪ್ರತಿಯೊಂದು ಕಥೆಯು ಜನಪದ ಕಥೆಯ ಚೌಕಟ್ಟನ್ನು ಒಳಗೊಂಡಿದೆ. ಪ್ರತಿಯೊಂದು ಕಥೆಯು ಬೇರೆ ರೀತಿಯ ಆರಂಭವನ್ನು ಪಡೆಯದೆ "ಈ ಜಂಬೂದ್ವೀಪದ ಭರತಕ್ಷೇತ್ರದೊಳ್..........ಯೆಂಬುದು ನಾಡಲ್ಲಿ..............ಯೆಂಬುದು ಪೊಟಲ್" ಎಂದು ಅನಾವರಣಗೊಳ್ಳುತ್ತದೆ. ಪ್ರತಿ ಕಥೆಯು ವೈವಿಧ್ಯದ ಕಡೆಗೆ ಗಮನಕೊಡದೆ, ಉದ್ದೇಶದ ಕಡೆಗೆ ಮುಖಮಾಡುತ್ತದೆ.

ವಡ್ಡಾರಾಧನೆ ಜೈನಧಾರ್ಮಿಕ ಗ್ರಂಥವಾಗಿರುವುದರಿಂದ, ಆ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ಬರುತ್ತವೆ. ಕಥೆಯಲ್ಲಿನ ವರ್ತಕರು, ಅರಸರು ತಾವು ಮಾಡಿದ ಪಾಪವನ್ನು ತಿಳಿದು, ಅದನ್ನು ಕಳೆದುಕೊಳ್ಳಲು ಜೈನಧರ್ಮಕ್ಕೆ ಬರುವರು. (ನಯಸೇನನ 'ಧರ್ಮಾಮೃತಂ'ನಲ್ಲಿ ವೇಶ್ಯರ, ವರ್ತಕರ ಚಿತ್ರಗಳು ಕಂಡು ಬರುತ್ತದೆ. ಇದರಿಂದ ಕನ್ನಡ ಸಾಹಿತ್ಯದಲ್ಲಿ ವರ್ತಕರಿಗೆ, ವೇಶ್ಯರಿಗೆ ಸಂಬಂಧಿಸಿದ ಕಥೆಯ ಬೆಳವಣಿಗೆ ಕಾಣಬಹುದು)

ವಡ್ಡಾರಾಧನೆಯು ಜೈನಧರ್ಮ ಸಮಾಜದ ಎಲ್ಲಾ ವರ್ಗದ ಜನತೆಗೂ ಸ್ವಾಗತವನ್ನು ನೀಡುತ್ತಿತ್ತು ಎಂಬುದನ್ನು ತಿಳಿಸುತ್ತದೆ. ಅಣ್ಣಿಕಾಪುತ್ರನ ಕಥೆಯಲ್ಲಿ ಜೈನಧರ್ಮ ಎಲ್ಲಾ ವರ್ಗದವರಿಗೂ ಸಲ್ಲುವಂತದ್ದು ಎಂಬ ಒಳದನಿಯನ್ನು

ಕಾಣಬಹುದು. ಹಾಗೆಯೇ ಜೈನಯತಿಗಳು ಹೊಲತಿಗೂ, ಸೌದೆ ಮಾರಿ ಜೀವಿಸುತ್ತಿದ್ದ ಅನಾಮಧೆಯರನ್ನು ಮಹಾಪುರುಷರನ್ನಾಗಿ ಮಾಡುತ್ತಿದ್ದರು ಮತ್ತು ಸಂಸಾರದ ಅನಿಶ್ಚಿತತೆಯಲ್ಲಿ ನಶ್ವರತೆಯನ್ನು ಉಲ್ಕಾಪಾತ, ಕರಗುವ ಮೋಡ ಇಂತಹ ದೃಶ್ಯಗಳನ್ನು ನೋಡಿ ವೈರಾಗ್ಯ ಹೊಂದುವುದರಲ್ಲಿ ಕೃತಿಕಾರ ಧ್ವನಿಸುತ್ತಾನೆ.

ಒಂದು ಸಮಾಜದ ಉತ್ತಮ ನಿಯಮಗಳು, ಸಾಮಾಜಿಕ ನಡವಳಿಕೆಯನ್ನು ಉತ್ತಮ ರೀತಿಯಲ್ಲಿ ನಡೆಸುತ್ತವೆ ಮತ್ತು ನಿಯಮಗಳ ಉಲ್ಲಂಘನೆ ಅಹಿತಕರ ಸ್ಥಿತಿಯನ್ನು ನಿರ್ಮಾಣ ಮಾಡಬಲ್ಲದು ಎಂಬುದನ್ನು ಕಾರ್ತಿಕ ಋಷಿಯ ಕಥೆಯಿಂದ ತಿಳಿಯಬಹುದು. ಅಗ್ನಿರಾಜ ತನ್ನ ಕಿರಿಯ ಮಗಳ ರೂಪ, ತೇಜ ಕಂಡು ಆಕೆಗೆ ಬಯಸಿದ್ದು ಸಾಮಾಜಿಕ ವಿರೋಧದ ಚಿತ್ರವಾಗಿದೆ. ಇದರಿಂದ ಅಲ್ಲಿನ ಪ್ರಜೆಗಳು ಅದನ್ನು ಪಾಲಿಸಿದ್ದರಿಂದ ಆ ಊರಿಗೆ 'ಕೃತ್ತಿಕಾಪುರ' ಎಂಬ ಹೆಸರು ಹೋಗಿ 'ಭೋಗಂಕಾರೋಹಣ' ಎಂದು ಹೆಸರು ಬರುವುದು ಮತ್ತು ಪ್ರತಿಯೊಂದು ಕಥೆಯು ಜೈನಧರ್ಮದ ಅಹಿಂಸೆ, ಅಸ್ತೇಯ, ಸತ್ಯ, ಬ್ರಹ್ಮಚರ್ಯ, ಅಪರಿಗ್ರಹ – ಈ ಐದು ವ್ರತಗಳಲ್ಲಿ ಒಂದನ್ನಾದರೂ ಪ್ರತಿಪಾದಿಸುತ್ತದೆ. ಈ ವ್ರತಗಳನ್ನು ಮಹೇಂದ್ರ ದತ್ತಾಚಾರ್ಯರ ಮೊದಲಾದ ಅಯ್ಯೂರ್ವರ್ ರಿಸಿಯರ್ಕಳ ಕಥೆಯಲ್ಲಿ ಕಾಣಬಹುದು ಮತ್ತು ಮನುಷ್ಯನ ಸ್ಥಾಯಿಗುಣವಾದ ಮತ್ಸರ, ಕ್ರೋಧದಿಂದ ಉಂಟಾಗುವ ಅನಾಹುತಗಳನ್ನು ತಿಳಿಸುತ್ತದೆ. ಸಂಭಾಷಣೆಯನ್ನು ತಕ್ಕ ರೀತಿಯಲ್ಲಿ ಉಪಯೋಗಿಸಿಕೊಂಡು ಹಿತಮಿತವಾದ ವರ್ಣನೆಗಳಿಂದ ಕೂಡಿದ ಕಥೆಗೆ ಈ ಮೇಲಿನ ಕಥೆಯು ಉತ್ತಮ ಉದಾಹರಣೆ. ಕಥೆಯಲ್ಲಿ ಉಪಕಥೆಗಳು ಬಂದಿರದಿದ್ದರೂ, ಘಟನೆಗಳಿಂದ ವಿಸ್ತರಣೆಯನ್ನು ಪಡೆದಿದೆ. ಇದು ವರ್ಣನಾತ್ಮಕ ಕಥೆಯಾಗಿರದೆ ಘಟನಾತ್ಮಕ ಕಥೆಯಾಗಿದೆ.

ವಡ್ಡಾರಾಧನಕಾರನು ಎರಡು ರೀತಿಯ ಕಥೆಗಳನ್ನು ಹೇಳುವನು.

೧.ಉಪಕಥೆಗಳನ್ನು ಒಳಗೊಂಡ ಕಥೆ. ೨. ಉಪಕಥೆಗಳನ್ನು ಹೊಂದಿರದ ಕಥೆ. ಉದಾಹರಣೆಗೆ ಸುಕುಮಾರಸ್ವಾಮಿಯ ಕಥೆ ಉಪಕಥೆಗಳನ್ನು ಒಳಗೊಂಡ ಕಥೆಯಾದರೆ ಕಾರ್ತಿಕ ಋಷಿಯ ಕಥೆ ಉಪಕಥೆಗಳನ್ನು ಹೊಂದಿರದ ಕಥೆಯಾಗಿದೆ. ಕಥೆಯ ಹೇಳಿಕೆಯಲ್ಲೆ ಇತರ ಧರ್ಮಗಳನ್ನು ಭಂಜಿಸುವುದು ಗೋಚರಿಸುತ್ತದೆ.

ವಡ್ಡಾರಾಧನೆಯು ತನ್ನ ಕಾಲದ ರಾಜ್ಯದಲ್ಲಿ ಬಾಲ್ಯವಿವಾಹ, ಕಂಕಣಕಟ್ಟುವುದು ಈ ರೀತಿಯ ಮದುವೆಯ ಚಿತ್ರವನ್ನು ಒಳಗೊಂಡಿದೆ ಮತ್ತು ಚಾಣಕ್ಯರಿಸಿಯ ಕಥೆಯಲ್ಲಿ ಪುನರ್ವಿವಾಹವನ್ನು ನೋಡಬಹುದು.

ಕಥೆಯ ನಿರೂಪಣೆಯಲ್ಲಿ ಮನುಷ್ಯ ಸ್ವಭಾವದ ಸೂಕ್ಷ್ಮಗಳನ್ನು ಕಥೆಗಾರ ನೀಡುತ್ತಾನೆ. ಉದಾ: ಸುಕುಮಾರಸ್ವಾಮಿಯ ಕಥೆಯಲ್ಲಿ ಮಂತ್ರಿಯ ಮಕ್ಕಳಾದ ವಾಯುಭೂತಿ ಮತ್ತು ಅಗ್ನಿಭೂತಿಯನ್ನು ಕರೆಯಿಸಿ ರಾಜ ನಿಮ್ಮ ಪಾಂಡಿತ್ಯವೇನೆಂದು ಕೇಳಿದಾಗ "ಅವರ್ಗ್ಗಳ್ ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ"[೧೦] ಇಂತಹ ಬರವಣಿಗೆಯಲ್ಲಿ ಮನುಷ್ಯ ಸ್ವಭಾವ ಕಣ್ಣಿಗೆ ಕಟ್ಟುತ್ತದೆ ಮತ್ತು ಅಂದು ಇದ್ದಂತಹ ಶಿಕ್ಷಣದ ವ್ಯವಸ್ಥೆ, ವ್ಯಾಪಾರಗಳ ಚಿತ್ರಣವೂ ಕಥೆಯಲ್ಲಿ ದೊರೆಯುತ್ತದೆ.

ಹೀಗೆ ವಡ್ಡಾರಾಧನಕಾರ ಕೃತಿಯಲ್ಲಿ ಧರ್ಮವನ್ನು ಕೇಂದ್ರವಾಗಿ ಇಟ್ಟುಕೊಂಡು ಕಥೆಯನ್ನು ನಿರೂಪಿಸಿದರೂ, ಜೊತೆಗೆ ಅಂದಿನ ಸಾಮಾಜಿಕ ಜೀವನವನ್ನು ಮೇಳವಿಸಿ ಹೇಳಿರುವುದು ಕಂಡು ಬರುತ್ತದೆ. ಕೃತಿಯಲ್ಲಿ ಗ್ರಾಮೀಣ ಜೀವನ ಚಿತ್ರಣಕ್ಕಿಂತಲೂ ನಗರ ಜೀವನದ ಚಿತ್ರಣ ಹೆಚ್ಚು ಕಂಡುಬರುತ್ತದೆ. ರಾಜ, ಮಹಾರಾಜ, ಸಾಮಂತ, ಮಹಾಸಾಮಂತ, ಪ್ರಧಾನಮಂತ್ರಿ, ಎರಡನೇ ಮಂತ್ರಿ, ಪುರೋಹಿತ, ರಾಜಶ್ರೇಷ್ಠ ಇವರುಗಳ ವಿಚಾರವೇ ಹೆಚ್ಚು ಚಿತ್ರಣಗೊಂಡಿದೆ ಜನಪದ ಶೈಲಿಯಲ್ಲಿ ಕತೆ ಹೇಳುವ ವಡ್ಡಾರಾಧನಕಾರ ಎಲ್ಲಾ ಕಥೆಗಳಲ್ಲೂ ದೇಶ, ಪಟ್ಟಣ, ರಾಜ, ರಾಣಿ, ಮಂತ್ರಿ, ಪುರೋಹಿತರ ಪ್ರಸ್ತಾಪಮಾಡುತ್ತಾನೆ.

ಕೊನೆಟಿಪ್ಪಣಿಗಳು

೧. ಡಿ.ಎಲ್.ಎನ್ ಅವರ ಆಯ್ದಲೇಖನಗಳು, ಸಂ : ಕಮಲಾ ಹಂಪನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೩, ಪು. ೨೪.

೨. ಆರ್.ನರಸಿಂಹಾಚಾರ್, ಕರ್ಣಾಟಕ ಕವಿಚರಿತೆ ಪ್ರಥಮ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫, ಪು. ೩೧೬.

೩. ಡಿ.ಎಲ್.ಎನ್ ಅವರ ಆಯ್ದಲೇಖನಗಳು, ಸಂ: ಕಮಲಾ ಹಂಪನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೮೩, ಪು. ೫೮ – ೫೯.

೪. ಅದೇ, ಪು. ೬೪ – ೬೫.

೫. ಅದೇ, ಪು. ೭೨ – ೭೩.

೬. ಡಾ. ಹಂಪನಾಗರಾಜಯ್ಯ, ವಡ್ಡಾರಾಧನೆ : ಸಮಗ್ರ ಅಧ್ಯಯನ, ಸಿ.ಪಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯, ಪು. ೫೦.

೭. ಜೈನ ಪಾರಿಭಾಷಿಕ ಪದವಿವರ ಕೋಶ, ಸಂ : ಡಾ.ಸರಸ್ವತಿ ವಿಜಯಕುಮಾರ್ ಮತ್ತು ಬಾ.ವೇ.ಶ್ರೀಧರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೦೬, ಪು. ೬೦.

೮. ಡಾ. ಬಿ.ಕೆ. ಖಡಬಡಿ, ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೬, ಪು. ೧೯.

೯. ಮಿರ್ಜಿ ಅಣ್ಣಾರಾಯ, ಕನ್ನಡ ವಿಷಯ ವಿಶ್ವಕೋಶ, ಸಂಪುಟ–೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೨೦೦೯, ಪು. ೮೮೬.

೧೦. ವಡ್ಡಾರಾಧನೆ, ಸಂ: ಡಾ.ಡಿ.ಎಲ್.ನರಸಿಂಹಾಚಾರ್, ಪು. ೪೬, ಪಂಕ್ತಿ ೨೨–೨೩

ಅಧ್ಯಾಯ – ೩
ಸಾಮಾಜಿಕ ಪರಿಕಲ್ಪನೆ

ನಮ್ಮ ಭಾರತೀಯ ಸಮಾಜದಲ್ಲಿ ಹಲವಾರು ಭಾಷೆ, ಧರ್ಮ, ಜನಾಂಗಗಳ ಸಮೂಹಗಳಿವೆ. ಪ್ರಮುಖ ಮತ ಧರ್ಮಗಳೆನ್ನಿಸಿಕೊಂಡಿರುವ ಹಿಂದೂ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಕ್ರೈಸ್ತ ಮತ ಹಾಗೂ ಇಸ್ಲಾಂ ಮತಗಳು ಸಾಮರಸ್ಯದಿಂದ ಮೇಳೈಸಿವೆ. ಜೊತೆಗೆ ಪಂಥಗಳು, ನಂಬಿಕೆಗಳು ಮತ್ತು ಆಚರಣೆಗಳು ಇಲ್ಲಿವೆ. ಪ್ರದೇಶದಿಂದ ಪ್ರದೇಶಕ್ಕೆ ತನ್ನದೇ ಆದ ಪ್ರಾದೇಶಿಕ ಸಂಸ್ಕೃತಿಯು ನಿರ್ಮಾಣವಾಗಿದೆ. ಪುರುಷ–ಸ್ತ್ರೀಯರಿಬ್ಬರ ಸ್ಥಾನಮಾನಗಳು, ನೀತಿ–ನಿಯಮಗಳು, ನಂಬಿಕೆಗಳು, ಶಿಕ್ಷಣ, ಬದುಕಿನ ವಿಧಾನಗಳು, ಕೌಟುಂಬಿಕ ವ್ಯವಸ್ಥೆ, ಹಬ್ಬ–ಹರಿದಿನಗಳು, ವೇಷ–ಭೂಷಣ ಎಲ್ಲದರಲ್ಲೂ ವೈವಿಧ್ಯತೆಯಿದೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ಭಾರತೀಯ ಸಂಸ್ಕೃತಿ ನಮ್ಮದು.

ಸಾಮಾಜಿಕ ಎಂದಾಗ ಸಮಾಜಕ್ಕೆ ಸಂಬಂಧಿಸಿದ, ಸಾಂಘಿಕ ಜೀವನಕ್ಕೆ ಅನ್ವಯಿಸಿದ ವಿಚಾರಗಳೆಂದು ಅರ್ಥೈಸಬಹುದು. ಪರಿಕಲ್ಪನೆಯು ಭಾವನೆ, ಊಹೆ, ಗ್ರಹಿಕೆ ಎಂಬ ಅರ್ಥಗಳನ್ನು ಪಡೆದುಕೊಳ್ಳುತ್ತದೆ. "ಪರಿಕಲ್ಪನೆಗಳು ವಿಶಿಷ್ಟವಾದ ಸೈದ್ಧಾಂತಿಕ ಅರ್ಥಸ್ತರಗಳನ್ನು ಒಳಗೊಂಡಿರುತ್ತದೆ."[1] ಪರಿಕಲ್ಪನೆಯ ಅಧ್ಯಯನದಲ್ಲಿ ಅಧ್ಯಯನಕಾರರು ತಮ್ಮದೇ ಆದ ಕೆಲವು ಸಿದ್ಧಾಂತಗಳನ್ನು ಕಟ್ಟಿಕೊಳ್ಳುತ್ತಾರೆ. ಬದಲಾವಣೆ ಸಮಾಜದ ಸಹಜಗುಣ. ಆ ಬದಲಾವಣೆಗೆ ತಕ್ಕಂತೆ ಅಧ್ಯಯನಕಾರರ ಸಿದ್ಧಾಂತಗಳು ಪರಿಷ್ಕರಣಗೊಳ್ಳುತ್ತಾ ಹೋಗುತ್ತದೆ. ಅಥವಾ ಹೊಸ ಕಲ್ಪನೆಯೇ ನಿರ್ಮಾಣವಾಗುತ್ತದೆ. ಆದರೆ ಈಗಾಗಲೇ ಬಂದು ಹೋದ ಸಮಾಜವನ್ನು ಪೂರ್ತಿಯಾಗಲ್ಲದಿದ್ದರೂ ಸ್ವಲ್ಪಮಟ್ಟಿಗೆ ಕಟ್ಟಿಕೊಳ್ಳಲು ಸಾಧ್ಯತೆಗಳಿವೆ. ಶಾಸನಗಳು, ಕೈಫಿಯತ್ತುಗಳು, ದೇವಾಲಯಗಳು ಮುಂತಾದವುಗಳನ್ನು ಚರಿತ್ರೆಯ ನಿರ್ಮಾಣದಲ್ಲಿ ಬಳಸಿಕೊಳ್ಳುತ್ತಾರೆ. ಚರಿತ್ರೆಯ ನಿರ್ಮಾಣದಲ್ಲಿ ಸಾಹಿತ್ಯ ಕೃತಿಗಳೂ ಸಹ ಮಾಹಿತಿಗಳನ್ನು ಒದಗಿಸಬಲ್ಲವು. ಒಂದು ಸಾಹಿತ್ಯ ಕೃತಿಯ ಆಧಾರದಿಂದ ಅದರ ಸಮಕಾಲೀನ ಸಾಮಾಜಿಕ ಜೀವನ ಚಿತ್ರಣವನ್ನು ಕಟ್ಟಿಕೊಳ್ಳಬಹುದು.

ಯಾವುದೇ ಒಂದು ಸಾಹಿತ್ಯ ಕೃತಿಯು ಸಮಕಾಲೀನತೆಗೆ ಸ್ಪಂದಿಸದೆ ಇರಲಾರದು. ಒಬ್ಬ ಕವಿ ಸಮಾಜದಲ್ಲಿ ನಡೆಯುವ ಘಟನೆ ಸಂಗತಿಗಳಿಗೆ ತನ್ನದೇ ಆದ

ಪ್ರತಿಕ್ರಿಯೆಯನ್ನು ನೀಡದೆ ಇರಲಾರ. “ಸಾಹಿತಿಯೂ ಒಂದು ಸಮಾಜದ, ಒಂದು ಸಾಂಸ್ಕೃತಿಕ ಘಟಕದ ಅಂಗ. ಇತರರಂತೆಯೇ ಅವನೂ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ಒಂದು ವಿಶಿಷ್ಟ ಸಮಾಜವ್ಯವಸ್ಥೆಯಲ್ಲಿ ಬೇರುಬಿಟ್ಟಿರುತ್ತಾನೆ. ಆದ್ದರಿಂದ ಆ ವಿಶಿಷ್ಟ ವ್ಯವಸ್ಥೆಯಿಂದ ಮತ್ತು ಆ ಕಾಲಘಟ್ಟದಲ್ಲಿ ಪ್ರಭಾವಶಾಲಿಯಾದ ವೈಚಾರಿಕ ಪ್ರಣಾಲಿಗಳಿಂದ ಅವನು ಪ್ರಭಾವಿತನಾಗದೇ ಇರಲು ಸಾಧ್ಯವಿಲ್ಲ. ತನ್ನ ಸಮಕಾಲೀನ ವ್ಯವಸ್ಥೆಯನ್ನೂ ವೈಚಾರಿಕತೆಯನ್ನೂ ಅವನು ವಿರೋಧಿಸಬಹುದು, ಅಥವಾ ಒಪ್ಪಿಕೊಳ್ಳಬಹುದು ಅಥವಾ ಸುಧಾರಿಸಲು ಪ್ರಯತ್ನಿಸಬಹುದು. ಆದರೆ ಒಂದಲ್ಲ ಒಂದು ರೀತಿಯಲ್ಲಿ ಅವುಗಳಿಗೆ ಸ್ಪಂದಿಸದೆ ಇರಲು ಸಾಧ್ಯವಿಲ್ಲ.”[3] ಪ್ರತಿಯೊಬ್ಬ ಕವಿಯೂ ರೂಢಿಯಿಂದ ಬಲಗೊಂಡು ಸಮಕಾಲೀನತೆಗೆ ಸ್ಪಂದಿಸುತ್ತ ತನ ತನ್ನವನ್ನು ಕಂಡುಕೊಳ್ಳುತ್ತಾನೆ. ಇದರಿಂದ ಒಂದು ಸಾಮಾಜಿಕ ಜೀವನವನ್ನು ಕೃತಿಯು ಮೈಗೂಡಿಸಿಕೊಳ್ಳುತ್ತದೆ.

ಪ್ರತಿಯೊಂದು ಕೃತಿಯಲ್ಲಿ ಕವಿಯು ಕಂಡುಂಡ ನೋವು-ನಲಿವುಗಳ ಅಭಿವ್ಯಕ್ತಿಯಿರುತ್ತದೆ. ಕೃತಿಯಲ್ಲಿ ಕವಿಯ ಅನುಭವ ಒಂದು ರೂಪವನ್ನು ಪಡೆದುಕೊಳ್ಳುತ್ತದೆ. ಕವಿಯ ಅನುಭವ ತಾನು ಬದುಕುತ್ತಿರುವ ಸಮಾಜದಿಂದ ಪಡೆದುಕೊಂಡಿದ್ದಾಗಿರುತ್ತದೆ. ಕವಿಯು ಸಮಾಜದೊಳಗಿನ ಒಬ್ಬ ಸದಸ್ಯನಾಗಿರುತ್ತಾನೆ. ಎಲ್ಲರಂತೆ ಅವನು ಬದುಕಿರುತ್ತಾನೆ. ಅವನೂ ಎಲ್ಲರಂತೆ ಸಂಘಜೀವಿ. ಆತನಿಗೂ ಸಾಮಾಜಿಕತೆಗೂ ಅವಿನಾಭಾವ ಸಂಬಂಧವಿದೆ. ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ಸಮಾಜದಲ್ಲಿ ಬದುಕುತ್ತಿರುತ್ತಾನೆ. ಆ ಸಮಾಜದಲ್ಲಿರುವ ಇತರರಿಂದ ಪ್ರಭಾವಿತಗೊಂಡು ಜೀವಿಸುತ್ತಾನೆ. ಅಂತೆಯೇ ಈತನ ಪ್ರಭಾವವೂ ಇತರರ ಮೇಲಾಗಿರುತ್ತದೆ. ತನ್ನದೇ ಆದ ದೃಷ್ಟಿಕೋನದಲ್ಲಿ ಸಮಾಜವನ್ನು ನೋಡುತ್ತಾನೆ, ವಿಶಿಷ್ಟವಾದ ನೆಲೆಯಲ್ಲಿ ಅರ್ಥೈಸಿಕೊಳ್ಳುತ್ತಾನೆ. ಕೆಲವು ನಿಲುವುಗಳನ್ನು ತಾಳುತ್ತಾನೆ. ಆ ನಿಲುವುಗಳೆಲ್ಲ ವೈಚಾರಿಕ ನೆಲೆಯಲ್ಲಿಯೇ ಕಟ್ಟಿಕೊಂಡಿದ್ದಾನೆಂದೇನೂ ಅಲ್ಲ. ತನ್ನ ಅನುಭವಕ್ಕೆ ಸಿಕ್ಕಷ್ಟು ಸತ್ಯಗಳನ್ನು, ಅದಕ್ಕೆ ಸಂಬಂಧಿಸಿದಂತೆ ಕೆಲವು ಕಲ್ಪನೆಗಳನ್ನು ಸಾಹಿತ್ಯದಲ್ಲಿ ಪ್ರಕಟಿಸುತ್ತಾನೆ. ಅವು ಕವಿಗಾಗುವ ಹೆಚ್ಚಿನ ಅನುಭವದಿಂದ ಬದಲಾಗುವ ಅಥವಾ ಪರಿಷ್ಕಾರಗೊಳ್ಳುವ ಸಾಧ್ಯತೆಗಳೂ ಇರುತ್ತವೆ.

ಸಮಾಜಕ್ಕೆ ಸಂಬಂಧಿಸಿದ ವಿಶಿಷ್ಟವಾದ ಗ್ರಹಿಕೆಯನ್ನು ಸಾಮಾಜಿಕ ಪರಿಕಲ್ಪನೆ-ಯೆಂದು ಸ್ಥೂಲವಾಗಿ ವ್ಯಾಖ್ಯಾನಿಸಬಹುದು. ಇದು ಸಾಂಸ್ಕೃತಿಕ ಅಧ್ಯಯನದ ಒಂದು

ಭಾಗಶಃ ಅಂಶವಾಗಿರುತ್ತದೆ. ಸಾಮಾಜಿಕ ಪರಿಕಲ್ಪನೆ ಕಲ್ಪನಾತೀತವಾದುದಲ್ಲ. ಪ್ರತಿಯೊಂದು ಕೃತಿಯು ಕಟ್ಟಿಕೊಡುವ ಸಾಮಾಜಿಕತೆಯ ಹಿಂದೆ ಒಂದು ವಾಸ್ತವಕ್ಕೆ ಹತ್ತಿರವಾದ ಸಮಾಜವಿದೆ. ಆ ಸಮಾಜಕ್ಕೆ ಒಂದು ಭೌಗೋಳಿಕ ಎಲ್ಲೆ ಇದೆ. ತನ್ನದೇ ಆದ ಭಾಷೆ, ಸಂಸ್ಕೃತಿ, ನಂಬಿಕೆ, ನೀತಿ-ನಿಯಮ, ಆಚರಣೆ, ಧರ್ಮ ಮುಂತಾದ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ಇವುಗಳ ಬಗೆಗಿನ ಕವಿಯ ಗ್ರಹಿಕೆ ಕೃತಿಯಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ.

ಕಾವೇರಿಯಿಂದ ಗೋದಾವರಿವರೆಗೆ ಇದ್ದ ನಾಡಿನಲ್ಲಿ ಜನರು ನಯವಿನಯಕ್ಕೆ ಹೆಸರು ಪಡೆದಿದ್ದರು. ಹದವರಿತು ಮಾತನಾಡುವುದಲ್ಲದೆ ನುಡಿದಂತೆ ನಡೆಯ-ಬಲ್ಲವರಾಗಿದ್ದರು. "ಕುಜಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್"[3] ಎಂದು ಕವಿರಾಜಮಾರ್ಗಕಾರ ತಿಳಿಸುತ್ತಾನೆ. ಈ ನಾಡಿನಲ್ಲಿ ಚಿಕ್ಕಮಕ್ಕಳು ಹಾಗೂ ಮೂಕರು ಸಹ ವಿವೇಕದ ಮಾತುಗಳನ್ನು ಅರಿಯಬಲ್ಲರು ಎಂಬಿವು ಸಮಕಾಲೀನ ಕನ್ನಡ ನಾಡಿನ ಪ್ರಬುದ್ಧ ಜೀವನ ವಿಧಾನದ ಮಜಲನ್ನು ವಿವರಿಸುತ್ತಾನೆ.

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನವಿಶದ ವಿಷಯ ವಿಶೇಷಂ[4]

ಕವಿರಾಜಮಾರ್ಗನು ಈ ಪದ್ಯದಲ್ಲಿ ಕನ್ನಡ ನಾಡಿನ ಭೌಗೋಳಿಕ ಹಿನ್ನೆಲೆಯನ್ನು ಹೇಳುವುದರ ಜೊತೆಗೆ ಅಲ್ಲಿನ ಜನಸಮೂಹದ ಸಾಮಾಜಿಕ ಹಿನ್ನೆಲೆಯನ್ನು ಹೇಳುತ್ತಾನೆ.

ಆದಿಕವಿ ಪಂಪ ತಾನು ಮೆಚ್ಚಿದ ಕರ್ನಾಟಕದ ಪ್ರದೇಶಗಳನ್ನು ಮನದುಂಬಿ ವರ್ಣಿಸಿದ್ದಾನೆ ಕವಿರಾಜಮಾರ್ಗಕಾರ ಹೇಳುವ ಪಟ್ಟದಕಲ್ಲು, ಕೊಪ್ಪಳ, ಲಕ್ಷ್ಮೇಶ್ವರ, ಒಕ್ಕುಂದ ಮತ್ತು ಇತರ ಕೃತಿಗಳಲ್ಲಿ ಉಲ್ಲೇಖವಿರುವ ಬನವಾಸಿ. ಶ್ರವಣಬೆಳಗೊಳ ಮಾನ್ಯಖೇಡ, ಕಲ್ಯಾಣ, ಬಾದಾಮಿ, ಐಹೊಳೆ ಮೊದಲಾದ ನಗರಗಳು ಆ ಕಾಲದಲ್ಲಿ ಆಧುನಿಕ ನಗರಗಳಾಗಿದ್ದವು ಮತ್ತು ವಿದ್ಯಾಭ್ಯಾಸ ಕೇಂದ್ರಗಳೂ ಆಗಿದ್ದವು.

ಪಂಪ ತನ್ನ ಕಾವ್ಯದಲ್ಲಿ

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್[೫]

ಎಂದು ಹೇಳುತ್ತಾನೆ. ಪಂಪ ತನ್ನ ಜೀವನದ ಸಾರವತ್ತಾದ ಸಮಯವನ್ನು ಬನವಾಸಿಯಲ್ಲಿ ಕಳೆದಿರಬೇಕು, ಅವನ ವಿದ್ಯಾಭ್ಯಾಸ ಬನವಾಸಿ, ಶ್ರವಣಬೆಳಗೊಳದಲ್ಲಿ ಮಾಡಿರಬಹುದು. ಆದಿಪುರಾಣದಲ್ಲಿ ನೀಲಾಂಜನೆಯ ನೃತ್ಯ ಸಂದರ್ಭಕ್ಕೆ ಬನವಾಸಿಯಲ್ಲಿ ಕಂಡ ಸಂಗೀತ–ನೃತ್ಯಗಳು ಮತ್ತು ಅರಿಕೇಸರಿಯ ಆಸ್ಥಾನದ ನೃತ್ಯ ಸಂಗೀತ ಪ್ರೇರಣೆ ನೀಡಿರಬಹುದು. ಆದ್ದರಿಂದಲೇ ಪಂಪ

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂಗಡೆಗೊಂಡೊಡಂ ಮಧುಮಹೋತ್ಸವ ಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ"[೬]

ಎನ್ನುತ್ತಾನೆ. ಪಂಪಭಾರತದಲ್ಲಿ ದೇಶಸಂಚಾರ ಕೈಗೊಂಡಿದ್ದ ಅರ್ಜುನನನ್ನು ಪಂಪ ಬನವಾಸಿಗೆ ಕರೆದುಕೊಂಡು ಬಂದು, ವಾಪಾಸಾದ ಮೇಲೆ ಅವನಿಂದ ಬನವಾಸಿಯನ್ನು ನೆನೆಸಿಕೊಳ್ಳುವಂತೆ ಮಾಡುತ್ತಾನೆ. ಹೀಗೆ ಪಂಪನ ಸಾಮಾಜಿಕ ಅನುಭವಗಳು ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿದೆ.

ಸಾಮಾಜಿಕ ಅಂಶಗಳು ಕೃತಿಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿವೆ ಎಂದು ಮೇಲಿನಂತೆ ಕೆಲವು ಉದಾಹರಣೆಗಳಿಂದ ಸ್ಥೂಲವಾಗಿ ಕಟ್ಟಿಕೊಳ್ಳಬಹುದಾದರೂ, ಸಾಮಾಜಿಕ ಪರಿಕಲ್ಪನೆಯ ಅಂಶಗಳು ಮುಂದುವರಿದ ಗ್ರಹಿಕೆಗಳಾಗಿವೆ. ಸಾಮಾಜಿಕ ಪರಿಕಲ್ಪನೆಯನ್ನು ಮುಖ್ಯವಾಗಿ ಯಜಮಾನ್ಯ ಮತ್ತು ಅಧೀನತೆಗಳ ವಿನ್ಯಾಸದಲ್ಲಿ ಗುರುತಿಸುವುದು ಅನಿವಾರ್ಯವಾಗುತ್ತದೆ. ಇದನ್ನು ಈ ಕೆಳಕಂಡಂತೆ ಮೂರು ಹಂತಗಳಲ್ಲಿ ವಿಶ್ಲೇಷಿಸಬಹುದಾಗಿದೆ.

೧. ರಾಜಪ್ರಭುತ್ವದ ಪರಿಕಲ್ಪನೆ
೨. ಧರ್ಮಪ್ರಭುತ್ವದ ಪರಿಕಲ್ಪನೆ
೩. ಅಧೀನ ಪರಿಕಲ್ಪನೆ

ರಾಜಪ್ರಭುತ್ವ ಎಂದಾಗ ಅರಸು–ಮಂತ್ರಿ–ಅಧಿಕಾರಿಗಳ ಪ್ರಭುತ್ವ ಮತ್ತು ಧರ್ಮಪ್ರಭುತ್ವ ಎಂದಾಗ ದೇವರು–ದೇವಾಲಯ–ಧಾರ್ಮಿಕ ಮುಖಂಡರ ಪ್ರಭುತ್ವ ಎಂದು ಅರ್ಥವನ್ನು ಪಡೆದುಕೊಳ್ಳುತ್ತದೆ. ಈ ಎರಡು ಪ್ರಭುತ್ವದಿಂದ ಆಳಿಸಿಕೊಳ್ಳುವ ಸಾಮಾನ್ಯರು ಅಧೀನ ಪರಿಕಲ್ಪನೆಯಲ್ಲಿ ಗುರುತಿಸಿಕೊಳ್ಳುತ್ತಾರೆ.

ರಾಜಪ್ರಭುತ್ವದ ಪರಿಕಲ್ಪನೆ

ಪ್ರಭುತ್ವ ಎಂದರೆ ಒಡೆತನ, ಅಧಿಕಾರ, ದೇವರು, ಯಜಮಾನ, ಶಕ್ತಿವಂತ ಎಂಬರ್ಥಗಳಿವೆ. ಪ್ರಭು ಎಂದಾಗ ಲೌಕಿಕ ಮತ್ತು ಪಾರಲೌಕಿಕ ಎಂಬ ಎರಡು ಅರ್ಥಗಳನ್ನು ಗ್ರಹಿಸುತ್ತಾರೆ. ನಮ್ಮನ್ನು ಆಳುವವರನ್ನು ಲೌಕಿಕದಲ್ಲಿ ಪ್ರಭು ಎಂದು ಕರೆಯುತ್ತೇವೆ. ನಮ್ಮ ಆರಾಧ್ಯ ದೈವವನ್ನು ಪ್ರಭು ಎಂದು ಸಂಬೋಧಿಸುತ್ತೇವೆ. ಪ್ರಭುತ್ವಕ್ಕೆ ನಾನಾ ಅರ್ಥಗಳಿವೆ. "ಸಾಮಾನ್ಯವಾಗಿ ಒಬ್ಬ ಇನ್ನೊಬ್ಬನ ಮೇಲೆ, ಒಂದು ಗುಂಪು ಮತ್ತೊಂದು ಗುಂಪಿನ ಮೇಲೆ ಹಿಡಿತ ಸಾಧಿಸುವುದು ಮತ್ತು ಯಾರು ಹಿಡಿತಕ್ಕೆ ಒಳಗಾಗಿದ್ದಾರೋ ಅವರು ತಮ್ಮ ಮೇಲೆ ಅಧಿಕಾರ ಸ್ಥಾಪಿಸಿದವರನ್ನು 'ಯಜಮಾನ', 'ಪ್ರಭು', 'ಧಣಿ', 'ದೊರೆ' ಎಂದು ಕರೆಯುವುದು ವಾಡಿಕೆ. ಈ ಪದಗಳ ಮತ್ತೊಂದು ರೂಪವೆಂದರೆ ಸಾಹುಕಾರ, ಗೌಡ, ಜಮೀನ್ದಾರ, ಸ್ವಾಮಿ, ಪಟೇಲ ಪದಗಳು ಸಂದರ್ಭಕ್ಕೆ ಅನುಸಾರವಾಗಿ ಇದರ ಅರ್ಥ ಬೇರೆಯಾಗುತ್ತದೆ. ಇವುಗಳ ಹಿನ್ನಲೆಯಿಂದ ನಾವು "ಪ್ರಭುತ್ವ" ಎಂಬುದನ್ನು ನೋಡಿದರೆ ಅದು ಬಾಹ್ಯದ ವ್ಯಾಪಾರಕ್ಕೆ ಸಂಬಂಧಿಸಿದ್ದಾಯಿತು. ಇವುಗಳು ಲೌಕಿಕದ ಅರ್ಥಗಳನ್ನು ಒಳಗೊಂಡಿವೆ. ದೈಹಿಕವಾಗಿ ಒಬ್ಬ ಇನ್ನೊಬ್ಬನನ್ನು ಆಳುವುದು ನಮ್ಮ ಕಣ್ಣಿಗೆ ಕಾಣಿಸುತ್ತದೆ. ಇದು ಸಾಮಾಜಿಕ ವರ್ಗ ರಾಜಕಾರಣವಾಯಿತು."[2]

ಪ್ರಭುತ್ವದ ವ್ಯಾಪ್ತಿಯು ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಕುಟುಂಬ ಎಂಬ ಸಣ್ಣಘಟಕದಿಂದ ಎಲ್ಲರನ್ನೂ ಎಲ್ಲವನ್ನು ಒಳಗೊಳ್ಳುವ ಸಮಾಜದವರೆಗೆ ಪ್ರಭುತ್ವದ ಬೇರೆ ಬೇರೆ ಮುಖಗಳು ಕಾಣಸಿಗುತ್ತವೆ. ಕುಟುಂಬದಲ್ಲಿ ಮನೆಯ ಯಜಮಾನ ಕುಟುಂಬದ ಎಲ್ಲಾ ಸದಸ್ಯರ ಮೇಲೆ, ಮನೆಯ ವ್ಯವಹಾರದ ಮೇಲೆ ಅಧಿಕಾರ ಸ್ಥಾಪಿಸಿರುತ್ತಾನೆ. ಕುಟುಂಬಗಳು ಸಾಮಾನ್ಯವಾಗಿ ಪುರುಷ ಪ್ರಧಾನ ವ್ಯವಸ್ಥೆಯಿಂದ ಕೂಡಿರುತ್ತವೆ. ಈ ವ್ಯವಸ್ಥೆಗೆ ಲಿಖಿತ ಸಂವಿಧಾನವಿಲ್ಲ ಆದರೆ ಮನೆಯ ಯಜಮಾನ ಹಿಂದಿನಿಂದ ಬಂದಿರುವ ಒಪ್ಪಿತ ನಿಯಮವನ್ನು ಪಾಲಿಸುತ್ತಾನೆ. ಇದು

ಸ್ತ್ರೀ ಶೋಷಣೆಯ ಮತ್ತೊಂದು ಮುಖವೇ ಆಗಿದೆ. ಯಜಮಾನನ ಹೆಂಡತಿಗೆ ತನ್ನ ಅಡುಗೆ ಮನೆಯ ಮೇಲೆ ಅಧಿಕಾರ ಹೊಂದಿರುತ್ತಾಳೆ. ಆದರೆ ತಿಂಡಿ-ಊಟಗಳಲ್ಲಿನ ಉಪ್ಪು-ಖಾರದ ನಿಯಂತ್ರಣವು ಮನೆಯ ಯಜಮಾನ ಮೇಲೆ ಅವಲಂಬಿತವಾಗಿರುತ್ತದೆ. ಗ್ರಾಮಗಳಲ್ಲಿ ಊರನ್ನು ನೋಡಿಕೊಳ್ಳುವ ಊರಿನ ಮುಖಂಡ (ಗೌಡ, ಪಟೇಲ) ಪ್ರಭುತ್ವದ ಮತ್ತೊಂದು ರೂಪ. ಇವರ ಅಧಿಕಾರ ಪ್ರಯೋಗಕ್ಕೆ ಹಳ್ಳಿಯ ಪಂಚಾಯಿತಿ ಕಟ್ಟೆಯೇ ವೇದಿಕೆ. ಊರಿನ ಕಲಹಗಳಿಗೆ ಇಲ್ಲಿ ನ್ಯಾಯ ತೀರ್ಮಾನಗಳು ನಡೆಯುತ್ತವೆ. ಊರಿನ ಮುಖಂಡರು ನ್ಯಾಯವನ್ನು ನೀಡುವ ಕೆಲಸದಲ್ಲೇ ತಮ್ಮ ಪ್ರಭುತ್ವವನ್ನು ಸಾಧಿಸಿರುತ್ತಾರೆ. ಸ್ತ್ರೀಯರು, ಅಸ್ಪೃಶ್ಯರು ಪಂಚಾಯಿತಿಕಟ್ಟೆಗೆ ಏರುವುದನ್ನು ನಿಯಂತ್ರಿಸಲಾಗಿತ್ತು.

ಜನತೆ ಬದುಕಿನ ವಿನ್ಯಾಸದಲ್ಲಿ ಪ್ರಭುತ್ವದ ಅಂಶಗಳನ್ನು ಗುರುತಿಸಬಹುದು. ಪ್ರಭುತ್ವಕ್ಕೂ ಹಿಂಸೆಗೂ ಸಂಬಂಧವಿದೆ. ಪ್ರಭುತ್ವವೆಂಬುದೇ ಹಿಂಸೆಯೆಂದರೆ ತಪ್ಪಾಗಲಾರದು. ಪ್ರಭುತ್ವ ಶಿಕ್ಷೆಯನ್ನು ನೀಡುವುದೇ ಆದ್ಯ ಕರ್ತವ್ಯವೆಂದು ತಿಳಿದಿರುತ್ತದೆ. ಹಿಂಸೆ ವ್ಯಕ್ತಿಗತ (ವ್ಯಷ್ಟಿ) ಮತ್ತು ಸಾಮಾಜಿಕ (ಸಮಷ್ಟಿ)ವಾಗಿ ಭಿನ್ನತೆಯಿಂದ ನಿರ್ವಹಣೆಗೊಳ್ಳುತ್ತದೆ. ಸಾಮಾಜಿಕವಾಗಿ ಹಿಂಸೆಯ ದೊಡ್ಡಮುಖ ಪ್ರಭುತ್ವದಿಂದ ಘಟಿಸುತ್ತಿದ್ದ ಯುದ್ಧಗಳು. ಇವು ಹಿಂಸೆಯನ್ನು ನೈತಿಕಗೊಳಿಸಿದ್ದವು. ಹಿಂಸೆಯ ನೈತಿಕತೆಯನ್ನು ಪ್ರಶ್ನಿಸುವ ಜೈನಧರ್ಮದ ಸಾಹಿತ್ಯಕೃತಿಗಳಲ್ಲಿ ಅದರ ವಿವಿಧ ಮುಖಗಳು ಕಾಣಸಿಗುತ್ತವೆ. ಕರ್ಣಪಾರ್ಯನ 'ನೇಮಿನಾಥಪುರಾಣಂ'ನಲ್ಲಿ ಯುದ್ಧದ ವರ್ಣನೆಗಳನ್ನು ಗಮನಿಸಿದಾಗ ಯುದ್ಧಪದ್ಧತಿಯ ನಿಯಮಗಳು ಗಮನಸೆಳೆಯುತ್ತವೆ. ರಾಜನ ಕೈ ಬೀಸುವಿಕೆ ಅಥವಾ ಸಂಜ್ಞೆಯ ಮೂಲಕ ಯುದ್ಧ ಪ್ರಾರಂಭವಾಗುತ್ತಿದ್ದ ಚಿತ್ರ ಯುದ್ಧ ವರ್ಣನೆಯಲ್ಲಿ ದೊರೆಯುತ್ತದೆ. ಸೂರ್ಯೋದಯವಾದಾಗ ಯುದ್ಧ ಪ್ರಾರಂಭಗೊಂಡು ಸೂರ್ಯಾಸ್ತವಾಗಲು ಯುದ್ಧ ವಿರಾಮವೂ ಘೋಷಿಸಲ್ಪಟ್ಟು ಸೇನೆಗಳು ಬೀಡಿಗೆ ಮರಳುತ್ತಿದ್ದವು.

ಧಾನುಷ್ಕಾನೀಕದೊಳಾ
ಧಾನುಷ್ಕಾನೀಕವಶ್ವದವಿಮಶ್ವದೊಳು
ದ್ವಾನಿಯ ತೇರ್ ತೇರೊಳ್ ಮದ
ದಾನೆಯ ಘಟೆ ಘಟೆಗಳೊಡನೆ ತಾಗಿದುವಾಗಳ್ (೧೧-೧೪೦)

ರಥ, ಅಶ್ವ, ಗಜ ಮತ್ತು ಪದಾತಿ ಸೈನ್ಯ ಪಡೆಯು ಆಯಾ ಪಡೆಯ ಜೊತೆಗೆ ಯುದ್ಧ ಮಾಡಬೇಕಾಗಿತ್ತು. ಇದು ಯುದ್ಧನಿಯಮ. ಒಬ್ಬರು ಮತ್ತೊಬ್ಬರನ್ನು ಕೊಲ್ಲುವ ಅಥವಾ ಹಿಂಸಿಸುವ ಪ್ರಕ್ರಿಯೆಯು ನೈತಿಕತೆಯ ಹಿನ್ನೆಲೆಯಲ್ಲೆ ಕಾರ್ಯಪ್ರವೃತ್ತವಾಗಿದೆ.

ಪ್ರಭುತ್ವದ ಸ್ವರೂಪಗಳೇನೇ ಇರಲಿ ಅದು ಮುಖ್ಯವಾಗಿ ಅಧಿಕಾರವನ್ನು ಕೇಂದ್ರಿಕರಿಸಿಕೊಂಡಿರುವ ಒಂದು ವ್ಯವಸ್ಥೆಯಾಗಿದೆ. ಇದರ ನಿಯಂತ್ರಣಕ್ಕೆ ಆರ್ಥಿಕ, ಸಾಮಾಜಿಕ, ಧಾರ್ಮಿಕಗಳೆಲ್ಲವೂ ಒಳಪಟ್ಟಿರುತ್ತವೆ. ಪ್ರಭುತ್ವದ ವ್ಯವಸ್ಥೆಯಲ್ಲಿ ರಾಜನೇ ಕೇಂದ್ರವಾದರೂ ಅದು ಅಷ್ಟಕ್ಕೆ ನಿಲ್ಲದೆ ಮುಂದುವರಿಯುತ್ತದೆ. ರಾಜಪರಿವಾರ, ಸಾಮಂತರು, ಮಂತ್ರಿವರ್ಗ, ಸೇನಾಧಿಪತಿ, ರಾಜವರ್ತಕ, ಧರ್ಮಾಧಿಕಾರಿ, ಕುಲಪುರೋಹಿತ, ಆಸ್ಥಾನ ಕವಿಗಳು, ಇವೆರೆಲ್ಲರೂ ಪ್ರಭುತ್ವದ ಪ್ರತಿನಿಧಿಗಳಾಗಿಯೇ ನಿಲ್ಲುತ್ತಾರೆ. ರಾಜ ಸೈನಿಕರ ರಕ್ಷೆಯಲ್ಲಿ ಬದುಕುತ್ತಾನೆ. ತನ್ನ ರಾಜ್ಯದಲ್ಲಿರುವ ಎಲ್ಲ ಚೇತನಾಚೇತನ ವಸ್ತುಗಳೆಲ್ಲವೂ ರಾಜನಿಗೆ ಸೇರಿರುತ್ತದೆ. ಅದಕ್ಕೆ ಅವನೆ ಒಡೆಯ. ತಾತ್ವಿಕ ಅರ್ಥದಲ್ಲಿ ಪ್ರಭುತ್ವ ಆದರ್ಶ ವ್ಯವಸ್ಥೆಯಾದರೂ, ಮೂಲದಲ್ಲಿ ತನ್ನ ಹಿತವನ್ನೇ ಪ್ರಭುತ್ವ ಕಾಯ್ದಿರಿಸಿಕೊಂಡಿದೆ ಹೊರತು ಜನತೆಯ ಹಿತವನ್ನಲ್ಲ. ಜನತೆಯ ಹಿತರಕ್ಷಣೆಯ ಮುಖವೊಡ್ಡಿ ತನ್ನ ಅಧೀನತೆಗೆ ಒಳಪಟ್ಟವರ ಮೇಲೆ ನಿಯಂತ್ರಣ ಸಾಧಿಸಿತ್ತು. ಯಜಮಾನಿಕೆಯನ್ನು ಸ್ಥಾಪಿಸುವುದೇ ಇದರ ಪ್ರಮುಖ ಉದ್ದೇಶ. ಅದು ಪ್ರಭುತ್ವದ ಹುಟ್ಟುಗುಣಗಳಾದ ಅಹಂಕಾರ, ದರ್ಪ, ಸೊಕ್ಕು ಮುಂತಾದವುಗಳನ್ನು ವಿರೋಧಿಸದೆ ಒಪ್ಪಿಕೊಂಡು ಬದುಕುವಂತೆ ಮಾಡಿತ್ತು. ಮತ್ತು "ಆಳಿಸಿಕೊಳ್ಳುವ ವರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ನಿರ್ವಚಿಸುವುದು ಮತ್ತು ಆಳಿಸಿಕೊಳ್ಳುವ ವರ್ಗದ ಮನಸ್ಸು ಮತ್ತು ದೇಹ ತನ್ನ ವ್ಯಾಖ್ಯಾನಕ್ಕೆ ಅನುಸಾರವಾಗಿ ನಿರೂಪಿಸುವುದು."[೮] ಪ್ರಭುತ್ವ ಮುಖ್ಯವಾಗಿ ಪಿತೂರಿಗಳ ಭೂಮಿಕೆ. ಸಾಮಾಜಿಕವಾಗಿ ಮುಖ್ಯಪಾತ್ರವನ್ನು ನಿರ್ವಹಿಸುತ್ತ ತನ್ನದೇ ಆದ ನಿಯಮವನ್ನು ಕಟ್ಟಿಕೊಂಡು ಯಜಮಾನಿಕೆಯ ಅಧಿಕೃತ ವಕ್ತಾರನಂತೆ ಕಾರ್ಯನಿರ್ವಹಿಸುತ್ತದೆ. ಆದರೆ ಈ ಯಜಮಾನಿಕೆಯನ್ನು ಒಪ್ಪಿಕೊಂಡು ಅಥವಾ ಪ್ರತಿಭಟಿಸುವ ಎರಡು ಉದಾಹರಣೆಗಳು ಸಾಹಿತ್ಯದಲ್ಲಿ ದೊರೆಯುತ್ತವೆ. ಪಂಪ ತನ್ನ ಆಶ್ರಯದಾತನಾದ ಅರಿಕೇಸರಿಯನು ತನ ಲೌಕಿಕ ಕಾವ್ಯದ ನಾಯಕ ಅರ್ಜುನನಿಗೆ ಸಮೀಕರಿಸಿ ಕಾವ್ಯವನ್ನು ರಚನೆಮಾಡಿದ್ದರೂ,

ಕಲಿಯನೆ ಪಂದೆ ಮಾೞ್ಪ ಕಡುವಂದೆಯನೊಳ್ಗಲಿ ಮಾೞ್ಪ ತಕ್ಕನಂ
ಪೊಲೆಯನೆ ಮಾೞ್ಪಮುಂ ಪೊಲೆಯನಂ ನೆಱೆ ತಕ್ಕನೆ ಮಾೞ್ಪ ತಮ್ಮೊಳ
ಗ್ಗಲಿಸಿ ಪೊದೞ್ದು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂ
ಚಲಮದಱಿಂದಮೋಲಗಿಸಿ ಬಾೞ್ವುದೆ ಕಷ್ಟಮಿಳಾಧಿನಾಥರಂ

ಎಂದು ಪ್ರಭುತ್ವವನ್ನು ಸೂಕ್ಷ್ಮವಾಗಿ ಅಲ್ಲಗಳೆಯುತ್ತಾನೆ.

ಸಮಾಜದ ಶ್ರೇಣೀಕೃತ ವ್ಯವಸ್ಥೆಯ ವಿವಿಧ ಸ್ತರಗಳಲ್ಲಿ ಅರಸ, ಮಂತ್ರಿ, ಅಧಿಕಾರಿ ಪ್ರಜೆಗಳು ಕಾಣಿಸಿಕೊಳ್ಳುವರು. ರಾಜಪ್ರಭುತ್ವ ವ್ಯವಸ್ಥೆಯಲ್ಲಿ ಕೇಂದ್ರ ಪ್ರಭುತ್ವದ ನಂತರ ಮಹಾಮಂಡಲೇಶ್ವರ, ಮಾಂಡಲೀಕ, ಸಾಮಂತ, ನಾಯಕರು ಕಂಡು ಬರುತ್ತಾರೆ. ಸ್ಥಾನಿಕ ಪ್ರಭುಗಳು ಜನರ ಜೊತೆ ನೇರ ಮುಖಾಮುಖಿಯಾಗುತ್ತಿದ್ದರು. ಕೇಂದ್ರಪ್ರಭುತ್ವದ ದರ್ಪ ಇವರಿಗೂ ಇತ್ತು. ನಿರ್ದಿಷ್ಟ ಪ್ರದೇಶದ ಆಳ್ವಿಕೆಯ ಜವಾಬ್ದಾರಿಯನ್ನು ಇವರು ಹೊಂದಿದ್ದರು. ಸಾಮಾನ್ಯ ಜನರ ಮೇಲೆ ಈ ಸ್ಥಾನಿಕ ಪ್ರಭುಗಳ ರಾಜಕೀಯ ಬದಲಾವಣೆಗಳು ಹೆಚ್ಚು ಪರಿಣಾಮವನ್ನು ಬೀರುತ್ತಿದ್ದವು.

ಹಿಂದಿನ ಕಾಲದ ಮರಣ ಪದ್ಧತಿಗಳನ್ನು ಪ್ರಭುತ್ವದ ವ್ಯಾಪ್ತಿಯೊಳಗೆ ಗುರುತಿಸಬಹುದು. ಮಾಸ್ತಿ, ವೀರ, ಬಲಿದಾನ ಮತ್ತು ಸಮಾಧಿ ಮರಣಗಳು ರಾಜ, ಧರ್ಮ ಮತ್ತು ಪುರುಷ ಪ್ರಭುತ್ವಕ್ಕೆ ನಿದರ್ಶನಗಳಾಗಿವೆ. ಗಂಡ ಸತ್ತಾಗ ಹೆಂಡತಿ ಸಹಗಮನ ಮಾಡುವುದು, ಅನ್ನದ ಋಣದಿಂದ ಅರಸನಿಗಾಗಿ ಸೈನಿಕರು ಯುದ್ಧಗಳಲ್ಲಿ ಹೋರಾಡಿ ಪ್ರಾಣತ್ಯಾಗ ಮಾಡುವುದು, ವ್ರತವನ್ನು ಆಚರಿಸಿ ಸಮಾಧಿ ಮರಣಹೊಂದುವುದು ಹಿಂದೆ ಇದ್ದ ಅರ್ಪಣಾ ಮರಣಗಳು. ಬಲಿದಾನಕ್ಕೆ ಒಂದು ಧಾರ್ಮಿಕ ಚೌಕಟ್ಟನ್ನು ನಿರ್ಮಿಸಲಾಗಿತ್ತು. ದೇಶದ, ಧರ್ಮದ ಉದ್ಧಾರಕ್ಕೆ ಈ ಬಲಿದಾನಗಳು ಆಗಬೇಕೆಂಬ ನಂಬಿಕೆ ಭದ್ರವಾಗಿ ಬೇರೂರಿತ್ತು. ಇದು ಶಿಷ್ಟ ಮತ್ತು ಜನಪದ ಸಾಹಿತ್ಯದಲ್ಲೂ ಅಭಿವ್ಯಕ್ತಗೊಂಡಿದೆ.

ಬೃಹತ್ ಮತ್ತು ಭವ್ಯಕಟ್ಟಡಗಳು, ಅರಮನೆಗಳು, ದೇವಾಲಯಗಳು ಮತ್ತು ಕೋಟೆ-ಕೊತ್ತಲಗಳು ರಾಜಪ್ರಭುತ್ವದ ಸ್ಮಾರಕಗಳಾಗಿವೆ. ಇವು ಸಾಹಿತ್ಯದಲ್ಲೂ ಅರಸುಕೇಂದ್ರಿತವಾಗಿಯೇ ಅಭಿವ್ಯಕ್ತಗೊಂಡಿವೆ.

ಧರ್ಮ ಪ್ರಭುತ್ವದ ಪರಿಕಲ್ಪನೆ

ಪ್ರಾಚೀನ ಕಾಲದಲ್ಲಿದ್ದ ವೈದಿಕ ಧರ್ಮ ಅನಂತರ ವೈದಿಕ ಧರ್ಮದ ಕೆಲವು ಲೋಪದೋಷಗಳನ್ನು ಗುರುತಿಸಿ ಅವುಗಳನ್ನು ನಿವಾರಿಸುವ ದಿಕ್ಕಿನಲ್ಲಿ ಹುಟ್ಟಿಕೊಂಡ ಬೌದ್ಧಧರ್ಮ ಮತ್ತು ಜೈನಧರ್ಮ ಅದೇ ರೀತಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಕಂಡುಬಂದ ವಚನ ಸಾಹಿತ್ಯ ಚಳುವಳಿ ಹಾಗೂ ವೀರಶೈವಧರ್ಮ, ನಂತರದ ಕಾಲದಲ್ಲಿ ಕಂಡು ಬರುವ ವಿದೇಶಿ ಪ್ರಭಾವಗಳು ಆ ಮೂಲಕವಾಗಿ ಇಸ್ಲಾಂ, ಕ್ರೈಸ್ತ ಇತರ ಧರ್ಮಗಳು ಕರ್ನಾಟಕದ ಜನತೆಯ ಮೇಲೆ ಪ್ರಭಾವ ಬೀರಿದವು. ಈ ಧರ್ಮಗಳ ಹಿನ್ನೆಲೆಯಲ್ಲಿ ಸಾಹಿತ್ಯಕೃಷಿ ನಿರ್ಮಾಣವಾಯಿತು.

ಧರ್ಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಧಾರ್ಮಿಕ ಎಂದು ಕರೆಯುತ್ತೇವೆ. ಮನುಷ್ಯನ ಜೀವನ ಕ್ರಮ, ಧೋರಣೆಗಳು ಧಾರ್ಮಿಕ ವಿಚಾರಗಳಿಂದ ಕೂಡಿದೆ ಮನುಷ್ಯನ ಜೀವನ ಮತ್ತು ಮನಸ್ಸಿನ ಹಿಂದೆ ಧರ್ಮನಿಂತಿದೆ. ಬದುಕಿನ ಅತ್ಯಂತ ನಿಗೂಢ ಸಮಸ್ಯೆಗಳ ಬಗ್ಗೆ, ಜೀವನದ ರೀತಿ–ನೀತಿಗಳ ಬಗ್ಗೆ ಧರ್ಮ ನೀಡಿದ ಮಾರ್ಗವನ್ನೇ ಕವಿಗಳು ಅನುಸರಿಸಿದರು. ಹಾಗಾಗಿ ಧರ್ಮ ಸಾಹಿತ್ಯದಲ್ಲಿಯೂ ತನ್ನ ಪ್ರಭುತ್ವವನ್ನು ಸಾಧಿಸಿತು.

"ಭಾರತೀಯ ಸಂದರ್ಭದಲ್ಲಿ 'ಧರ್ಮ' ಎನ್ನುವ ಪದಕ್ಕೆ 'ಧಾರಣ ಮಾಡಿದುದು', 'ನೀತಿ (ನಿಯಮ)', 'ನ್ಯಾಯ', 'ಕರ್ತವ್ಯ' ಅಥವಾ 'ಪವಿತ್ರ ಕರ್ತವ್ಯ', 'ವರ್ತನೆ' ಅಥವಾ 'ನಡವಳಿಕೆ', 'ಸದ್ಗುಣ', 'ಪುಣ್ಯ', 'ಅಹಿಂಸೆ', 'ಭಿಕ್ಷೆ', 'ಸ್ವಭಾವ', 'ಆಚರಣೆ', 'ಹಕ್ಕು', 'ಸಮದೃಷ್ಟಿ', 'ಸ್ವರೂಪ', 'ಪುರುಷಾರ್ಥ', 'ದಯೆ' ಅಥವಾ 'ಕರುಣೆ' ಮುಂತಾದ ಇನ್ನೂ ಅನೇಕ ಅರ್ಥಗಳು ಕಂಡು ಬರುತ್ತಿವೆ. ಸಂಮೃದ್ಧವಾಗಿ ಕೇಳಿಬರುವ 'ಧರ್ಮಕಾರ್ಯ', 'ಧರ್ಮದ್ರೋಹ', 'ಧರ್ಮಸಂಕಟ', 'ಧರ್ಮಪತ್ನಿ', 'ಧರ್ಮರಾಜ' ಮುಂತಾದ ಇತ್ಯಾದಿ ಪದಗಳಲ್ಲಿ ಗುಣವಾಚಕವಾಗಿ ಕಂಡುಬರುವ 'ಧರ್ಮ' ಎನ್ನುವ ಪದ ಇಡೀ ಮಾನವ ಬದಕಿನ ಅರ್ಥಪೂರ್ಣಸತ್ವದ ಅವಿಭಾಜ್ಯ ಸಂಕೇತವಾಗುತ್ತದೆ."[೧೦]

ಮನುಷ್ಯನ ಬದುಕು ಅಶಾಂತಿ, ಅಭದ್ರತೆ, ಅತೃಪ್ತಿ, ಭಯ, ದುಃಖಗಳಿಗೆ ಸಿಲುಕಿದಾಗ ಧರ್ಮ ಶಾಂತಿಯನ್ನು ನೀಡುತ್ತದೆ. ನಾವು ಮಾಡಿದ ತಪ್ಪುಗಳ ಪಾಪಪ್ರಜ್ಞೆ ನಮ್ಮನ್ನು ಕಾಡಿದಾಗ ಧರ್ಮ ಆ ಭೀತಿಯನ್ನು ದೂರವಾಗಿಸುತ್ತದೆ. ಇಂತಹ

ನಂಬಿಕೆಗಳು ಸಹಜವಾಗಿ ಧರ್ಮದ ತೆಕ್ಕೆಗೆ ಬೀಳಿಸಿದೆ. ಸ್ವರ್ಗ–ನರಕ, ಭೂತ–ಪ್ರೇತ, ಪಾಪ–ಪುಣ್ಯ ಎಂಬ ಇತರ ಕಲ್ಪನೆಗಳು ಮನುಷ್ಯನ ಸಂಬಂಧಗಳನ್ನು ಮತ್ತು ಅವನ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.

ನಮ್ಮನ್ನು ಯಾವುದು ಒಳ್ಳೆಯ ಮಾರ್ಗದಲ್ಲಿ ನಡೆಸುತ್ತದೆಯೋ ಅದೇ ಧರ್ಮ. ಅದೊಂದು ಆದರ್ಶ ನಡವಳಿಕೆ. ಆದರೆ ಧರ್ಮದ ಹೆಸರಿನಲ್ಲಿ ಧರ್ಮಕ್ಕೆ ಸಂಬಂಧಪಡದ ಅಜ್ಞಾನದ ನಡತೆಗಳು ಆ ಧರ್ಮದ ಮೌಲ್ಯವನ್ನು ಕಡಿಮೆ ಮಾಡುತ್ತವೆ. ಧರ್ಮದ ಹಿನ್ನೆಲೆಯಲ್ಲಿ ನಡೆಯುವ ಅನ್ಯಾಯಗಳು ಜನತೆಯ ಶೋಷಣೆಗೆ ಕಾರಣವಾಗುತ್ತವೆ.

ಧರ್ಮದ ಹೆಸರಿನಲ್ಲಿ ತನ್ನದೇ ಆದ ಒಡೆತನವನ್ನು ಮಾಡುವುದೇ ಧರ್ಮಪ್ರಭುತ್ವ, ಧರ್ಮ ಪ್ರಭುತ್ವವೂ ರಾಜಪ್ರಭುತ್ವಕ್ಕಿಂತ ಹೆಚ್ಚು ಬಲಿಷ್ಠವಾಗಿರುತ್ತದೆ. ಹೆಚ್ಚು ಅಧಿಕಾರವನ್ನು, ಸಾಮರ್ಥ್ಯವನ್ನು ಹೊಂದಿರುತ್ತದೆ. ಅತ್ಯಂತ ಸೂಕ್ಷ್ಮವಾಗಿ ಅಧಿಪತ್ಯವನ್ನು ನಡೆಸುತ್ತದೆ. ರಾಜಪ್ರಭುತ್ವಕ್ಕಿಂತ ಧರ್ಮಪ್ರಭುತ್ವಕ್ಕೆ ವಿರೋಧ ಕಡಿಮೆ. ಆದ್ದರಿಂದ ಇದರ ಪರಿಣಾಮ ಹೆಚ್ಚು. ಪರಿಣಾಮದ ನಿರ್ಮಾಣವೂ ಅತಿವೇಗವಾಗಿ ಉಂಟಾಗುತ್ತದೆ. ಅತ್ಯಂತ ಕ್ರಿಯಾಶೀಲತೆಯಿಂದಿರುವ ಮೂಲಕ ಸಮಾಜದಲ್ಲಿ ಪ್ರಮುಖಪಾತ್ರವಹಿಸುತ್ತದೆ. "ಜನರ ಅಲೌಕಿಕ ಕಲ್ಪನೆಯನ್ನು ಆಳುವಶಕ್ತಿಯನ್ನು ಗಳಿಸಿಕೊಂಡು, ಸಾಂಸ್ಥಿಕ ವ್ಯವಸ್ಥೆಯನ್ನು ರಚಿಸಿಕೊಂಡು ರಾಜ್ಯದ ಅಧಿಕಾರ ರಚನೆಗೆ ಅರ್ಥಪೂರ್ಣವಾಗುತ್ತ ಬೆಳೆದವು. ಅಧಿಕಾರ ಪರಿಭಾಷೆ ಈ ಮತಗಳ ಲೌಕಿಕ ಮತ್ತು ಅಲೌಕಿಕ ಜಗತ್ತುಗಳೆರಡನ್ನೂ ಬೆಸೆಯುತ್ತದೆ."[೧೧] ಲೌಕಿಕ ಜಗತ್ತಿನ ಸ್ವಾತಂತ್ರ್ಯವನ್ನು ಭಾಗಶಃ ಕಸಿದುಕೊಳ್ಳುತ್ತದೆ. ಬದುಕಿನ ಎಲ್ಲಾ ಹಂತಗಳಲ್ಲೂ ಮನುಷ್ಯನನ್ನು ನಿಯಂತ್ರಿಸುತ್ತದೆ. ಸಾಂಸ್ಕೃತಿಕ ಯಜಮಾನಿಕೆಯನ್ನು ಮಾಡುತ್ತಲೇ ಬಂದಿದೆ. ಇದಕ್ಕೆ ದೇವಾಲಯಗಳು ಪ್ರಮುಖ ವೇದಿಕೆಯನ್ನು ಪ್ರಾಚೀನ ಮತ್ತು ಮಧ್ಯಕಾಲೀನ ಸಂದರ್ಭದಲ್ಲಿ ನಿರ್ಮಾಣಮಾಡಿದ್ದವು ಮತ್ತು ಧರ್ಮ ಪ್ರಭುತ್ವದ ಪ್ರತಿನಿಧಿಗಳಾಗಿದ್ದವು.

ದೇವಾಲಯಗಳು ಪ್ರಾಚೀನ ಕರ್ನಾಟಕದ ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿದ್ದವು. "ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವವನ್ನು ಬಲಪಡಿಸುವ ಕೆಲಸವನ್ನು ದೇವಾಲಯಗಳು ವ್ಯವಸ್ಥಿತವಾಗಿ ಮಾಡಿದವು. ಜನರ ನಡವಳಿಕೆಗೆ ನೀತಿ ಸಂಹಿತೆಯನ್ನು ರೂಪಿಸುವ ಜವಾಬ್ದಾರಿಯನ್ನು ದೇವಾಲಯಗಳು ಹೊತ್ತವು."[೧೨]

ದೇವಾಲಯಗಳು ಕೃಷಿ, ಉದ್ದಿಮೆಯನ್ನು ನಿಯಂತ್ರಣದಲ್ಲಿಟ್ಟುಕೊಂಡು, ನ್ಯಾಯಾಂಗದ ಕೆಲಸವನ್ನು ಮಾಡುತ್ತ ಆಳುವ ವರ್ಗದ ಅಂತಸ್ತುಗಳ ಶ್ರೇಣಿಯ ಅಂಗವಾಗಿದ್ದವು.[೧೩] ಸೂಕ್ಷ್ಮವಾಗಿ ಗಮನಿಸಿದರೆ ದೇವಾಲಯಗಳು ಅರಸು ಕೇಂದ್ರಿತವೇ ಆಗಿರುತ್ತಿದ್ದವು.

ದೇವಾಲಯಗಳ ಹಿನ್ನೆಲೆಯಲ್ಲಿ ಭಗವಂತನ ದಾಸಿಯರೆಂದು ಗುರುತಿಸಿಕೊಳ್ಳುವ ದೇವದಾಸಿಯರು ಕೂಡ ಧರ್ಮ ಮತ್ತು ರಾಜಪ್ರಭುತ್ವದಡಿಯಲ್ಲಿ ಶೋಷಣೆಗೆ ಒಳಗಾದವರು. ದೇವದಾಸಿಯರು, ದೇವಸೇವಕಿಯರು, ಪಾತ್ರರು (ಪಾತ್ರ), ಬಸವಿಯರು, ಸೂಳೆಯರು ಎಂದು ಗುರುತಿಸಿಕೊಳ್ಳುವ ಇವರನ್ನು ದೇವಾಲಯಗಳು ಶೋಷಣೆಗೆ ಒಳಪಡಿಸಿದ್ದಲ್ಲದೆ, ಶೋಷಣೆಯನ್ನು ಶಾಸನಬದ್ಧಗೊಳಿಸಿದವು.[೧೪]

ಅಧೀನ ಪರಿಕಲ್ಪನೆ

ಅಧೀನ ಎಂಬ ಪದಕ್ಕೆ ಅಧೀನತೆ, ವಶ, ಕೈಕೆಳಗಿರುವ, ಆಶ್ರಿತವಾದ ಎಂಬರ್ಥಗಳಿವೆ. ಇತ್ತೀಚಿನ ದಿನಗಳಲ್ಲಿ ಮುಖ್ಯವಾಗಿ ಪ್ರಧಾನ ಮತ್ತು ಅಧೀನ ಎಂಬ ಪರಿಕಲ್ಪನೆಗಳು ಸಂಸ್ಕೃತಿಗೆ ಸಂಬಂಧಿಸಿದಂತೆ ಬಳಕೆಯಾಗುತ್ತಿವೆ. ಒಂದು ಸಂಸ್ಕೃತಿಯಲ್ಲಿ ಸಮರ್ಪಕ ಸವಲತ್ತುಗಳನ್ನು ಪಡೆದಿರುವುದು ಪ್ರಧಾನ ಸಂಸ್ಕೃತಿ. ಇದು ಎಲ್ಲಾ ಸವಲತ್ತುಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತದೆ. ಸಾಮಾಜಿಕವಾಗಿ ಅಧಿಕಾರದ ವಕ್ತಾರನಂತೆ ನಡೆದುಕೊಳ್ಳುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯಪಾತ್ರವನ್ನು ವಹಿಸುವ ಮೂಲಕ ತನ್ನದೇ ನಿಯಮವನ್ನು ನಿರ್ಮಾಣಮಾಡಿರುತದೆ. ಯಾರು ತಮ್ಮ ಅಧಿಕಾರವನ್ನು ನಿರ್ಮಾಣಮಾಡಲು ಹೊರಡುತ್ತಾರೋ ಅವರು ಉಳಿದವರನ್ನು ಅಧೀನರನ್ನಾಗಿ ಮಾಡಿಕೊಳ್ಳುತ್ತದೆ. ಇದನ್ನು ವ್ಯಷ್ಟಿ ಮತ್ತು ಸಮಷ್ಟಿ ನೆಲೆಯಲ್ಲಿ ಗುರುತಿಸಬಹುದು.

ರಾಜಕಾರಣ, ಅಧಿಕಾರ, ಧರ್ಮ ಇವು ಪ್ರಧಾನ ಸಂಸ್ಕೃತಿಯ ಪ್ರಮುಖ ಮೂಲಭೂತ ಅಂಶಗಳಾಗಿವೆ. ಇವುಗಳ ಆಡಳಿತ ಯಾವಾಗಲೂ ತಮಗೆ ಅಧೀನವಾಗಿರುವವರ ಮೇಲೆ ಒಂದು ಕ್ರಮದಲ್ಲಿರುತ್ತವೆ. ತಾರತಮ್ಯದ ದೃಷ್ಟಿಯಿಂದ ಇವು ಜೀವಂತವಾಗಿರುತ್ತದೆ. ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಯು ಈ ತಾರತಮ್ಯಕ್ಕೆ ಪ್ರಮುಖಕಾರಣಗಳು.

ಸಮಾಜದ ಸಾಮಾನ್ಯ ಸ್ವರೂಪದಲ್ಲಿ ರಾಜ್ಯವಾಳುವ ವರ್ಗ ಮತ್ತು ಧಾರ್ಮಿಕತೆಯನ್ನು ಹೊರತುಪಡಿಸಿದರೆ ಸಾಮಾನ್ಯ ಮನುಷ್ಯರ ಜೀವನ

ಕುತೂಹಲವನ್ನು ಉಂಟುಮಾಡುತ್ತದೆ. ಬಡವ, ಅವಿದ್ಯಾವಂತ, ಅಸ್ಪೃಶ್ಯರೆಂದು ಗುರುತಿಸಿಕೊಂಡವರು, ಕೂಲಿ ಕಾರ್ಮಿಕರು ಮೊದಲಾದವರ ಜೀವನವಿಧಾನ ಹೇಗೆ, ಕಷ್ಟ ಸುಖಗಳೇನು, ಪ್ರಭುತ್ವ ಇವರನ್ನು ಹೇಗೆ ನಡೆಸಿಕೊಳ್ಳುತ್ತಿತ್ತು ಎಂಬ ವಿಷಯಗಳು ಅಧೀನ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಗುರುತಿಸಲ್ಪಡುತ್ತವೆ.

ಸಾಮಾನ್ಯವಾಗಿ ಪ್ರಾಚೀನ ಕನ್ನಡ ಕಾವ್ಯಪರಂಪರೆಯಲ್ಲಿ ಶ್ರೀಮಂತರಾದ ರಾಜ, ಮಹಾರಾಜರ, ಉದಾತ್ತಚರಿತರಾದ ಧಾರ್ಮಿಕ ವ್ಯಕ್ತಿಗಳ, ಅದ್ಭುತ ಚರ್ಯೆಗಳ ಪುರಾಣಪುರುಷರ ಕಥೆಗಳು ವರ್ಣಿತವಾಗಿದೆ. ಆದರೆ ಸಾಮಾನ್ಯರ ಜನಜೀವನ ಚಿತ್ರಣ ಹೆಚ್ಚಿಲ್ಲ.

ಕೊನೆಟಿಪ್ಪಣಿಗಳು

೧. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮, ಪು. ೮೬

೨. ಸಿ.ಎನ್.ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧, ಪು.೬೦

೩. ಶ್ರೀ ವಿಜಯ, ಕವಿರಾಜಮಾರ್ಗಂ, ಸಂ : ಎಂ.ವಿ.ಸೀತಾರಾಮಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫, ಪು. ೭೯

೪. ಅದೇ, ಪು. ೭೯

೫. ಪಂಪ, ವಿಕ್ರಮಾರ್ಜುನ ವಿಜಯ, ೪-೨೯

೬. ಅದೇ. ೪-೩೦

೭. ಡಾ.ಕೇಶವಶರ್ಮ.ಕೆ, ಪುರಂದರದಾಸರ ಕೀರ್ತನೆಗಳಲ್ಲಿ ಪ್ರಭುತ್ವ (ಲೇಖನ), ಅರುಹುಕುರುಹು (ಜನವರಿ-ಮಾರ್ಚ್ ೨೦೧೩) ಪು. ೨೦೯

೮. ಅದೇ, ಪು. ೨೧೧

೯. ಪಂಪ, ವಿಕ್ರಮಾರ್ಜುನ ವಿಜಯ, ೧೨-೯೨

೧೦. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೮, ಪು. ೧೫

೧೧. ರಾಜಾರಾಮ ಹೆಗಡೆ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೧, ಪು. ೨೪

೧೨. ಡಾ.ಕೆ.ಮೋಹನಕೃಷ್ಣರೈ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೪, ಪು. ೧೩೧

೧೩. ಅದೇ, ಪು. ೧೩೩

೧೪. ಅದೇ, ಪು. ೧೨೪

ಅಧ್ಯಾಯ – ೪
ವಡ್ಡಾರಾಧನೆಯಲ್ಲಿ ಸಾಮಾಜಿಕ ಪರಿಕಲ್ಪನೆ

ರಾಜ ಮತ್ತು ಧರ್ಮಪ್ರಭುತ್ವಗಳ ಹಿಡಿತಕ್ಕೊಳಪಟ್ಟು ಬದುಕು ರೂಪಿಸಿಕೊಂಡ ಸಾಮಾನ್ಯ ಜನರ ಜೀವನ ಸ್ವರೂಪವನ್ನು ವಡ್ಡಾರಾಧನಕಾರ ಕಟ್ಟಿಕೊಟ್ಟಿದ್ದಾನೆ. "ಕವಿ ಒಬ್ಬ ಸಮಾಜ ಜೀವಿ. ಇತರ ಅನೇಕರಂತೆ ಅವನೂ ಬದುಕುತ್ತಾನೆ. ಅವನಿಗೆ ಆಗುವ ಅನುಭವಗಳು ಇತರ ಎಲ್ಲರಿಗೂ ಆಗುವ ಅನುಭವಗಳೇ ಸಮಾಜದ ಒಳಿತು, ಕೆಡುಕುಗಳನ್ನು, ನೋವು, ಸುಖ, ನಿರಾಸೆ, ಅನ್ಯಾಯ ಇತ್ಯಾದಿಗಳನ್ನು ಅವನು ಇತರರಂತೆಯೇ ಕಾಣುತ್ತಾನೆ, ಅನುಭವಿಸುತ್ತಾನೆ, ಪ್ರತಿಕ್ರಿಯಿಸುತ್ತಾನೆ."[೧] ಈ ಹಿನ್ನೆಲೆಯಲ್ಲಿ ವಡ್ಡಾರಾಧನೆಯನ್ನು ಗಮನಿಸಿದಾಗ ಶಿವಕೋಟ್ಯಾಚಾರ್ಯ ತನ್ನಕಾಲಕ್ಕೆ ಹೇಗೆ ಸ್ಪಂದಿಸಿದ್ದಾನೆ ಎಂಬುದು ಮುಖ್ಯವಾಗುತ್ತದೆ. ವಡ್ಡಾರಾಧನೆಯ ೧೯ ಕಥೆಗಳೂ ಧಾರ್ಮಿಕ ಕಥೆಗಳಾದರೂ ತತ್ಕಾಲೀನ ಸಮಾಜವನ್ನು ಪರಿಚಯ ಮಾಡುತ್ತವೆ. ಜನರ ಜೀವನ ಕ್ರಮ, ಅವರ ವ್ಯವಹಾರಗಳು, ನಂಬಿಕೆ-ಆಚರಣೆಗಳು ಮೊದಲಾದ ಅಂಶಗಳು ಚಿತ್ರಿತವಾಗಿವೆ. ಕಥೆಗಳಲ್ಲಿ ಗ್ರಾಮೀಣ ಜೀವನ ಚಿತ್ರಣಕ್ಕಿಂತಲೂ ನಗರ ಜೀವನ ಚಿತ್ರಣ ಹೆಚ್ಚು, ಅದರಲ್ಲೂ ಪ್ರಭುತ್ವದ ಪ್ರತಿನಿಧಿಗಳಾದ ರಾಜ-ಮಹಾರಾಜ, ರಾಜಪರಿವಾರ, ಸಾಮಂತರು, ಮಂತ್ರಿವರ್ಗ, ಸೇನಾಧಿಪತಿ, ರಾಜವರ್ತಕ, ಧರ್ಮಾಧಿಕಾರಿ, ಕುಲಪುರೋಹಿತರನ್ನು ಇಲ್ಲಿನ ಕಥೆಗಳು ಹೆಚ್ಚು ಚಿತ್ರಿಸುತ್ತವೆ. ಶಿವಕೋಟ್ಯಾಚಾರ್ಯ ಧರ್ಮ ಮತ್ತು ರಾಜಪ್ರಭುತ್ವ ನೆಲೆಯಿಂದ ಜನ ಸಾಮಾನ್ಯರನ್ನು ಚಿತ್ರಿಸುತ್ತಾನೆ. ವಡ್ಡಾರಾಧನೆಯ ಪ್ರತಿಯೊಂದು ಕಥೆಯೂ ಮೊದಲು ದೇಶ, ನಾಡು, ರಾಜ, ರಾಣಿ, ಮಂತ್ರಿ ಪ್ರಸ್ತಾಪದ ನಂತರವೇ ಉಳಿದವುಗಳನ್ನು ಹೇಳಹೊರಡುತ್ತದೆ. ಇಲ್ಲಿ ರಾಜತ್ವ ಮತ್ತು ಧರ್ಮ ಮುಖ್ಯವಾಗಿ ಗೋಚರಿಸುತ್ತದೆ. ಇದು ಧರ್ಮಪ್ರಚಾರದ ಕೃತಿಯಾಗಿರುವುದರಿಂದ ಧರ್ಮವೇ ಮೇಲುಗೈ ಸಾಧಿಸುತ್ತದೆ. ಆದ್ದರಿಂದ ಇಲ್ಲಿ ಬರುವ ರಾಜರೆಲ್ಲರೂ ಧರ್ಮಪರರಾಗಿ, ಜಿನಭಕ್ತರಾಗಿ ಕಾಣಿಸುತ್ತಾರೆ. ಮುನಿಗಳು ಬಂದಾಗ ರಾಜ ಅವರನ್ನು ಹೋಗಿ ಕಂಡು ಧರ್ಮದ ಉಪದೇಶ ಕೇಳಿಬರುತ್ತಾನೆ. ರಾಜರಿಗೆ ಎಲ್ಲದಕ್ಕಿಂತಲೂ ದೊಡ್ಡದು ಧರ್ಮ, ಧರ್ಮದ ವಿರುದ್ಧವಾಗಿ ಪ್ರಭುತ್ವ ಪ್ರತಿನಿಧಿಗಳು ಕಾಣಿಸಿದರೂ ಅದು ಕರ್ಮಫಲವಾಗಿರುವುದೇ ಹೊರತು ಜೈನ ಧರ್ಮದ ಅಪನಂಬಿಕೆಯಿಂದಲ್ಲ. ಆದರೆ ಪ್ರಭುತ್ವ ಅತ್ಯಂತ ಸೂಕ್ಷ್ಮವಾಗಿ ಸಾಮಾಜಿಕ ಮತ್ತು ನೈತಿಕ

ನಿಯಮಗಳನ್ನು ಉಲ್ಲಂಘಿಸಿರುವುದು ಮತ್ತು ತನ್ನ ನೆರಳಲ್ಲಿ ಬರುವವರ ಸ್ವಾತಂತ್ರ್ಯವನ್ನು ಹರಣಮಾಡಿರುವುದು ಕಥೆಗಳಲ್ಲಿ ಕಾಣಿಸುತ್ತವೆ.

ಗಜಕುಮಾರನ ಕಥೆ ಒಂದು ಚಿಕ್ಕ ಕಥೆ. ಇದೊಂದು ಕಾಮಿಯ ಕಥೆ. ಕಥೆಯೊಳಗೆ ನಮ್ಮನ್ನು ಆಕರ್ಷಿಸುವ ಸಂಗತಿಯೆಂದರೆ ಗಜಕುಮಾರನ ಬಯಕೆ. ಮಹಾಸಾಹಸಿಯಾದ ಅಪರಾಜಿತನನ್ನು ಸೋಲಿಸಿ ಹಿಡಿದು ತಂದದ್ದಕ್ಕೆ ಗಜಕುಮಾರ ವಿಷ್ಣುರಾಜನಿಂದ ಒಂದು ವರವನ್ನು ಬೇಡುತ್ತಾನೆ. "ನಿಮ್ಮ ರಾಣಿನಿವಾಸವೊಂದನ್ನು ಬಿಟ್ಟು ಈ ಪಟ್ಟಣದಲ್ಲಿ ನಾನು ನನಗೆ ಮೆಚ್ಚಿಗೆಯಾದ ಹೆಂಡಿರನ್ನು ಸ್ವೀಕರಿಸಿ ನನ್ನ ಇಚ್ಛೆಗೆ ಮೆಚ್ಚಿಕೆಯಾದಂತೆ ಬಾಳುವೆನು" ಎಂದು ಹೇಳಿದಾಗ ರಾಜನ ಅನುಮತಿ ದೊರೆಯುತ್ತದೆ. ಗಜಕುಮಾರ ವ್ಯಾಪಾರಿಗಳ, ಬ್ರಾಹ್ಮಣರ, ಒಕ್ಕಲಿಗರ, ಸಾಮಂತರ, ಊರೊಳಗಿನ ಸುಂದರಿಯರಲ್ಲಿ ತನ್ನ ಕಣ್ಣಿಗೂ, ಮನಕ್ಕೂ ಒಪ್ಪಿದವರ ಜೊತೆ ಬಾಳುತ್ತಿದ್ದನು. ಹೀಗಿರುವಾಗ ಪಟ್ಟಣದ ಅಕ್ಕಸಾಲಿಗನ ಹೆಂಡತಿಯನ್ನು ಅಪಹರಿಸಿ ಮನೆಯಲ್ಲೆ ಇಟ್ಟುಕೊಂಡು ಆಸಕ್ತನಾಗಿ ಬದುಕುತ್ತಿದ್ದನು. ಇದರಿಂದ ಅಕ್ಕಸಾಲಿಗ ಹೆಂಡತಿಯ ಅಗಲಿಕೆಯಿಂದ ದುಃಖಿತನಾಗಿದ್ದನು. ಅಪರಾಜಿತನನ್ನು ಗೆದ್ದ ಗಜಕುಮಾರನಲ್ಲಿ ಮನುಷ್ಯ ಮೂಲಪ್ರವೃತ್ತಿಯಲ್ಲೊಂದಾದ ಲೈಂಗಿಕ ಬಯಕೆ ಎಚ್ಚೆತ್ತುಕೊಳ್ಳುತ್ತದೆ. ಗಜಕುಮಾರ ಸಿಕ್ಕ ಅವಕಾಶವನ್ನು ಬಳಸಿಕೊಂಡು ಮೃಗತ್ವವನ್ನು ಮೆರೆಯುತ್ತಾನೆ. ರಾಜನನ್ನು ಪ್ರತ್ಯಕ್ಷ ದೇವತೆಯೆಂದು ನಂಬಿದ್ದ ಪ್ರಜೆಗಳ ಮೇಲೆ ದೌರ್ಜನ್ಯವನ್ನು ಮಾಡುವ ಮೂಲಕ ಆಳುವ ವ್ಯವಸ್ಥೆಯ ಕ್ರೂರ ಮುಖವನ್ನು ಬಿಚ್ಚಿಸುತ್ತಾನೆ. ಇಲ್ಲಿ ಪ್ರಭುತ್ವ ಸಾಮಾಜಿಕ ನಿಯಮಗಳ ಅಧಿಕೃತ ಚಹರೆಯನ್ನು ನಾಶಮಾಡಿದೆ. ಗಜಕುಮಾರನ ಲಂಪಟತನವನ್ನು ಪ್ರಸ್ತಾಪಿಸುತ್ತದೆ. "ಕಥೆಯ ತುಂಬ ಲಂಪಟನೊಬ್ಬನ ಸಂಗತಿಯನ್ನೆ ಬಿತ್ತರಿಸುವ ಇದು ಒಂದು ಪೋಲಿ ಕಥೆಯೇ ಆಗಿದ್ದು ಸಮಾಜವಿರೋಧಿ, ಜನವಿರೋಧಿ ನಿಲುವನ್ನೆ ವ್ಯಕ್ತಪಡಿಸುತ್ತದೆ."[2]

ಸಿರಿದಿಣ್ಣನೆಂಬ ಭಟ್ಟಾರಕ ಕಥೆಯಲ್ಲಿ ಅರಸ ಜಿತಶತ್ರುವಿನ ದಾದಿ ಕುಬ್ಜೆಯೂ, ವಿರಳವಾದ ಹಲ್ಲುಗಳುಳ್ಳವಳೂ, ಅತಿಶಯವಾಗಿ ಕೆಟ್ಟರೂಪುಳ್ಳವಳೂ, ಇತರರಿಂದ ಹೇಸಲ್ಪಡುವವಳೂ, ನೋಡಿದ ಜನರಿಗೆ ಹೆದರಿಕೆಯುಂಟುಮಾಡುವವಳೂ, ಆದ ವಿನಯಮತಿ ಹದಿನಾರು ದಿನಗಳ ಉಪವಾಸಮಾಡಿ ಮರಣಹೊಂದಿ ಶ್ರೀಯಾದೇವತೆಯಾಗಿ ಹುಟ್ಟಿ ಭಕ್ತರಿಗೆ ಒಳ್ಳೆಯದನ್ನು ಮಾಡುವಳು ಮತ್ತು ಕರ್ಮಸಿದ್ಧಾಂತದ ಫಲವಾಗಿ ಸಿರಿದಿಣ್ಣ ವ್ಯಂತರ ದೇವ (ಹಿಂದಿನ ಜನ್ಮದಲ್ಲಿ ಗಿಳಿ)ನಿಂದ

ಉಪಸರ್ಗವನ್ನು ಅನುಭವಿಸಿ ಮೋಕ್ಷಪಡೆಯುವುದು ಧಾರ್ಮಿಕ ಅಧ್ಯಯನದಿಂದ ಮುಖ್ಯವಾದರೂ ರಾಜನ ದಾದಿಯ ಬಗ್ಗೆ ಕಥೆ ತಿಳಿಸುತ್ತದೆ. ಅರಸ ಜಿನೇಂದ್ರನ ಮಹೋತ್ಸವವನ್ನು ನೋಡಲು ಹೊರಟಾಗ ಅಮ್ಮಾ ನೀವು ಉತ್ಸವಕ್ಕೆ ಬರುವುದು ಬೇಡ ಎಂದು ಹೇಳುವುದು, ಶ್ರೀಯಾದೇವತೆ ಮಗನನ್ನು ಕೊಟ್ಟಳೆಂದು ಆ ಮಗುವಿಗೆ ತಾಯಿ, ತಂದೆ, ನಂಟರು ಎಲ್ಲರೂ ಸೇರಿಕೊಂಡು ಸಿರಿದಿಣ್ಣ ಎಂದು ಹೆಸರಿಟ್ಟರು, ಸುಮಂತ ರಾಜನ ಮಗಳು ಸುಮತಿ ಸ್ವಯಂವರದಲ್ಲಿ ಸಿರಿದಿಣ್ಣನನ್ನು ವರಿಸುವುದು ಮತ್ತು ಮಗಳು ಹೊರಡುವಾಗ ಬಳುವಳಿಯನ್ನು ನೀಡುವುದು, ಏಳು ಉಪ್ಪರಿಗೆಯ ಮೇಲೆ ನಿಂತು ದಿಕ್ಕುಗಳನ್ನು ನೋಡುವುದು. ಈ ವಿವರಗಳು ರಾಜರ ಜೀವನವನ್ನು ಚಿತ್ರಿಸುತ್ತದೆ. ಕಥೆಯಲ್ಲಿ ಜಿನೇಂದ್ರನ ಮಹೋತ್ಸವಕ್ಕೆ ದಾದಿಯು ಪಾಲ್ಗೊಳ್ಳದಂತೆಮಾಡಿ ರಾಜಪ್ರಭುತ್ವ ಆಕೆಯ ಸ್ವತಂತ್ರವನ್ನು ಹರಣಮಾಡಿದೆ.

ವೃಷಭಸೇನ ಭಟ್ಟಾರಕರ ಕಥೆಯಲ್ಲಿ ಧಾರ್ಮಿಕ ವಿಚಾರಗಳಿಗಿಂತ ಪ್ರಭುತ್ವದ ವಿಚಾರಗಳೇ ಹೆಚ್ಚು ಗೋಚರಿಸುತ್ತದೆ. ರಾಜನ ವಿನೋಧ, ರಾಣಿಯರಲ್ಲಿದ್ದ ವೈಮನಸ್ಸು, ಅರಮನೆಯ ವಾತಾವರಣವನ್ನು ಈ ಕಥೆಯು ಪರಿಚಯಿಸುತ್ತದೆ. ಪ್ರದ್ಯೋತ ರಾಜ ಕಾಡಾನೆಯನ್ನು ಹಿಡಿಯಲು ಆನೆಯ ಮೇಲೇರಿಕೊಂಡು ಹೋದಾಗ, ಸೊಕ್ಕೇರಿದ ಆನೆ ಓಡುತ್ತ ದಂಡಕಾರಣ್ಯವನ್ನು ಪ್ರವೇಶಿಸಿತು. ಮತ್ತೆಯೂ ದೂರ ಹೋಗಲು ಒಂದು ಮರದ ಕೊಂಬೆಯನ್ನು ಹಿಡಿದು ತಪ್ಪಿಸಿಕೊಂಡು ಖೇಡ ಎಂಬ ಊರಿಗೆ ಹೋದಾಗ. ಬಾವಿಯ ಹತ್ತಿರ ಬಂದ ಹೆಣ್ಣನ್ನು "ಕೂಸೆ ನೀರಂ ಕುಡಿಯಲೆಱೆಯಾ" ಎಂದಾಗ ರಾಜನ ರೂಪವನ್ನು ನೋಡಿ ಪ್ರೀತಿಸಿ ನೀರನ್ನು ಕುಡಿಯುವುದಕ್ಕಾಗಿ ಹೊಯ್ದಳು. ರಾಜ ತನ್ನ ಹೆಗ್ಗಡೆಗಳ ಮೂಲಕ ಕನ್ನೆಯನ್ನು ಕೇಳಿ ಪಡೆದು ಮದುವೆಯಾಗಿ ಅವಳಿಗೆ ಪಟ್ಟದ ರಾಣಿಪದವಿಯನ್ನು ನೀಡಿ ಉಪ್ಪರಿಗೆ ಮನೆಯಲ್ಲಿ ಇರಿಸಿದನು. ರಾಜ ಒಂದು ಕಾಡಾನೆಯನ್ನು ಬಂಧಿಸಲು ಒಬ್ಬನೆ ಹೋದಾಗ ಜೀನದತ್ತೆ ಸಿಟ್ಟಾಗಿ ಬೇರೊಂದು ಅರಮನೆಗೆ ಹೋಗಿ ವಾಸಮಾಡಿದಳು. ರಾಜ ಜಿನದತ್ತೆಯನ್ನು ಕರೆದುಕೊಂಡು ಹೋಗದೆ ಇದ್ದದ್ದಕ್ಕೆ ಉಳಿದ ರಾಣಿಯರಿಗೆ ಸಂತೋಷವಾಯಿತು. ಇತ್ತು ಜಿನದತ್ತೆಯನ್ನು ಕಾಣದೆ ಎಲ್ಲಿದ್ದಾಳೆಂದು ಪ್ರಶ್ನಿಸಿದಾಗ ಸಿಟ್ಟಾಗಿ ಬ್ರಹ್ಮಚಾರಿಣೀ ವ್ರತಕೈಕೊಂಡು ತಪಸ್ವಿನಿಯಾಗಿ ಬೇರೊಂದು ಅರಮನೆಯಲ್ಲಿದ್ದಾಳೆ ಅದನ್ನು ಕೇಳಿ ರಾಜ ಕೋಪಗೊಂಡು ಆಕೆಯನ್ನು ಮಸಣದಲ್ಲಿರಿಸಿದನು. ಮತ್ತೆ ಜಿನದತ್ತೆ ಗಂಡು ಮಗು ಹೆತ್ತಾಗ ಅರಮನೆಯಲ್ಲಿರಿಸುವುದು ಇವೆಲ್ಲವೂ ಅರಮನೆಯ ವಾತಾವರಣವನ್ನು

ಪರಿಚಯಿಸುತ್ತವೆ. ರಾಜನಿಗೆ ಸಾಮಾನ್ಯವಾಗಿ ಬಹುಪತ್ನಿಯರಿರುತ್ತಿದ್ದರು. ಪಟ್ಟದರಸಿ ಮತ್ತು ಇತರ ಕಾರಣಗಳಿಂದ ವೈಮನಸ್ಸುಗಳು ಏರ್ಪಡುತ್ತಿದ್ದವು. ರಾಜನಿಗೆ ಗಂಡುಮಗು ಹುಟ್ಟಿದ ವಿಚಾರ ತಿಳಿದುಕೊಳ್ಳಲು ರಾಣಿಯರನ್ನು ಬೇರೆ ಬೇರೆಯಾಗಿ ಕೇಳಿದಾಗ ಅವರು "ಎಮಗೆ ಸೌಭಾಗ್ಯಮಿಲ್ಲದಮರ್ಗೆ ಭರ್ತಾರನ ದೆಸೆಯಿಂದಪ್ಪ ಸೋಟುಂಪಾಟಿಯುಮಿಲ್ಲ"[3] ಎಂಬ ರಾಣಿಯರ ದುಃಖದ ಮಾತುಗಳು ಅವರ ಸ್ಥಿತಿಗತಿಗಳನ್ನು ಸ್ಪಷ್ಟಪಡಿಸುತ್ತವೆ. "ಕನ್ನೆಮಾಡುವ ಗೋಡೆಗಳೊಳಗೆ ದಿನಗಳನ್ನು ಎಣಿಸುತ್ತ ಗಂಡನ ಉಸಿರು ತಾಕದೆ, ಬಸಿರು, ಒಣಗಿದ ಏರುಂಜವ್ವನೆಯರು ಹೇಳುವ ಲೈಂಗಿಕ ಬರದ ಧ್ವನಿರಮ್ಯ ಅಭಿವ್ಯಕ್ತಿ ಹೆಪ್ಪುಗಟ್ಟಿದ ವಾಕ್ಯ ಚಿಂತನೀಯ"[4] ಮತ್ತು ಜಿನದತ್ತೆ ಅರಸ ನನ್ನನ್ನು ಕರೆದುಕೊಂಡು ಹೋಗಲಿಲ್ಲವೆಂದು ಕೋಪಗೊಂಡು ಬೇರ ಅರಮನೆಗೆ ಹೋದಾಗ ರಾಜನಿಗೆ "ಪುರುಷವ್ರತಮಂ ಕೊಂಡು ತಪಸ್ವಿನಿಯಾಗಿ ಪೆಟಿಕೊಂಡು ಮಾಡದೊಳಿರ್ದೊಳೆಂದು"[5] ಹೇಳುವ ಮಾತು ರಾಜರಾಣಿಯರನ್ನು ಬೇರೆಗೊಳಿಸುವ ಸಂಚುಗಳು ಅರಮನೆಯಲ್ಲಿ ನಡೆಯುತ್ತಿತ್ತು ಎಂಬುದು ಸೂಕ್ಷ್ಮವಾಗಿ ತಿಳಿಯುತ್ತದೆ.

ಕಾರ್ತಿಕ ಋಷಿಯ ಕಥೆಯು ರಾಜಪ್ರಭುತ್ವ ಪ್ರಧಾನ ವ್ಯವಸ್ಥೆಯನ್ನು ಬಿಂಬಿಸುತ್ತದೆ. ಕೃತ್ತಿಕಾಪುರವನ್ನು ಆಳುತ್ತಿದ್ದ ಅಗ್ನಿರಾಜನು ಬಂಧುಮತಿ, ಶಿವಸೇನೆ, ಶ್ರೀಮತಿ, ಸ್ವಯಂಪ್ರಭೆ, ಲಕ್ಷ್ಮೀಮತಿ, ಕೃತ್ತಿಕೆ ಎಂಬ ಆರು ಹೆಣ್ಣುಮಕ್ಕಳಲ್ಲಿ ಕೊನೆಯ ಮಗಳನ್ನು ಮದುವೆಯಾಗುತ್ತಾನೆ. ಅಗ್ನಿರಾಜ ತನ್ನ ಬಯಕೆಯನ್ನು ಪೂರೈಸಿಕೊಳ್ಳುವ ವಿಧಾನವನ್ನು ಅತ್ಯಂತ ಸೂಕ್ಷ್ಮವಾಗಿ ನಿರ್ವಹಿಸುತ್ತಾನೆ. ಕಥೆಯಲ್ಲಿ ಮಹಾಸಾಮಂತರು, ಸಾಮಂತರು, ಮಂತ್ರಿವರ್ಗ, ರಾಜಪರಿವಾರಗಳೆಲ್ಲ ಪ್ರಭುತ್ವ ಪ್ರತಿನಿಧಿಗಳು ಅಗ್ನಿರಾಜ ಪ್ರಭುತ್ವದ ಪ್ರತಿನಿಧಿಗಳೆಲ್ಲರನ್ನು ಕರೆಯಿಸಿ "ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕುಂ"[6] ಎಂಬ ಪ್ರಶ್ನೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೇಳಿ "ಒಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ ಪೃಥಿಯನಾಳ್ವೊಂಗಕ್ಕುಂ"[7] ಎಂಬ ಉತ್ತರ ಪಡೆದು "ಮೂರು ಬಾರಿ ಸಾರಿ" ತನ್ನ ಹೆಂಡತಿ ವೀರಮತಿ ಮಹಾದೇವಿಯನ್ನು ಬೇಡಿ ಕೃತ್ತಿಕೆಯನ್ನು ಮದುವೆಯಾಗುತ್ತಾನೆ. ಇದರಿಂದ ಒಂದು ಪ್ರಭುತ್ವ ತನ್ನ ಬಯಕೆಯನ್ನು ಅತ್ಯಂತ ಜಾಣತನದಿಂದ ಹೇಗೆ ಈಡೇರಿಸಿಕೊಳ್ಳುತ್ತದೆ ಎಂಬುದು ತಿಳಿಯುತ್ತದೆ. "ರಾಜನು ಒಂದು ರೀತಿಯಾಗಿ ಪ್ರಜಾರಾಜ್ಯದ ತತ್ವವನ್ನು ಬಳಸುತ್ತಲೇ ತನ್ನ ಇಷ್ಟದ

[illegible]

ಅನೈತಿಕತೆಯನ್ನು ನಿರೂಪಿಸುವ ರೀತಿ ವ್ಯಕ್ತವಾಗುತ್ತದೆ."[೮] ರಾಜನು ಅಲ್ಲಿದ್ದವರನ್ನು ಕೇಳುವುದು ಪ್ರಜಾಭಿಪ್ರಾಯದ ಮನ್ನಣೆ-ಪರಿಗಣನೆ ಎಂದು ಹೇಳಲು ಸಾಧ್ಯವಿದೆಯಾದರೂ ಅದು ತೋರಿಕೆಯ ಪ್ರಜಾಭಿಪ್ರಾಯವಾಗಿದೆ."[೯] ಮತ್ತು ಅನೈತಿಕತೆ ನೈತಿಕಗೊಳಿಸಲು ರಾಜ ತಾತ್ತ್ವಿಕತೆಯನ್ನು ಬಳಸಿಕೊಂಡಿರುವುದು ಗೋಚರಿಸುತ್ತದೆ. ಅಗ್ನಿರಾಜ ಪ್ರಭುತ್ವದ ಪ್ರತಿನಿಧಿಗಳಿಗೆಲ್ಲ ಕೇಳಿದ ಪ್ರಶ್ನೆಗಳನ್ನು ಋಷಿಗಳಿಗೆ ಕೇಳಿದಾಗ "ಆವ ವಸ್ತು ಪೇಟಿಂ ಪೇಟಿಪ್ಪೊಡೆ ತಕ್ಕದು ತಗದುದುಮನಜಿಯಲಕ್ಕುಂ" ಎಂದಾಗ ಅಗ್ನಿರಾಜ "ಇವರೆಲ್ಲರ ಪೇಟ್ವಿಂತು ಪೆಟ್ವಿರೆಲ್ಲರೊಡಂಬಡುವರಲ್ಲರ್ ಬಹುಪ್ರಳಾಪಿಗಳಿವರಂ ಪೊಟಲಿಂದಟ್ಟೆ"[೧೦] ಎನ್ನುತ್ತಾನೆ. ರಾಜ ಋಷಿಗಳು ಕೇಳಿದ ಮರುಪ್ರಶ್ನೆಯಿಂದ ತನ್ನ ಅಭಿಲಾಷೆಗೆ ಇವರು ವಿರುದ್ಧವಾಗುವರೆಂಬುದನ್ನು ಅರಿತು ಬಹುಪ್ರಳಾಪಿಗಳೆಂದು ಕರೆದು ಪಟ್ಟಣದಿಂದ ಹೊರಗಟ್ಟುವಂತೆ ಆಜ್ಞಾಪಿಸುತ್ತಾನೆ. ರಾಜ ಮತ್ತು ಋಷಿಗಳಲ್ಲಿ ಏಕಾಭಿಪ್ರಾಯವಿಲ್ಲ, ವೈರುಧ್ಯವಿದೆ. ಇಲ್ಲಿ ಧರ್ಮಕ್ಕಿಂತ ರಾಜಪ್ರಭುತ್ವವೇ ಮೇಲ್ಮೆ ಸಾಧಿಸಿದೆ.

ಅಗ್ನಿರಾಜ ಮತ್ತು ಕೃತ್ತಿಕೆಗೆ ಇಬ್ಬರು ಮಕ್ಕಳಾದರು. ಅವರಿಗೆ ಕಾರ್ತಿಕ ಮತ್ತು ವೀರಶ್ರೀ ಎಂದು ಹೆಸರಿಟ್ಟರು. ವೀರಶ್ರೀಯನ್ನು ಕೋಗಳಿ ರಾಜ ಕ್ರೌಂಚನಿಗೆ ಕೊಟ್ಟು ಮದುವೆಮಾಡಿದರು. ಮುಂದೆ ತನಗೂ ತನ್ನ ತಾಯಿಗೂ ತಂದೆ ಅಗ್ನಿರಾಜ ಎಂದು ತಿಳಿದು ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿಯಾಗುತ್ತಾನೆ. ಒಮ್ಮೆ ವೀರಶ್ರೀ ತನ್ನ ಅಣ್ಣ ಕಾರ್ತಿಕ ಮುನಿಯನ್ನು ಭಿಕ್ಷೆ ಪಡೆದು ಹೋಗಬೇಕೆಂದು ಬೇಡಿಕೊಳ್ಳುತ್ತಿದ್ದಾಗ, ಕ್ರೌಂಚರಾಜ ನಿತ್ಯವೂ ನನ್ನನ್ನು ಅಗಲಿ ಸವಣನಲ್ಲಿಗೆ ಹೋಗುತ್ತಾಳೆಂದು ಶಕ್ತಿ ಎಂಬ ಆಯುಧದಿಂದ ಕಾರ್ತಿಕನನ್ನು ತಿವಿಯುತ್ತಾನೆ ಮತ್ತು ವೀರಶ್ರೀಯ ತಲೆಗೂದಲನ್ನು ಹಿಡಿದು ದರದರನೆ ಎಳೆದುಕೊಂಡು ಹೋಗುತ್ತಾನೆ.

ರಾಜನಾದವನು ವಿವೇಚನೆ ಇಲ್ಲದೆ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದನು. ಎಷ್ಟೋ ಬಾರಿ ಅವು ದುಡುಕಿನ ನಿರ್ಧಾರಗಳಾಗಿದ್ದವು. ಅಗ್ನಿರಾಜ ತನ್ನ ಮಗಳನ್ನೇ ಮದುವೆಯಾಗಿದ್ದು ಮತ್ತು ಕ್ರೌಂಚರಾಜ ವಿವೇಚನೆ ಇಲ್ಲದೆ. ವೀರಶ್ರೀಯು ಸಮಾಗಮಕ್ಕೆ ಹೋಗುತ್ತಿದ್ದಾಳೆ ಎಂದು ಭ್ರಮಿಸಿದ್ದು ಇಡಿ ವ್ಯವಸ್ಥೆ ರಾಜಪ್ರಭುತ್ವದಿಂದ ಕೂಡಿತ್ತು ಎಂಬುದು ತಿಳಿಯುತ್ತದೆ. ಅಗ್ನಿರಾಜನಿಗೆ ಹೆಣ್ಣುಮಕ್ಕಳಿದ್ದರು ಆದರೆ ಗಂಡು ಮಕ್ಕಳಿರಲಿಲ್ಲ. ರಾಜ ತನ್ನ ಉತ್ತರಾಧಿಕಾರದ ಬಗ್ಗೆ ಯೋಚಿಸಿ ದುಡುಕಿನ ನಿರ್ಧಾರ ಕೈಗೊಂಡಿರಬಹುದೆಂದು ಚರ್ಚಿಸಲು ಸಾಧ್ಯತೆಗಳಿವೆ. ಅಗ್ನಿರಾಜ ಮಗಳನ್ನು

ಮದುವೆಯಾಗುವುದಕ್ಕೆ ಎಲ್ಲರನ್ನೂ ಒಪ್ಪಿಸಲು ಹೋರಾಟಾಗ ಹೆಣ್ಣನ್ನು 'ವಸ್ತು' ಎಂದೇ ಹೇಳುತ್ತಾನೆ. ಮಗಳನ್ನು ಮದುವೆಯಾಗಲು ಹೆಂಡತಿಯನ್ನು ಬೇಡುತ್ತಾನೆ. ಮಗಳನ್ನು ಮದುವೆಯಾಗುತ್ತಾನೆ. ಈ ಎರಡು ಸಂದರ್ಭದಲ್ಲಿ ವೀರಮತಿ ಮತ್ತು ಕೃತ್ತಿಕೆಯ ಅಭಿಪ್ರಾಯಗಳನ್ನು ರಾಜ ಕೇಳುವುದಿಲ್ಲ. ಅವರಿಬ್ಬರ ಮೌನ ರಾಜಪ್ರಭುತ್ವದಿಂದಲೇ ನಿರ್ಮಾಣವಾದುದು.

ಕಥೆಯ ಕೊನೆಯಲ್ಲಿ ಪ್ರಜೆಗಳು ರಾಜನನ್ನು ಅನುಸರಿಸಿ ಅನೈತಿಕವಾಗಿ ನಡೆದುದ್ದರಿಂದ ಊರಿನ ಹೆಸರು ಬೋಗಂಕಾರೋಹಣ ಎಂದು ಬದಲಾಯಿತು. ಒಟ್ಟು ನೈತಿಕತೆಯ ವಲಯದ ಉಲ್ಲಂಘನೆಯು ಕಂಚು ಬರುತ್ತದೆ. ಸಾಮಾಜಿಕವಾಗಿ ಜೀವನ ಶುಭ್ರತೆ, ಸ್ವಚ್ಛತೆಯಿಂದ ಒಂದು ಸೊಗಸನ್ನು ಪಡೆಯುತ್ತದೆ. ಕಥೆಯಲ್ಲಿ ಅದನ್ನು ಮೀರಿರುವ ವರ್ತನೆಗಳು ಕಾಣಿಸುತ್ತವೆ. ಇದರಿಂದ ಒಂದು ಸಮಾಜ ಅಧಃಪತನದ ಹಾದಿಯನ್ನು ಹಿಡಿದಿರುವುದು.

ಅಗ್ನಿರಾಜ ಮಗಳನ್ನು ಮದುವೆಯಾದ ದಿವಸ ಹೆಂಡತಿ ವೀರಮತಿ ವೈರಾಗ್ಯಪರಳಾಗುತ್ತಾಳೆ. ಒಂದೇ ಸಂಬಂಧ ತಾಯಿ-ಮಗಳಲ್ಲಿ ಹೇಸಿಗೆಯನ್ನು ಉಂಟುಮಾಡುತ್ತದೆ. ತನ್ನ ತಂದೆಯೇ ತನ್ನ ತಾಯಿಗೂ ತಂದೆ ಎಂಬ ವಿಷಯ ಕೇಳಿ ಕಾರ್ತಿಕ ವೈರಾಗ್ಯ ಪರನಾಗುತ್ತಾನೆ. ಕಥೆಯು ಸಂಬಂಧಗಳು ಅನೈತಿಕಗೊಂಡಿರುವುದನ್ನು ತಿಳಿಸುತ್ತದೆ. ಕಾರ್ತಿಕನಿಗೆ ಅಗ್ನಿರಾಜ ತಂದೆಯು ಹೌದು, ಅಜ್ಜನೂ ಹೌದು, ವೀರಮತಿ ದೊಡ್ಡಮ್ಮನೂ ಹೌದು, ಅಜ್ಜಿಯೂ ಹೌದು. ಕೃತ್ತಿಕೆಗೆ ಅಗ್ನಿರಾಜ ತಂದೆಯೂ ಹೌದು, ಗಂಡನೂ ಹೌದು. ವೀರಶ್ರೀಯು ವೀರಮತಿಗೆ ಮಗಳೂ ಹೌದು, ಮೊಮ್ಮಗಳೂ ಹೌದು. ಇಲ್ಲಿ ಸಂಬಂಧ ಸಂಕೀರ್ಣತೆಯುಂಟಾಗಿ ಹೇಸಿಗೆಯುಂಟಾಗುತ್ತದೆ. ಅದಕ್ಕಾಗಿ ಕಥೆಗಾರ ವೀರಮತಿ ಮತ್ತು ಕಾರ್ತಿಕನನ್ನು ವೈರಾಗ್ಯಪರರಾಗುವಂತೆ ಮಾಡುತ್ತಾನೆ.

ಎಲ್ಲವನ್ನು ಉಳ್ಳ ರಾಜನನ್ನು ಎಲ್ಲವನ್ನು ಬಿಟ್ಟ ವಿರಾಗಿಗಳು ಉದುರಿಸಬಲ್ಲರು ಎಂಬುದು ಸಾಮಾಜಿಕವಾಗಿ ಮುಖ್ಯವಾಗಿದೆ. ಕಥೆಯು ತುಂಬ ನೇರವಾಗಿ ಅದನ್ನು ಸ್ಪಷ್ಟಪಡಿಸುತ್ತದೆ. ಅಗ್ನಿರಾಜನ ಪ್ರಶ್ನೆಗೆ ಮೊದಲು ಯಾವ ವಸ್ತುವೆಂದು ಹೇಳಿ ಎನ್ನುವುದು ಮತ್ತು ಕ್ರೌಂಚನು ಕಾರ್ತಿಕನನ್ನು ಆಯುಧದಿಂದ ತಿವಿದಾಗ ಜೈಯ್ಯದೆ ಆಕ್ರಮಣವನ್ನು ಸಹಿಸಿಕೊಳ್ಳುವುದು ಇವೆರಡು ಸನ್ನಿವೇಶಗಳು ಪ್ರಭುತ್ವವನ್ನು

ಎದುರಿಸುವುದಕ್ಕೆ ಲೌಕಿಕವನ್ನು ತೊರೆದವರಿಂದ ಮಾತ್ರ ಸಾಧ್ಯ ಎಂಬುದನ್ನು ಸೂಚಿಸುತ್ತವೆ.

ವಡ್ಡಾರಾಧನೆಯಲ್ಲಿ ಪ್ರಾಚೀನ ಭಾರತದ ಸಾಮಾಜಿಕ ಚೌಕಟ್ಟಿಗಿಂತ ಭಿನ್ನವಾಗಿರದ ಚಾತುರ್ವರ್ಣಾಶ್ರಮಕ್ಕೆ ಸಂಬಂಧಿಸಿದ ಸಾಮಾನ್ಯ ಜೀವನದ ಚೌಕಟ್ಟು ಗೋಚರಿಸುತ್ತದೆ. ಕಾರ್ತಿಕ ಋಷಿಯು ಜಿನಾಲಯದಲ್ಲಿ ಪಂಥಾತಿಚಾರ ನಿಯಮವನ್ನು ಮಾಡಿ ದೇವರನ್ನು ವಂದಿಸಿ ಮಧ್ಯಾಹ್ನ ವೇಳೆ ಭಿಕ್ಷೆಗೆ ನಾಲ್ಕೂ ವರ್ಣದ ಮನೆಗಳಿಗೆ ಸುತ್ತುತ್ತಾನೆ.

ಕಥೆಯಲ್ಲಿ ಅರಸೊತ್ತಿಗೆಯ ಬಗ್ಗೆ, ಅನೈತಿಕ ಸಂಬಂಧದ ಬಗ್ಗೆ ವಿರೋಧವಿದೆ. "ಆದರೆ ಈ ರೀತಿಯ ವಿರೋಧಗಳು ವ್ಯಕ್ತವಾಗುವುದು ತ್ಯಾಗದಲ್ಲಿಯೇ ಹೊರತು ಸ್ವೀಕಾರದಲ್ಲಿ ಅಥವಾ ಎದುರಿನ ಮುಖಾಮುಖಿಯಾದ ವಿರೋಧದಲ್ಲಿ ಅಲ್ಲ."[೧೧]

ಕೃತಿಕೆಗೆ ಒಂಬತ್ತು ತಿಂಗಳ ಗರ್ಭವಾಗಲು ಸರವಣ ಎಂಬ ಹೂದೋಟದ ಒಳಗಿರುವ ಸರವಣವೆಂಬ ಬಾವಿಯಲ್ಲಿ ಜಲಕ್ರೀಡೆಯಾಡುವ ಬಯಕೆಯಾಗುತ್ತದೆ. ರಾಜನ ಒಪ್ಪಿಗೆಯಂತೆ ಕೃತ್ತಿಕೆ ನೀರಿನಲ್ಲಿ ಆಡಿ ಮಗನನ್ನು ಹೆತ್ತಳು ಮತ್ತು ಕಾರ್ತಿಕ ಹದಿನಾರು ವರ್ಷ ಪ್ರಾಯದವನಾಗಿದ್ದಾಗ ಉದ್ಯಾನದ ವನಕ್ಕೆ ವನಕೇಳಿಯಾಡಲು ಹೋಗುತ್ತಾನೆ. ಇವು ಪ್ರಾಚೀನ ಅರಸ ಅರಸಿಯರ ಪಾರಂಪರಿಕ ವಿನೋದ ಮಾಧ್ಯಮಗಳು.

ಕಥೆಯು ಬಾದುಬ್ಬೆಯ ಪರ್ವ ಮತ್ತು ಪಗರಣ ಎಂಬ ಎರಡು ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕುಚೆಲ್ಲುತ್ತದೆ. ಕಾರ್ತಿಕ ಋಷಿಯ ತಂಗಿ ವೀರಶ್ರೀಗೆ ಅಣ್ಣನ ಅಗಲಿಕೆಯಿಂದ ತುಂಬ ದುಃಖವಾಗುತ್ತದೆ. ಕ್ರೌಂಚರಾಜ ತನ್ನ ಹೆಂಡತಿಯ ಅಳವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಾನೆ. ಆ ಪ್ರಯತ್ನದ ಸಂದರ್ಭದಲ್ಲಿ ಬಾದುಬ್ಬೆ ಮತ್ತು ಪಗರಣದ ವಿವರಗಳು ದೊರೆಯುತ್ತವೆ. ಇವು ಕ್ರೌಂಚನ ಒಂದು ನಗೆಯ ಪ್ರಸಂಗದಿಂದ ಕರ್ನಾಟಕದಲ್ಲಿ ಪ್ರಚಲಿತವಾಯಿತು ಎಂದು ಕಥೆಯಿಂದ ತಿಳಿದುಬರುತ್ತದೆ. ಪಗರಣ ಒಂದು ಬೀದಿವೇಶ, ಪ್ರಾಚೀನ ಕರ್ನಾಟಕದಾದ್ಯಂತ ಹರಡಿತ್ತು. ಮರದಿಂದ ಮಾಡಿದ ಮುಖವಾಡಗಳನ್ನು ಹಾಕಿಕೊಂಡು ಅಭಿನಯಿಸುತ್ತಿದ್ದರು. ಹೆಚ್ಚು ಕಡಿಮೆ ಇವತ್ತಿನ ಬೀದಿನಾಟಕದ ಚೌಕಟ್ಟಿನಲ್ಲಿತ್ತು ಮತ್ತು ಕಥೆಯಲ್ಲಿ ಬಾದುಬ್ಬೆ ಪರ್ವದ ಬಗ್ಗೆ ಉಲ್ಲೇಖವಿದೆಯೇ ಹೊರತು ಅದಕ್ಕೆ ಸಂಬಂಧಿಸಿದ ವಿವರಗಳು ದೊರೆಯುವುದಿಲ್ಲ.

ಅಭಯಘೋಷರೆಂಬ ಮುನಿಯ ಕಥೆಯು ಕಥೆಗಾರನ ಮುಖ್ಯ ಉದ್ದೇಶವನ್ನು ನೇರವಾಗಿ ಸಾಧಿಸಿಕೊಡುವ ಕಥೆಗಳಲ್ಲಿ ಒಂದು. ಅಭಯಘೋಷ ಪಟ್ಟದ ಚಲುವನ್ನು ಸವಿಯಲು ಸುತ್ತಾಡುತ್ತಿದ್ದನು. ಒಬ್ಬ ಬೆಸ್ತ ಒಂದು ಆಮೆಯನ್ನು ನಾಲ್ಕು ಕಾಲುಗಳನ್ನು ಕಟ್ಟಿ, ಕೊರಳಿಗೆ ಹಗ್ಗ ಸಿಕ್ಕಿಸಿ, ಅದು ನೇತಾಡುವ ಹಾಗೆ ಹಿಡಿದುಕೊಂಡು ಹೋಗುತ್ತಿದ್ದಾಗ ತನ್ನ ಬಿನ್ನಣವನ್ನು ತೋರಿಸಲು ನಾಲ್ಕು ಕಾಲುಗಳೂ ಕತ್ತರಿಸುವಂತೆ ಚಕ್ರವನ್ನೆಸೆಯುತ್ತಾನೆ. ಮುಂದೆ ಅಭಯಘೋಷ ಋಷಿಗಳಾಗಿ ಉದ್ಯಾನವನದಲ್ಲಿ ಕುಳಿತ್ತಿದ್ದಾಗ ಅವನ ಮಗನೇ ಅರಮನೆಯ ಮೇಲುಪ್ಪರಿಗೆಯಿಂದ ಚಕ್ರವನ್ನು ಎಸೆದು ಎರಡು ಕೈಗಳೂ ಕಾಲುಗಳೂ ಕತ್ತರಿಸುತ್ತಾನೆ. ಅಭಯಘೋಷ ಮಾಡಿದ ತಪ್ಪಿಗೆ ಆ ಜನ್ಮದಲ್ಲೇ ಅದೇ ರೀತಿ ಶಿಕ್ಷೆ ಅನುಭವಿಸುತ್ತಾನೆ. ಮಾಡಿದ ತಪ್ಪಿಗೆ ಆ ಜನ್ಮದಲ್ಲೆ ಶಿಕ್ಷೆಗೆ ಒಳಗಾಗುತ್ತೇವೆ ಎಂಬ ತತ್ವವನ್ನು ಕಥೆಯು ಸಾರುತ್ತದೆ. ಆಮೆ ಮತ್ತು ಅಭಯಘೋಷರ ಸಾವುಗಳೆರಡು ರಾಜರ ವಿನೋದದಿಂದಲೇ ಘಟಿಸಿದುದು. ಇದು ರಾಜರ ಅವಿವೇಕ ವಿನೋದದ ಪರಾಕಾಷ್ಠೆ.

ಮೈಯ ಗಾಯಗಳಿಗೆ ಕಟ್ಟಿರುವೆಗಳು ಮುತ್ತಿಕೊಂಡು ತಿನ್ನುತ್ತಿರಲು ಶಾಂತ-ಮನಸ್ಕರಾಗಿದ್ದು ಚಿಲಾತಪುತ್ರ ಮುನಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರದೇವನಾಗಿ ಜನಿಸಿದನು ಈ ಅಂಶವೇ ಕಥೆಗಾರನ ಮುಖ್ಯ ಉದ್ದೇಶವಾದರೂ ಚಿಲಾತ ಪುತ್ರನ ಕಥೆಯು ಪ್ರಭುತ್ವದ ಅನೇಕ ಮುಖಗಳನ್ನು ಪರಿಚಯಿಸುತ್ತದೆ.

ಉಪಶ್ರೇಣಿಕನು ಬೇಟೆಯಾಡಲು ಕುದುರೆಯನ್ನೇರಿ ಒಂದು ಹಂದಿಯನ್ನು ಅದರ ದಾರಿಯನ್ನು ಬೆನ್ನಟ್ಟಿಕೊಂಡು ಹೋದಾಗ ಆ ಕುದುರೆ ಗಾಳಿಯ ಮೂಲಕ ವಾಸನೆ ಹಿಡಿದು ಒಂದು ದಿಕ್ಕಿಗೆ ಓಡುತ್ತ ವಿಂಧ್ಯೆಯ ಕಾಡಿನ ನಟ್ಟನಡುವೆ ಸುರಮ್ಯವೆಂಬ ಬೇಡರಹಳ್ಳಿಯ ಸಮೀಪ ಬರುತ್ತದೆ. ಈ ಸುರಮ್ಯ ಬೇಡರ ಹಳ್ಳಿಯ ಅರಸ ಮಹಾಕಾಳ. ಕ್ಷತ್ರಿಯ ಕುಲದವನು, ದಾಯಾದಿಗಳಿಂದ ಬುಡಸಹಿತ ಕಿತ್ತು ಅಟ್ಟಲ್ಪಟ್ಟವನಾಗಿ, ಬಂದು ಅಲ್ಲಿ ಪಟ್ಟಣವನ್ನು ನಿರ್ಮಾಣಮಾಡಿ ಹಲವು ಕಾಲದಿಂದಲೇ ಇದ್ದನು. ಮಹಾಕಾಳ ರಾಜಕುಲದವನಾದರೂ ದಾಯಾದಿಗಳನ್ನು ಎದುರಿಸಲು ಸಾಧ್ಯವಿಲ್ಲದೆ ಕಾಡಿನೊಳಗೆ ಪಟ್ಟಣಕಟ್ಟಿ ಆಳುತ್ತಿದ್ದನು. ತನ್ನಂತೆ ಸಾಮರ್ಥ್ಯವುಳ್ಳವರನ್ನು ಎದುರಿಸದೆ ಬೇಡರನ್ನು ಅಧೀನ ಮಾಡಿಕೊಂಡು ಆಳುತ್ತಿದ್ದನು. ಈ ವಿಚಾರ ಪರೋಕ್ಷವಾಗಿ ಅಧಿಕಾರಕ್ಕಾಗಿ ದಾಯಾದಿಗಳಲ್ಲಿ ಕಲಹವಿರುತ್ತಿತ್ತು, ಕೆಲವೊಮ್ಮೆ ಊರಿನಿಂದ ಅಟ್ಟುವ ಸಂದರ್ಭಗಳು ಇದ್ದವು ಎಂಬುದನ್ನು ತಿಳಿಸುತ್ತದೆ. ಕಥೆಯಲ್ಲಿ

ಮಹಾಕಾಳನ ಪ್ರಸಂಗದಂತೆ ಚಿಲಾತಪುತ್ರನದು. ಈತನದು ಸ್ವಲ್ಪ ಭಿನ್ನ, ಈತನು ವಿಷಯಲಂಪಟತನವನ್ನು ರಾಜ ಉಪಶ್ರೇಣಿಕ ತಡೆದರೂ ಮುಂದುವರಿಸುತ್ತಾನೆ. ಆಗ ರಾಜನು ಕೋಪಗೊಂಡು ಅವನನ್ನು ನಾಡಿನಿಂದಲೇ ಒಡನೆಯೇ ಅಟ್ಟುತ್ತಾನೆ. ಆತ ಕಾಡಿಗೆ ಹೋಗಿ ಇತರರಿಗೆ ಬರಲು ಸಾಧ್ಯವಾಗದ ಕಡೆಯಲ್ಲಿ ಪಟ್ಟಣವನ್ನು ನಿರ್ಮಿಸಿ, ಅದಕ್ಕೆ ಸುತ್ತಲಾಗಿ ಕೋಟೆಯನ್ನೂ ಗೋಪುರದ ಬಾಗಿಲನ್ನೂ ಮಾಡಿಸುತ್ತೇನೆ. ಇಲ್ಲಿ ಚಿಲಾತಪುತ್ರನ ಪಟ್ಟಣ ರಕ್ಷಣೆಯ ಜಾಣತನವನ್ನು ಗುರುತಿಸಬಹುದು. ತನಗೆ ಅಧೀನರಾದವರನ್ನು ರಕ್ಷಿಸಿಕೊಳ್ಳುವುದರಿಂದ ಅವರಿಗೆ ಆಳುವವನ ಮೇಲೆ ನಂಬಿಕೆ, ಶ್ರದ್ಧೆಯುಂಟಾಗುತ್ತದೆ. ಹಾಗೆ ಮಾಡುವುದು ಅಧೀನಗೊಳಿಸಿಕೊಂಡು ಆಳುವುದಕ್ಕೆ ಪ್ರಭುತ್ವ ಮಾಡುವ ಕೆಲಸವಾಗಿದೆ. ಇದು ಪ್ರಭುತ್ವದ ಒಂದು ಮುಖವಾದರೆ, ಕೋಟೆಯನ್ನು ಕಟ್ಟಿ ಸಮೀಪದ ಊರುಗಳನ್ನು ಗೆದ್ದು ಸೇರಿಸಿಕೊಳ್ಳುತ್ತಾ, ಎದುರಿಸಿದವರನ್ನು ಓಡಿಸುವುದು ಎಳೆದು ಸೂರೆಮಾಡುವುದು ಮತ್ತೊಂದು ಮುಖ ಚಿಲಾತಪುತ್ರ ಈ ಕೆಲಸವನ್ನೇ ಮಾಡುತ್ತಾನೆ. ಪ್ರಭುತ್ವದ ಈ ಎರಡು ಮುಖಗಳು ಚಿಲಾತಪುತ್ರನಲ್ಲಿ ಅಭಿವ್ಯಕ್ತಿಗೊಳ್ಳುತ್ತದೆಯೇ ವಿನಃ ಮಹಾಕಾಳನಲ್ಲಿ ಆಗುವುದಿಲ್ಲ. ಪ್ರಭುತ್ವದಲ್ಲಿ ಚಿಲಾತಪುತ್ರನಂಥವರು ಮಾತ್ರ ಉಳಿಯುತ್ತಾರೆ. ಇದಕ್ಕೆ ಪೂರಕವಾಗಿ ಈತನ ಮತ್ತೊಂದು ಪ್ರಸಂಗವನ್ನು ಗಮನಿಸಬಹುದು. ಉಪಶ್ರೇಣಿಕನು ಉಜ್ಜಯನಿ-ಯನ್ನು ಆಳುತ್ತಿರುವ ಪ್ರದ್ಯೋತನೆಂಬ ರಾಜನು ನನ್ನನ್ನು ಅಲಕ್ಷ್ಯಮಾಡುತ್ತಿದ್ದಾನೆ. ಅವನನ್ನು ಹಿಡಿದು ಬಂಧಿಸಿಕೊಂಡು ಬನ್ನಿ ಎಂದು ತನ್ನ ಮಹಾಸಾಮಂತ ಮಾರುಗನೆಂಬ ಪಟ್ಟಣವನ್ನು ಆಳುವ ಒದ್ದಾಯನಿಗೆ ಆಜ್ಞೆಮಾಡಿದಾಗ, ಆತ ತನ್ನಲ್ಲಿದ್ದ ಚತುರಂಗ ಸೈನ್ಯವೆಲ್ಲವನ್ನೂ ಕೂಡಿಕೊಂಡು ಪ್ರದ್ಯೋತನ ಮೇಲೆ ಬಿದ್ದು ಕಾದಾಡಲು, ಪ್ರದ್ಯೋತನು ಯುದ್ಧದಲ್ಲಿ ಗೆದ್ದು ಒದ್ದಾಯನನ್ನು ಸೆರೆಹಿಡಿದನು ನಂತರ ವಿಜಯನೆಂಬ ಕುಮಾರನು ಹೆಚ್ಚು ಸೈನ್ಯವನ್ನು ಕೂಡಿಕೊಂಡು ಹೋಗಿ, ಒಂದು ಉಪಾಯದಿಂದ ಒದ್ದಾಯನನ್ನು ಸೆರೆಯಿಂದ ಪಾರುಮಾಡಿ ರಾಜಗೃಹಕ್ಕೆ ಹೋದನು. ಆಗ ಪ್ರದ್ಯೋತನು ಕೋಪಗೊಂಡು ಮಗಧೆಯ ನಾಡನ್ನು ಸೂರೆಮಾಡುತ್ತ, ಸುಡುತ್ತ, ಕೆಡಿಸುತ್ತ, ಉಪಶ್ರೇಣಿಕನ ಮೇಲೆ ದಂಡೆತ್ತಿ ಹೋದನು. ಇದನ್ನು ತಿಳಿದ ಉಪಶ್ರೇಣಿಕನು ತನ್ನ ಪಟ್ಟಣದಲ್ಲಿ ಯಾವಾತನೊಬ್ಬನು ಪ್ರದ್ಯೋತನನ್ನು ಹಿಡಿದು ಕಟ್ಟಿಕೊಂಡು ಬರುವನೋ ಆತನಿಗೆ ಅವನು ಬಯಸಿದ ಮೆಚ್ಚನು ಕೊಡುವೆನು ಎಂದು ಪಟ್ಟಣದಲ್ಲಿ ಘೋಷಿಸಿದನು. ಆಗ ಚಿಲಾತಪುತ್ರ ರಾಜನಿಗೆ ನಾನು ಹೋಗುವೆನೆಂದು ತಿಳಿಸಿ

ದೊಡ್ಡದಾದ ಸೈನ್ಯವನ್ನು ಕೂಡಿಕೊಂಡು ಹೋದನು. ದೂತರನ್ನು ಕಳುಹಿಸಿದನು. ಬೇಗನೆ ದಂಡೆತ್ತಿಕೊಂಡು ಹೋಗಿ ಜಲಕ್ರೀಡೆಯಾಡುತ್ತಿದ್ದ ಪ್ರದ್ಯೋತನನ್ನು ತಿವಿದು ಹಿಡಿದು ಬಂಧಿಸಿಕೊಂಡು ಉಪಶ್ರೇಣಿಕನಿಗೆ ಒಪ್ಪಿಸಿದನು. ಹಿಂದೆ ತಿಳಿಸಿದಂತೆ ಸಮಶಾಲಿಯಾಗಿ ನಿಂತವನನ್ನು ಎದುರಿಸಿ ಅವನನ್ನು ಅಧೀನ ಮಾಡಿಕೊಳ್ಳುವುದು ಪ್ರಭುತ್ವ ಎರಡನೆ ಮುಖ.

ಈ ಮೇಲಿನ ಪ್ರದ್ಯೋತನ ಕಥೆಯಲ್ಲಿ ಗಮನಿಸಬೇಕಾದ ಎರಡು ಪ್ರಮುಖ ಅಂಶಗಳು ಇವು:

೧. ಉಪಶ್ರೇಣಿಕ ರಾಜ ಪ್ರದ್ಯೋತ ನನ್ನನ್ನು ಅಲಕ್ಷ್ಯಮಾಡುತ್ತಿದ್ದಾನೆಂದು, ಅವನನ್ನು ಬಂಧಿಸಿಕೊಂಡು ಬರಬೇಕೆಂದು ತಾನು ಹೋಗದೆ ತನ್ನ ಮಹಾಸಾಮಂತ ಒದ್ದಾಯನನ್ನು ಕಳುಹಿಸುತ್ತಾನೆ. ಅವನು ಸೆರೆಸಿಕ್ಕಾಗ, ವಿಜಯ ಎಂಬ ಕುಮಾರನನ್ನು ಕಳುಹಿಸುತ್ತಾನೆ ಮತ್ತು ಪ್ರದ್ಯೋತ ಕೋಪಗೊಂಡು ಮಗಧೆಯ ನಾಡನ್ನು ಸೂರೆಮಾಡುತ್ತ ಸುಡುತ್ತ, ಕೆಡಿಸುತ್ತ ಬರುವಾಗ ಅವನನ್ನು ಹಿಡಿದು ತಂದವರಿಗೆ ಮೆಚ್ಚಿದ್ದನ್ನು ಕೊಡುವೆನು ಎಂದು ಘೋಷಿಸುತ್ತಾನೆ. ರಾಜ, ಮಹಾಸಾಮಂತ, ಸಾಮಂತ, ಮಾಂಡಳಿಕರು ಮೊದಲಾದವರು ಪ್ರಭುತ್ವದ ಪ್ರತಿನಿಧಿಗಳಾದರೂ ರಾಜ ರಾಜ್ಯದ ಅಥವಾ ನಾಡಿನ ಪ್ರಮುಖ ಶಾಸಕನಾಗಿರುತ್ತಿದ್ದನು. ಈ ಪ್ರಭುತ್ವವನ್ನೇ ಕೇಂದ್ರ ಅಥವಾ ಮುಖ್ಯ ಮತ್ತು ಆಧೀನ ಎಂದು ವಿಂಗಡಿಸಿಕೊಳ್ಳಬಹುದು. ಇಲ್ಲಿ ಉಪಶ್ರೇಣಿಕ ಕೇಂದ್ರ ಪ್ರಭುತ್ವದ ಪ್ರತಿನಿಧಿ ಒದ್ದಾಯನ, ವಿಜಯ, ಚಿಲಾತಪುತ್ರರು ಅಧೀನ ಪ್ರದ್ಯೋತನ ಕಥೆಯಲ್ಲಿ ಕೇಂದ್ರ ಪ್ರಭುತ್ವ ಅಧೀನತೆಯ ಮೇಲೆ ಸವಾರಿ ಮಾಡಿದೆ. ಕೇಂದ್ರ ಅಧೀನತೆಯನ್ನು ಮುಂದೆ ಇರಿಸಿ ತಾನು ಹಿಂದೆಯೇ ಅಧಿಕಾರ ನಿರ್ವಹಿಸುತ್ತದೆ.

೨. ತನ್ನ ಹಿತಸಾಧನೆಗಾಗಿ ಅಥವಾ ಗೆಲುವಿಗಾಗಿ ಉಪಶ್ರೇಣಿಕ (ಪ್ರಭುತ್ವ) ಪಟ್ಟಣದಲ್ಲಿ ಪ್ರದ್ಯೋತನನ್ನು ಹಿಡಿದು ತಂದರೆ ಮೆಚ್ಚಿದನ್ನು ನೀಡುವೆನೆಂದು ಆಸೆ ಹುಟ್ಟಿಸುತ್ತಾನೆ.

ವಡ್ಡಾರಾಧನೆಯ ಗಜಕುಮಾರನ ಕಥೆಯಲ್ಲಿ ಬರುವ ಗಜಕುಮಾರನಂಥ ವಿಷಯಲಂಪಟನು ಚಿಲಾತಪುತ್ರ. ಉಪಶ್ರೇಣಿಕ ಪ್ರದ್ಯೋತನನ್ನು ಹಿಡಿದು ತಂದವನಿಗೆ ಮೆಚ್ಚಿದನ್ನು ಕೊಡುವೆನೆಂದು ಹೇಳಿದ್ದರಿಂದ, ಚಿಲಾತಪುತ್ರ ರಾಜನಲ್ಲಿ ಒಂದನ್ನು

ಬೇಡುತ್ತಾನೆ. ನಿಮ್ಮ ಅಂತಃಪುರದ ಸ್ತ್ರೀಯರನ್ನು ಮಾತ್ರ ಬಿಟ್ಟು ಹನ್ನೆರಡು ವರ್ಷಗಳವರೆಗೆ ಇತರ ಹೆಂಗಸರೊಡನೆ ನನಗೆ ಮೆಚ್ಚಿಕೆಯಾದಂತೆ ಬಾಳ್ವೆನಡೆಸುವೆನು. ಇದನ್ನು ನಿಮ್ಮಲ್ಲಿ ಬೇಡಿದ್ದೇನೆ. ಇದನ್ನು ನನಗೆ ದಯೆಮಾಡಿ ಸಲ್ಲಿಸಬೇಕೆಂದು ಕೋರಿದಾಗ ಹಾಗೆಯೇ ಮಾಡು ಎಂದು ರಾಜ ಅನುಮತಿ ನೀಡುತ್ತಾನೆ. ಆತ ಸಾಮಂತ, ಮಹಾಸಾಮಂತರು, ಪರಿವಾರದವರು, ಪ್ರಭುತ್ವವುಳ್ಳವರು, ಬ್ರಾಹ್ಮಣರು, ವರ್ತಕರು– ಇವರ ಒಳ್ಳೊಳ್ಳೆಯ ಪತ್ನಿಯರನ್ನೆಲ್ಲ ಎಳೆದು, ವಿಧೇಯರನ್ನಾಗಿ ಮಾಡಿ, ಒಡಗೂಡಿ ಅವರೊಡನೆ ಹನ್ನೆರಡು ವರ್ಷಗಳವರೆಗೆ ತನ್ನ ಇಚ್ಛೆಯಂತೆ ಬಾಳುತ್ತಾನೆ. ಚಿಲಾತಪುತ್ರ ಉಪಶ್ರೇಣಿಕನ ಮಗನೆ. ರಾಜ ಕೊಟ್ಟ ಮಾತಿಗೆ ತಪ್ಪಬಾರದೆಂದು ಚಿಲಾತಪುತ್ರನ ಅನೈತಿಕ ಬಯಕೆಯನ್ನು ನೈತಿಕಗೊಳಿಸಿ ಜಾರಿಗೊಳ್ಳುವಂತೆ ಮಾಡುತ್ತಾನೆ. ಪ್ರಭುತ್ವದಡಿಯಲ್ಲಿ ಕೇವಲ ಸಾಮಾನ್ಯ ಹೆಣ್ಣುಮಕ್ಕಳಲ್ಲದೆ, ಪ್ರಭುತ್ವದ ಇತರ ಪ್ರತಿನಿಧಿಗಳ ಹೆಣ್ಣುಮಕ್ಕಳ ಮೇಲೂ ದೌರ್ಜನ್ಯ ನಡೆಯುತ್ತಿತ್ತು. ಪ್ರಭುತ್ವದ ಇತರ ಪ್ರತಿನಿಧಿಗಳು ಮತ್ತು ಅವರ ಹೆಂಡತಿಯರ ಮೌನದಲ್ಲಿ ನೋವು ಮತ್ತು ಹಿಂಸೆಯೂ ಅಡಗಿದೆ. ಕಥೆ ಅದನ್ನು ವಿವರಿಸುವುದಿಲ್ಲ.

ಚಿಲಾತಪುತ್ರ ಪಡೆದ ವರದ ಅವಧಿಯು ಮುಗಿದಾಗ, ರಾಜನು ಇಂತಹ ಚೇಷ್ಟೆಗಳನ್ನು ಆಡಲು ಸಲ್ಲದು ಎಂದೂ ತಡೆದರೂ ಬಿಟ್ಟು ಬಿಡದೆ ಮುಂದುವರಿಸಲು ರಾಜ ಕೋಪಗೊಂಡು ಅವನನ್ನು ನಾಡಿನಿಂದಲೇ ಅಟ್ಟಿಬಿಟ್ಟನು. ಅವನು ಕಾಡಿನಲ್ಲಿ ಪಟ್ಟಣ ನಿರ್ಮಿಸಿ ಬಾಳುತ್ತಿದ್ದನು. ಇತ್ತ ಉಪಶ್ರೇಣಿಕನಿಗೆ ಕರ್ಮಗಳ ಉಪಶಮನವೇ ಕಾರಣವಾಗಿ ತಪೋದೀಕ್ಷೆಯನ್ನು ಸ್ವೀಕರಿಸಿ ಹಲವು ಕಾಲ ತಪಸ್ಸನ್ನು ಆಚರಿಸಿ ಸಮಾಧಿಮರಣದಿಂದ ಸ್ವರ್ಗಲೋಕದಲ್ಲಿ ಜನಿಸಿದನು. ಆಮೇಲೆ ಶ್ರೇಣಿಕ ಮಹಾರಾಜನು ಅರಸುತನ ಮಾಡುತ್ತಿದ್ದನು. ಚಿಲಾತಪುತ್ರನ ಸೇವಕನಾದ ಭಟ್ಟಿಮಿತ್ರನೆಂಬುವವನ ಸೋದರಮಾವ ರುದ್ರಮಿತ್ರ ರಾಜಗೃಹದಲ್ಲಿದ್ದನು. ಈತನ ಮಗಳು ಸುಭದ್ರ. ಆಕೆಯನ್ನು ತನಗೆ ಕೊಡಬೇಕೆಂದು ಭಟ್ಟಿಮಿತ್ರನು ಕೇಳಿದಾಗ ಆಕೆಯನ್ನು ಅವನಿಗೆ ಕೊಡದೆ ಬೇರೆಯವರಿಗೆ ಕೊಡಲು ಮುಂದೆ ಬಂದುದರಿಂದ ಭಟ್ಟಿಮಿತ್ರನು ತಮ್ಮ ಅರಸನಾದ ಚಿಲಾತಪುತ್ರನಿಗೆ ನನ್ನ ಸೋದರಮಾವನು ತನ್ನ ಮಗಳನ್ನು ನನಗೆ ಕೊಡುವೆನೆಂದು ಚಿಕ್ಕಂದಿನಲ್ಲಿಯೇ ಹೇಳಿ, ಈಗ ಬೇರೆಯವರಿಗೆ ಈ ದಿನವೇ ಬೇರೆಯವರಿಗೆ ಮದುವೆಮಾಡಿಕೊಡುತ್ತಿದ್ದಾನೆಂದು ಹೇಳಿದಾಗ, ಚಿಲಾತಪುತ್ರನು ತನ್ನ ಸೈನ್ಯದಲ್ಲಿ ಐನೂರು ಮಂದಿ ಯೋಧರನ್ನು ಆರಿಸಿಕೊಂಡು "ಪೊಟಲ್ಗೆವಂದು ಮೊಗವಡಂಗ

ವಿದಿರ್ದರ್ಕೂಸಂ ಭಟ್ಟಿ ಮಿತ್ರಂಗೆ ಕುಡಿಮೆಂದು ಕೀಜೆ"[೧೨] ಚಿಲಾತಪುತ್ರ ಬೇಡಿಕೊಂಡರೂ ಭಟ್ಟಿಮಿತ್ರನಿಗೆ ಕೊಡದಿದ್ದುದರಿಂದ ಕೋಪಗೊಂಡು ಆ ಕನ್ಯೆಯನ್ನು ಎಳೆದುಕೊಂಡು ಹೋದನು ರುದ್ರಮಿತ್ರ ಶ್ರೇಣಿಕ ಮಹಾರಾಜನಿಗೆ ದೂರನ್ನು ನೀಡಲು, "ಅನ್ಯಾಯದೊಳ್ ನೆಗಟ್ಟೂದತನಂ ಕೊಂದು ಕೂಸಂ ಕೊಂಡು ಬನ್ನಿವೆಂದು ಸಾಮಂತ ಮಹಾಸಾಮಂತ ಮುಕುಟಬದ್ಧರ್ಕಳ್ಗೆ ಬೆಸವೇಟ್ಟೊಡವರುಂ ಬಟಿಯನೆ ತಗುಳ್ವರನ್ನೆಗಂ ಪೋಗಲ್ ಪಾಂಗಿಲ್ಲದೆ ಚಿಲಾತಪುತ್ರಂ ಕನ್ನೆಯಂ ಕೊಂದನ್"[೧೩] ಚಿಲಾತಪುತ್ರ ತನ್ನ ಸೇವಕನಿಗಾಗಿ ನಡೆಯುತ್ತಿದ್ದ ಮದುವೆಯಲ್ಲಿ ಸುಭದ್ರೆಯನ್ನು ಅಪಹರಿಸಿಕೊಂಡು ಹೋಗುವಾಗ ಸಾಮಂತ, ಮಹಾಸಾಮಂತರು ಹಿಂದೆಯೇ ಅಟ್ಟಿಕೊಂಡು ಬಂದಾಗ ಬೇರೆಡೆ ಹೋಗಲು ಅವಕಾಶವಿಲ್ಲದ ಸ್ಥಿತಿಯಲ್ಲಿ ಆ ಹೆಣ್ಣನ್ನು ಕೊಲ್ಲುತ್ತಾನೆ. ಸುಭದ್ರೆಯನ್ನು ಭಟ್ಟಿಮಿತ್ರನಿಗೆ ಕೇಳುವಲ್ಲಿ, ಕೊಲ್ಲುವಲ್ಲಿ ಎಲ್ಲವೂ ಪ್ರಭುತ್ವದ ಹಿತಾಶಕ್ತಿಯೇ ಗೋಚರಿಸುತ್ತದೆ. ಆದರೆ ಸುಭದ್ರೆಗೆ ಯಾರನ್ನು ಮದುವೆಯಾಗಲು ಇಷ್ಟವಿತ್ತು ಎಂಬುದೇ ತಿಳಿಯುವುದಿಲ್ಲ. ಸುಭದ್ರೆ ಅಧೀನವ್ಯವಸ್ಥೆಯನ್ನು ಪ್ರತಿನಿಧಿಸುತ್ತಾಳೆ. ಇಲ್ಲಿ ಹೆಣ್ಣಿಗೆ ಸ್ವಾತಂತ್ರ್ಯ ಇದ್ದಂತೆ ಕಾಣುವುದಿಲ್ಲ. ಆದರೆ ಪ್ರಭುತ್ವ ಪ್ರತಿನಿಧಿಯಾದ ಬೇಡರ ಹಳ್ಳಿಯ ಅರಸ ಮಹಾಕಾಳನ ಮಗಳು ಗುಣಸೌಂದರಿ, ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ ಈಕೆ ಹಲವು ಮಂದಿ ಕನ್ಯೆಯರನ್ನೂ ಕಾವಲುಗಾರರನ್ನೂ ಕೂಡಿಕೊಂಡು ಉದ್ಯಾನವನದಲ್ಲಿ ಕ್ರೀಡೆಯನ್ನಾಡಿಕೊಂಡು ಬರುವಾಗ ದಿಕ್ಕುಗೆಟ್ಟು ಬಂದ ಉಪಶ್ರೇಣಿಕನ ರೂಪವನ್ನು ಕಂಡು ಪ್ರೀತಿಸಿ ನೋಡಿದಳು. ಅವನೂ ಈಕೆಯನ್ನು ಮೋಹಪಟ್ಟು ಸೋತುನೋಡಿ ಪರವಶನಾಗಿ ಬಹಳ ಹೊತ್ತಿನವರೆಗೆ ಪ್ರೀತಿಯಿಂದ ನೋಡಿದನು. ಆಗ ಕಾವಲಿನವರು ಗುಣಸೌಂದರಿಯನ್ನು ಬೈದು ಕರೆದುಕೊಂಡು ಹೋಗುವಾಗ ಆಕೆ "ನೀವಲ್ಲದೆನಗುಟಿದ ಪುರುಷರ್ ಮೊಜೆಯಲ್ಲರ್."[೧೪] ಎಂದು ಒಂದು ಓಲೆಯನ್ನು ಬರೆದು ಹಿಂದುಗಡೆಯಿಂದ ಬಿಸಾಡಿಹೋದಳು. ಉಪಶ್ರೇಣಿಕ ಆ ಓಲೆಯನ್ನು ಓದಿ ಸಂತಸಗೊಂಡು ಅವಳ ತಂದೆಯನ್ನು ಕೇಳಿ ಮದುವೆಯಾಗುತ್ತಾನೆ. ಬೇರೆ ಬೇರೆ ಸಾಮಾಜಿಕ ನೆಲೆಗಳಲ್ಲಿ ಸುಭದ್ರೆ ಮತ್ತು ಗುಣಸೌಂದರಿಯ ಸ್ವಾತಂತ್ರ್ಯ ಬೇರೆಯೇ ಇವೆ. ಸುಭದ್ರೆಗೆ ಇಷ್ಟವಾದವರ ಬಗ್ಗೆ ಏನು ಹೇಳದೆ ಮೌನವಾದರೆ, ಗುಣಸೌಂದರಿ ಬರೆದು ಹೇಳುತ್ತಾಳೆ.

ಕಾರ್ತಿಕ ರಿಸಿಯ ಕಥೆಯಲ್ಲಿ ಕಾರ್ತಿಕನ ತಂಗಿ ವೀರಶ್ರೀಯನ್ನು ಕೋಗಳಿ ಎಂಬ ಐನೂರು ಗ್ರಾಮಗಳುಳ್ಳ ಪಟ್ಟಣವನ್ನು ಅಳತಕ್ಕೆ ಕ್ರೌಂಚನೆಂಬ ರಾಜನಿಗೆ ಮದುವೆ ಮಾಡುತ್ತಾರೆ. ದಂಡಕ ರಿಸಿಯ ಕಥೆಯಲ್ಲಿ ದಂಡಕನ ತಂಗಿ ನಂದವತಿಯನ್ನು ಅರ್ಧಚಕ್ರವರ್ತಿಯಾದ ವಿಷ್ಣುವಿಗೆ ಕೊಟ್ಟು ಮದುವೆ ಮಾಡುತ್ತಾರೆ. ಚಿಲಾತಪುತ್ರನ ಕಥೆಯಲ್ಲಿ ಮಹಾಕಾಳನ ಮಗಳು ಗುಣಸೌಂದರಿ ಉಪಶ್ರೇಣಿಕನನ್ನು ಇಷ್ಟಪಟ್ಟಾಗ ಹಳ್ಳಿಗೆ ಬರುವನು. ಮಹಾಕಾಳ ಆನೆಗಳ ದಂತಗಳು, ಮುತ್ತುಗಳು, ಹುಲಿದೊಗಲುಗಳು, ಚಮರೀ ಮೃಗಗಳು ಇವೆಲ್ಲವನ್ನು ಕಾಣಿಕೆಯಾಗಿ ತಂದು ಉಪಶ್ರೇಣಿಕನನ್ನು ಕಾಣುತ್ತಾನೆ, ಕ್ಷೇಮ ಕುಶಲಗಳನ್ನು ಕೇಳಿದ ನಂತರ "ನಿಮ್ಮ ಕುಲಮೇನೆಂದು ಬೆಸಗೊಂಡೊಡಾತನರಸು ಕುಲಮೆಂದು"[೧೫] ಹೇಳಿದಾಗ ಉಪಶ್ರೇಣಿಕ ಸಂತೋಷಪಟ್ಟು, ನಂತರ ಬೇಡರಸನ ಮಗಳನ್ನು ಅಪೇಕ್ಷಿಸಿ ಅದಕ್ಕಾಗಿ ಜನಕಳುಹಿಸಿ ಸಮ್ಮತಿಪಡೆದನು. ಪ್ರಾಚೀನ ಭಾರತದ ಸಾಮಾಜಿಕ ಚೌಕಟ್ಟಿಗಿಂತ ಭಿನ್ನವಾಗಿರದ ಚಾತುವರ್ಣಾಶ್ರಮದ ಚಿತ್ರಣ ವಡ್ಡಾರಾಧನೆಯಲ್ಲಿದೆ. ವೈವಾಹಿಕ ಸಂಬಂಧಗಳು ಈ ಚೌಕಟ್ಟನ್ನು ಮೀರಿ ನಡೆಯುತ್ತಿರಲಿಲ್ಲ ಎಂಬುದನ್ನು ಗುರುತಿಸಬಹುದಾದರೂ ಅದಕ್ಕೆ ಅಪವಾದಗಳೆಂಬಂತೆ ಕೆಲವು ಉದಾಹರಣೆಗಳು ಸಿಗುತ್ತವೆ. ಉಪಶ್ರೇಣಿಕ ಗುಣಸೌಂದರಿಯ ತಂದೆಯನ್ನು ಯಾವ ಕುಲವೆಂದು ಕೇಳಿ, ಅರಸುಕುಲವೆಂದು ತಿಳಿದಾಗ ಸಂತೋಷಗೊಂಡು ಮದುವೆಯಾಗುತ್ತಾನೆ. ಕ್ಷತ್ರಿಯ ಮನೆತನದ ವೀರಶ್ರೀ, ನಂದವತಿಯೂ ಕ್ಷತ್ರಿಯ ಮನೆತನದ ರಾಜರುಗಳನ್ನೆ ಮದುವೆ ಆಗುತ್ತಾರೆ. ಆದರೆ ಇದಕ್ಕೆ ಅಪವಾದವೆಂಬಂತೆ ಶ್ರೇಣಿಕನ ಮದುವೆ ಇದೆ. ಉಪಶ್ರೇಣಿಕ ರಾಜ ಜೋಯಿಸನನ್ನು ಕರೆಯಿಸಿ "ಎನ್ನ ಮಕ್ಕಳೊಳಗೆ ರಾಜ್ಯಾರ್ಹರಾರೆಂದು"[೧೬] ಕೇಳಿದಾಗ ಐನೂರು ಮಂದಿ ಮಕ್ಕಳಿಗೆ ಒಂದೇ ಪಂತಿಯಲ್ಲಿ ಪಾಯಸವನ್ನು ಬಡಿಸಿ ಐನೂರು ನಾಯಿಗಳನ್ನು ಅವರ ಮೇಲೆ ಬಿಟ್ಟರೆ ಯಾವಾತನೊಬ್ಬನು ಹೆದರದೆ ಊಟಮಾಡುವನೋ ಅವನು ತಕ್ಕವನಾಗುವನು. ಅದಲ್ಲದೆ, ಅರಮನೆಗೆ ಬೆಂಕಿಬಿದ್ದಾಗ ಯಾವನೊಬ್ಬನು ಸಿಂಹಾಸನ, ಶ್ವೇತಚ್ಛತ್ರ, ಪಾಳಿಧ್ವಜ ಮೊದಲಾಗುಳ್ಳ ರಾಜಚಿಹ್ನೆಗಳನ್ನು ಓಡಿಮುಕೊಳ್ಳುವನೋ ಅವನು ರಾಜ್ಯಕ್ಕೆ ಅರ್ಹನಾಗುವನು ಎಂದು ಹೇಳುತ್ತಾನೆ. ಅದರಂತೆ ಉಪಶ್ರೇಣಿಕ ಪರೀಕ್ಷಿಸಿದಾಗ ಉಪಶ್ರೇಣಿಕನ ಹೆಂಡತಿ ಜಯಾವತಿಯ ಮಗ ಶ್ರೇಣಿಕನು ನಾಯಿಗಳಿಗೆ ಪಾಯಸವನ್ನು ಇಕ್ಕಿ ತಾನೂ ಊಟಮಾಡಿದನು. ಉಳಿದವರು ಓಡಿಹೋದರು. ಒಂದು ದಿವಸ ಅರಮನೆಯಲ್ಲಿ ಬೆಂಕಿ ಕಾಣಿಸಿಕೊಂಡಾಗ ಉಳಿದವರು ಭಂಡಾರವನ್ನೂ, ಆನೆಗಳನ್ನೂ,

ಶಸ್ತ್ರಾಸ್ತ್ರಗಳನ್ನೂ ರಕ್ಷಿಸಲು ಹೆಣಗಾಡಿದರು. ಶ್ರೇಣಿಕ ರಾಜ್ಯ ಚಿಹ್ನೆಗಳನ್ನು ಹಿಡಿದುಕೊಂಡನು. ಇವನು ಇಲ್ಲಿದ್ದರೆ ಹಲವರು ಸಿಟ್ಟಾಗುವರೆಂದು ಬೇರೆ ನೆಪವೊಡ್ಡಿ ಶ್ರೇಣಿಕನನ್ನು ರಾಜ್ಯದಿಂದ ಅಟ್ಟಿದನು. ಆತ ದಕ್ಷಿಣ ಮಧುರೆಗೆ ಬಂದು, ಅಲ್ಲಿ ಇಂದ್ರದತ್ತನೆಂಬ ಸೆಟ್ಟಿ ಮತ್ತು ಶ್ರೀಕಾಂತೆಯೆಂಬ ಸೆಟ್ಟಿತಿ ಮಗಳು ಅಭಯಮತಿಯನ್ನು ಮದುವೆಯಾಗುವನು ಕ್ಷತ್ರಿಯ ಶ್ರೇಣಿಕ ವೈಶ್ಯಯ ಮಗಳನ್ನು ಮದುವೆಯಾಗುತ್ತಾನೆ.

ಚಾಣಕ್ಯರಿಸಿಯ ಕಥೆಯಲ್ಲಿ ಕೆಲವು ಐತಿಹಾಸಿಕ ಸಂಗತಿಗಳಿವೆ ಮತ್ತು ಸಾಮಾಜಿಕ ಸಂಗತಿಗಳ ಮೇಲೆ ಬೆಳಕು ಚಲ್ಲುತ್ತದೆ. ಮುಖ್ಯವಾಗಿ ಅಧಿಕಾರಕ್ಕೆ ನಡೆಯುವ ಪೈಪೋಟಿಯ ಚಿತ್ರಣದಲ್ಲಿ ಧರ್ಮದ ವಿಚಾರವೇ ಗೌಣವಾಗಿದೆ. “ಈ ಕಥೆಯ ಬಹುಪಾಲು ಭಾಗವು ಅಜೈನ ಹಿನ್ನೆಲೆ, ಉಪಕತೆ ಮತ್ತು ಘಟನೆಗಳನ್ನೊಳಗೊಂಡಿದೆ. ಆರಂಭದಲ್ಲಿ ಕೊಡಲಾದ ಭಗವತೀ ಆರಾಧನೆಯ ಗಾಹೆ ಪಾಠ್ಯದಲ್ಲಿಯ ಜೈನವರ್ಣ ಹೊಂದಿದ ಕೆಲವು ಪದಗುಚ್ಚ ಮತ್ತು ಸಾಲುಗಳ ಹೊರತಾಗಿ ಜೈನಧಾರ್ಮಿಕ ವಾತಾವರಣ ಕಥೆಯ ಕೊನೆಯಲ್ಲಿ ಮೂರು ಪರಿಚ್ಛೇದಗಳಲ್ಲಿ ಮಾತ್ರ ಕಾಣಿಸಿಕೊಳ್ಳುವುದು”[೧೭] ವಡ್ಡಾರಾಧನಕಾರ ಧಾರ್ಮಿಕ ಚೌಕಟ್ಟಿನಲ್ಲಿ ಚಾಣಾಕ್ಯರಿಸಿಯ ಕಥೆಯನ್ನು ಸಮರ್ಥಿಸಲು ಸಾಧ್ಯವಾಗಿಲ್ಲ. ಚಾಣಾಕ್ಯನ ಕಥೆಯನ್ನು ಕಥೆಗಾರ ತನ್ನ ಉದ್ದೇಶಕ್ಕಾಗಿ ಬದಲಾವಣೆಗಳನ್ನು ಮಾಡಿಕೊಂಡು ತುಸು ದೀರ್ಘವಾಗಿ ನಿರೂಪಿಸಿರುವನು.

ಈ ಕಥೆಯಲ್ಲಿ ಕೆಲವು ಐತಿಹಾಸಿಕ ಅಂಶಗಳು ದೊರೆಯುತ್ತವೆ. ನಂದರನ್ನು ನಾಶಮಾಡಿ ಚಂದ್ರಗುಪ್ತನು ಪಟ್ಟಕ್ಕೆ ಬಂದು ಮೌರ್ಯಸಾಮ್ರಾಜ್ಯವನ್ನು ಸ್ಥಾಪನೆ ಮಾಡುವನು. ಈ ಕೆಲಸದಲ್ಲಿ ಚಾಣಾಕ್ಯನೆಂಬುವ ಒಬ್ಬ ಬ್ರಾಹ್ಮಣನು ಪ್ರಮುಖ ಪಾತ್ರವಹಿಸುವನು. ಈ ವಸ್ತುವನ್ನು ‘ಚಾಣಾಕ್ಯರಿಸಿಯ ಕಥೆ’ಯು ಒಳಗೊಂಡಿದೆ. ಆದರೆ ಸಾಕಷ್ಟು ವ್ಯತ್ಯಾಸಗಳಿವೆ. ಅದು ಇಲ್ಲಿ ಮುಖ್ಯವಾದುದಲ್ಲ. ಕಥೆಯು ರಾಜತ್ವದ ವಂಚನೆ, ಮೋಸ, ಅಧಿಕಾರದ ಸ್ವಾರ್ಥ ಬಹಳ ಸೂಕ್ಷ್ಮವಾಗಿ ಚಿತ್ರಿಸುತ್ತದೆ.

ಪದ್ಮನೆಂಬ ಅರಸನ ಮಹಾರಾಣಿ ಸುಂದರಿಯನ್ನು ನೋಡಿ ಮಂತ್ರಿ ಕಾಪಿ (ವಿಶ್ವಸೇನ) ಮೋಹಿತಗೊಳ್ಳುತ್ತಾನೆ. ಅದಕ್ಕಾಗಿ ಆತ ಅರಸನನ್ನು ಕೊಂದು ಅರಸಿಯೊಂದಿಗೆ ಬಾಳುವುದಕ್ಕಾಗಿ ಶತ್ರುರಾಜ್ಯದ ರಾಜರನ್ನು ಪದ್ಮನ ಮೇಲೆ ದಂಡೆತ್ತಿ ಬರುವಂತೆ ಮಾಡುತ್ತಾನೆ. ಮುಂದೆ “ದೇವಾ ನಿಮ್ಮ ಸಾರಮಪ್ಪ

ದ್ರವ್ಯಮನಾರುಮಱಿಯದಲ್ಲಿ ಮಡಗಿನಾಮುಚ್ಚ ವಿಗ್ರಹದೊಳ್ ನಿಂದು ಕಾದುವಂ"[೧೮] ಎಂದು ಸಲಹೆ ನೀಡಿ, ಅಮೂಲ್ಯವಸ್ತುಗಳನ್ನು ಬಚ್ಚಿಡುವ ಸ್ಥಳವನ್ನು ತೋರಿಸುವ ನೆವದಿಂದ ರಾಜನನ್ನು ಮುಂಜಾನೆಯ ಹೊತ್ತಿನಲ್ಲಿ ಉದ್ಯಾನವನಕ್ಕೆ ಒಡಗೂಡಿಕೊಂಡು ಹೋಗಿ ಆಳವಾಗಿರುವ ಮತ್ತು ಬಹಳ ಕೆಸರನ್ನುಳ್ಳ ಹಳೆಯ ಬಾವಿಯ ದಡದಲ್ಲಿ ತಿವಿದುಕೊಂದು ಬಾವಿಗೆ ನೂಕಿದನು. ಮನುಷ್ಯನು ದಟ್ಟ ವ್ಯಾಮೋಹಿಯಾಗಿರುತ್ತಾನೆ. ಮನುಷ್ಯನ ಮನಸ್ಸಿನಲ್ಲಿ ಸುಪ್ತ ಲೈಂಗಿಕ ಬಯಕೆಯು ಗುಪ್ತವಾಗಿರುತ್ತದೆ. ಅದನ್ನು ಪೂರೈಸಿಕೊಳ್ಳಲು ಆತ ಯಾವ ಕೆಳ, ನೀಚ ನೆಲೆಗೆ ಇಳಿಯುತ್ತಾನೆ ಎಂಬುದಕ್ಕೆ ಉದಾಹರಣೆಯೆ ಮಂತ್ರಿ ಕಾಪಿ. ರಾಜ ಪ್ರತ್ಯಕ್ಷದೇವತೆ ಮತ್ತು ಅನ್ನದ ಹಂಗು ಈ ಎರಡು ಪ್ರಾಚೀನ ಮೌಲ್ಯ ಪರಿಕಲ್ಪನೆಗಳಿಗೆ ಕಾಪಿ ಧಕ್ಕೆ ತರುತ್ತಾನೆ. ಅರಸಿಯ ಮೇಲಿರುವ ವ್ಯಾಮೋಹದಿಂದ ನಂಬಿಕೆ ದ್ರೋಹ ಮತ್ತು ಕೊಲೆಯಂಥ ಕೃತ್ಯಗಳನ್ನು ಎಸಗುತ್ತಾನೆ. ಸಾಮಾನ್ಯವಾಗಿ ಇಂಥ ಕೃತ್ಯಗಳು ರಾಜ್ಯಪಟ್ಟದ ಅಧಿಕಾರಕ್ಕಾಗಿ ಆಗುತ್ತವೆ ಆದರೆ ಇಲ್ಲಿ ರಾಣಿಯ ಮೇಲಿನ ವ್ಯಾಮೋಹದಿಂದ ಆಗಿರುವುದು ಗಮನಾರ್ಹ. ಕಾಪಿ ರಾಜನನ್ನು ಎಲ್ಲಾ ಕಡೆಗಳಲ್ಲೂ ಹುಡುಕಿ, ಕೃತಕಶೋಕವನ್ನು ವ್ಯಕ್ತಪಡಿಸಿ, ಪದ್ಮನ ಮಗ ಮಹಾಪದ್ಮನಿಗೆ ರಾಜ್ಯಾಭಿಷೇಕವನ್ನು ಮಾಡಿ ರಾಜ್ಯಪಟ್ಟಗಟ್ಟಿ ಸುವ್ರತೆ ಎಂಬ ರಾಣಿಗೆ ಪಟ್ಟದ ರಾಣಿಯ ಸ್ಥಾನವನ್ನು ಕೊಟ್ಟು, ಮಂತ್ರಿ ಕಾಪಿ ಸುಂದರಿ ಮಹಾದೇವಿಯೊಂದಿಗೆ ರಹಸ್ಯ ಸಂಬಂಧವಿಟ್ಟು ಬಾಳುತ್ತಾನೆ. ಅರಮನೆಯ ವಾತಾವರಣದಲ್ಲಿ ಏರ್ಪಡುತ್ತಿದ್ದ ಅನೈತಿಕ ಸಂಬಂಧದ ಮೇಲೆ ಕಥೆಯು ಬೆಳಕು ಚೆಲ್ಲುತ್ತದೆ.

ಕಾಪಿ ಮಂತ್ರಿಯು ರಾಜ ಪದ್ಮನನ್ನು ತಿವಿದುಕೊಂದು ಬಾವಿಗೆ ನೂಕಿದ ಘಟನೆಯನ್ನು ಮರದ ಮೇಲಿದ್ದ ಹೂವನ್ನು ಕೊಯ್ಯುವ ವಸಂತಕನೆಂಬ ಮಾಲೆಗಾರನು ಅರಸನ ಮರಣವನ್ನು ಕಂಡು ಕಾಪಿಗೆ ಹೆದರಿ ಹಾರಿ ಓಡಿಹೋದನು. ವಸಂತಕನು ತನ್ನ ಹೆಂಡತಿಯ ಅಗಲಿಕೆಯಿಂದ ಉಂಟಾದ ದುಃಖದಿಂದ ವಿಶೇಷಾರ್ಥದ ಸಂಬಂಧವುಳ್ಳ ಮಾತನ್ನು ಈ ರೀತಿ ಹೇಳುವನು.

ನೀಲೋತ್ಪಲದಳಶ್ಯಾಮೇ ಬಾಲೇ ನೀಲಸರೋರುಹೇ ।
ದಹ್ಯೇಹಂ ತ್ವದ್ಗುಣೈರ್ಭದ್ರೇ ವಿಶ್ವಂ ಶಾಖೇನ ಕಂಪಿತಾ ॥[೧೯]

ಇದನ್ನು ಕೇಳಿದ ಮಹಾಪದ್ಮ ದೂತರನ್ನು ಕಳುಹಿಸಿ, ಅವನನ್ನು ಬರಿಸಿ, "ಎಮ್ಮರಸನಂ ಕೊಂದವನಂ ನೀನಱಿವೆಯುಂಜದೆ ಪೇೞಲ್ಲದಿರ್ದೊಡೆ ನಿನ್ನಂ ಕೊಲಿಸಿದಪ್ಪೆನ್"[೨೦] ಎಂದು ಹೇಳುತ್ತಾನೆ. ವಸಂತಕ ಕಾಪಿ ರಾಜನನ್ನು ಕೊಂದ

ಘಟನೆಯನ್ನು ಹೇಳಿ, ಮರಹತ್ತಿ ಹೊಗೊಯ್ಯುತ್ತಿದ್ದ ನಾನು ಅದನ್ನು ಕಂಡು ಎಲ್ಲಿಯಾದರೂ ನನ್ನನ್ನೂ ಕೊಲ್ಲುವನೆಂದು ಹೆದರಿಕೆಯಿಂದ ಹಾರಿ ಓಡಿ ತಪ್ಪಿಸಿಕೊಂಡೆನು ಎನ್ನುತ್ತಾನೆ. ಅದಕ್ಕೆ ರಾಜ ಮೆಚ್ಚಿ, ವಿಶೇಷವಾಗಿ ಹೂಗಳ ಆಭರಣ ವಸ್ತ್ರಾದಿಗಳನ್ನೂ ಕೆಲವು ಕ್ಷೇತ್ರಗಳನ್ನೂ ಕೊಟ್ಟು ಅವನನ್ನು ಸಂತೋಷಗೊಳಿಸಿದನು. ಈ ಒಂದೇ ಘಟನೆಯಲ್ಲಿ ಪ್ರಭುತ್ವದ ಎರಡೂ ಸೂಕ್ಷ್ಮ ಮುಖಗಳನ್ನು ಗುರುತಿಸಬಹುದು. ಪದ್ಮರಾಜನ ಕೊಲೆಯನ್ನು ನೋಡಿ ಕಾಪಿ ಮಂತ್ರಿ ಎಲ್ಲಿ ನನ್ನನ್ನು ಕೊಲ್ಲುತ್ತಾನೋ ಎಂದು ಪ್ರಾಣಭಯದಿಂದ ಓಡುತ್ತಾನೆ ಮತ್ತು ಎಲ್ಲರಿಗೂ ತಿಳಿಸಲು ಹೆದರುತ್ತಾನೆ. ಅದೇ ಪ್ರಾಣಭಯವನ್ನು ಮುಂದಿಟ್ಟು ಪದ್ಮರಾಜನ ಮಗ ಮಹಾಪದ್ಮ ಆತನಿಂದ ತಂದೆಯ ಕೊಲೆಯ ರಹಸ್ಯವನ್ನು ಹೇಳಿಸಿ, ಬಹುಮಾನ ನೀಡುತ್ತಾನೆ. ತನಗೆ ಬೇಕಾದ ಸತ್ಯವನ್ನು ಹೇಳಿದ ಎಂದು ಬಹುಮಾನವನ್ನು ನೀಡಿದ ಮಹಾಪದ್ಮ, ಮಂತ್ರಿಯ ದುಷ್ಟಕೃತ್ಯವನ್ನು ಎಲ್ಲರೂ ತಿಳಿಯುವಂತೆ ಹೇಳಿ ಅವನ ಮಕ್ಕಳು, ಗೆಳೆಯರು, ಹೆಂಡಿರು, ಸಜ್ಜನರು, ಬಂಧುಗಳು ಸಮೇತವಾಗಿ ಕೊಲ್ಲಲು ಯೋಚಿಸಿದನು. ಸಾಮಂತಾದಿಗಳು ತಡೆಯಲು ಅವರೆಲ್ಲರನ್ನು ನೆಲಮನೆಯಲ್ಲಿ ಸೆರೆಯಾಗಿಸಿದನು. ಒಂದು ಮಣ್ಣಿನ ಮುಚ್ಚಳ (ಶ್ರಾವೆ) ಹೋಗುವಷ್ಟು ಸಂದು ಬಿಡಿಸಿ ಪ್ರತಿದಿನವೂ ಒಂದು ಶ್ರಾವೆ ತುಂಬ ಅನ್ನವನ್ನು, ಒಂದು ಮೊಗೆ ನೀರನ್ನೂ ಆ ನೆಲಮನೆಯೊಳಕ್ಕೆ ಕೊಡುವಂತೆ ಮಾಡಿದನು. ಅರಸನಿಗೆ ಸಂತೋಷವಾದರೆ ಬೆಲೆಬಾಳು ವಸ್ತುಗಳು, ಸನ್ಮಾನ ಎಲ್ಲವೂ, ಕೋಪಗೊಂಡರೆ ಮರಣಸಂಕಟದಂತಹ ಶಿಕ್ಷೆಗಳು ಸಿಗುತ್ತಿದ್ದವು. ಕಥೆಯಲ್ಲಿ ಮಹಾಪದ್ಮನ ಮೇಲೆ ರಾಜ್ಯದ ಎಲ್ಲೆಗಳಲ್ಲಿ ವಾಸಮಾಡುವ ರಾಜರು ಕೆರಳಿ ಬಂದಾಗ, ಮಂತ್ರಿಯ ಗುಣವನ್ನು ನೆನೆದು, ನೆಲಮಾಳಿಗೆಯಲ್ಲಿ ಬದುಕುಳಿದ ಸುಬಂಧುವನ್ನು ಬಿಡುಗಡೆ ಮಾಡಿ, ಸನ್ಮಾನಾದಿಗಳನ್ನು ನೆರವೇರಿಸಿ ಕೆಲವು ವಸ್ತುಗಳನ್ನು ದಾನಕೊಟ್ಟನು. ಇವನು ತನ್ನ ಚಾಣಾಕ್ಷತನದಿಂದ ಗಡಿನಾಡಿನವರನ್ನು ತಹಬಂದಿಗೆ ತಂದು ರಾಜ್ಯದಲ್ಲಿ ಎಂದಿನಂತೆ ಶಾಂತಿಯನ್ನು ಕಾಪಾಡಿದನು. ಪ್ರಧಾನಮಂತ್ರಿಯಾದ ಇವನು ಎರಡನೇ ಮಂತ್ರಿಯಾದ ಶಕಟಾಳನ ಮಗಳು ನಂದವತಿಯನ್ನು ಮದುವೆಯಾದನು. ಸುಬಂಧನು ನಂದವಂಶವನ್ನು ನಿರ್ಮೂಲ ಮಾಡುವೆನೆಂಬ ಪ್ರತಿಜ್ಞೆಯನ್ನು ನೆರವೇರಿಸಲು ಚಾಣಾಕ್ಯನನ್ನು ಬಳಸಿಕೊಂಡನು. ಚಾಣಾಕ್ಯನ ಬಡತನದ ದೌರ್ಬಲ್ಯವನ್ನು ಬಳಸಿಕೊಂಡು ರಾಜನ ಬಳಿಹೋಗಿ, ಅರವತ್ತು ಗ್ರಾಮಗಳಿಂದ ಕೂಡಿದ ಬ್ರಾಹ್ಮಣವೃತ್ತಿಯನ್ನು ಬೇಡಿ ಪಡೆದುಕೊಂಡರೆ ನಿಮ್ಮ ಬಡತನ ಬಿಡುಗಡೆಯಾಗಬಹುದೆಂದು ಹೇಳುತ್ತಾನೆ. ಚಾಣಾಕ್ಯ

ಅದರಂತೆ ಪಡೆದು ಸುಖವಾಗಿ ಜೀವನ ನಡೆಸುತ್ತಿದ್ದಾಗ, ಸುಬಂಧ ಕೆಲವು ಬ್ರಾಹ್ಮಣರನ್ನು ಕರೆಯಿಸಿ ನಿಮ್ಮ ಪದವಿಯು ಪರಂಪರಾಗತವಾದುದು ಎಂದು ಹೇಳಿ ರಾಜನನ್ನು ಕೇಳುವಂತೆ ಮಾಡುತ್ತಾನೆ. ಕ್ಷತ್ರಿಯರು ಹಿಂದಿನಿಂದ ಬಂದ ಪರಂಪರೆಯನ್ನು ಹಾಳುಮಾಡದೆ ರಕ್ಷಿಸಿಕೊಂಡು ಬರುವುದೇ ಧರ್ಮವಾಗಿದೆ ಎಂದು ಬ್ರಾಹ್ಮಣರ ಪರವಾಗಿ ಮಾತನಾಡಿ, ರಾಜನ ಆಜ್ಞೆ ಪಡೆದು ಚಾಣಾಕ್ಯನು ಊಟಕ್ಕೆ ಕುಳಿತಿರುವಾಗ ಬಾಗಿಲು ಕಾಯುವವನಿಂದ ತಲೆಯ ಹಿಂಭಾಗವನ್ನು ಹಿಡಿದು ತಳ್ಳಿಸುತ್ತಾನೆ, ಚಾಣಾಕ್ಯನನ್ನು ಕೆರಳುವಂತೆ ಮಾಡುತ್ತಾನೆ.

ಕುಮುದಿನನ ಮಗ ಚಂದ್ರಭುಕ್ತನನ್ನು ಕರೆದು ತಂದ ಚಾಣಾಕ್ಯ ಬೆಣ್ಣೆಯೊಡನೆ ಸ್ವಲ್ಪ ಸ್ವಲ್ಪ ವಿಷವನ್ನು ತಿನ್ನಿಸಲು ತೊಡಗಿದನು ಮತ್ತು ಶ್ರೀಪರ್ವತದ ಮೇಲಕ್ಕೆ ಯಾರು ಒಂದು ಹೇರುಮಣ್ಣನ್ನು ತಂದು ಹಾಕುವರೋ ಅವರಿಗೆ ಒಂದು ಹೇರು ಬಂಗಾರವನ್ನು ಕೊಡುವೆನೆಂದು ಡಂಗುರವನ್ನು ಪಟ್ಟಣದಲ್ಲಿ ಸಾರಿಸಿದನು. ಅದನ್ನಾಲಿಸಿ ಒಬ್ಬ ಅಕ್ಕಸಾಲಿಗ ಒಂದು ಹೇರು ಮಣ್ಣು ತಂದು ಹಾಕಿ ಒಂದು ಹೇರು ಚಿನ್ನ ಪಡೆದು ಹೋದನು. ಇದನ್ನು ಕೇಳಿ ನಾಡಿನ ಎಲ್ಲ ಒಕ್ಕಲಿಗರೂ ಮಣ್ಣನ್ನು ತಂದು ಹಾಕಿ ಚಿನ್ನ ಕೇಳಿದಾಗ ಚಾಣಾಕ್ಯ ನಮಗೆ ಬೇಕಾಗಿದ್ದು ಒಂದು ಹೇರು ಮಣ್ಣು ಮಾತ್ರ ಎಂದು ಹೇಳಿದಾಗ, ಆ ಮಣ್ಣನ್ನು ಹಿಂದಕ್ಕೆ ತೆಗೆದುಕೊಂಡು ಹೋಗದೆ ಅಲ್ಲೇ ಬಿಟ್ಟು ಹೋದರು. ಆ ಮಣ್ಣನ್ನೇ ಬಳಸಿ ಕೋಟೆ ಕೊತ್ತಲಗಳಿಂದ ಯುಕ್ತವಾದ ನಗರವನ್ನು, ಅರಮನೆಯನ್ನು ನಿರ್ಮಿಸಿದನು.

ಸುಬಂಧನು ನಂದ ವಂಶವನ್ನು ನಾಶಮಾಡಲು ಚಾಣಾಕ್ಯನನ್ನು ಪರೋಕ್ಷವಾಗಿ ಮಹಾಪದ್ಮನ ವಿರುದ್ಧ ಕೆರಳುವಂತೆ ಮಾಡುವುದು ಮತ್ತು ಚಾಣಾಕ್ಯ ಕೋಟೆ, ಕೊತ್ತಲಗಳನ್ನು ನಿರ್ಮಿಸಲು ಮಣ್ಣನ್ನು ಪೂರೈಸಿಕೊಂಡ ರೀತಿಯನ್ನು, ಜಾಣತನ ಬುದ್ಧಿವಂತಿಕೆಯೆಂದು ಅಥವಾ ರಾಜತಂತ್ರ ಎಂದು ವಿವಿಧ ರೀತಿಯಲ್ಲಿ ಅರ್ಥೈಸುವುದು ಸಾಮಾನ್ಯವಾಗಿದೆ. ವಡ್ಡಾರಾಧನೆಯಲ್ಲಿ ಸುಧಾಮೆಯ ಕಥೆ, ಗಂಭೀರ ಕಥೆ ಮೊದಲಾದ ಕಥೆಗಳಲ್ಲಿ ಕಳ್ಳರ ಚಿತ್ರಣವಿದೆ. "ಕಳ್ಳರು ಮಾಡುವ ಉಪಾಯವನ್ನು ಮೋಸವೆಂದು, ಚಾಣಕ್ಯ ಮುಂತಾದವರು ಮಾಡುವ ಉಪಾಯಗಳು ಜಾಣತನ ಎಂದು ಹೇಳಬೇಕಾದ ವೈರುಧ್ಯಕ್ಕೆ ಕತೆಗಾರ ಸಿಲುಕಿದ್ದಾನೆ"[೨೧] ಆದರೆ ಕಳ್ಳರ ಮತ್ತು ಚಾಣಕ್ಯನಂತಹವರ ಉಪಾಯಗಳೆರಡು ಮೋಸವೇ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ

ಉಪಾಯಗಳೆಂಬ ಮೋಸಗಳು ಪ್ರಭುತ್ವದಲ್ಲಿ ಜಾಣತನ ಅಥವಾ ಚಾಣಾಕ್ಷತಣವೆಂದು ಗುರುತಿಸಲ್ಪಟ್ಟರೆ, ಅಧೀನತೆಯಲ್ಲಿ ಮೋಸವೆಂದು ಗುರುತಿಸಿಕೊಳ್ಳುತ್ತವೆ.

ಕಥೆಯಲ್ಲಿ 'ಚೋಳಂಗಿ'[೨೨] ಯಂಥ ಒಂದು ಸಾಮಾಜಿಕ ಪದ್ಧತಿಯ ಪ್ರಸ್ತಾಪಬರುತ್ತದೆ. ಸಂಬಂಧು ತನ್ನ ಮಗಳ ಚೋಳಂಗಿ (ರವಿಕೆ ಶಾಸ್ತ್ರ[೨೩]) ಸಮಾರಂಭದಲ್ಲಿ ತನ್ನ ಜನರನ್ನೂ ಬಂಧುಗಳನ್ನೂ ಪರಿಜನರನ್ನೂ ಬರಮಾಡಿ, ಅವರಿಗೆಲ್ಲ ಶ್ರೇಷ್ಠವಾದ ಭೋಜನವನ್ನು ಕೊಟ್ಟು ವಸ್ತ್ರ ಆದಿಯಾಗಿ ಆಭರಣಗಳಿಂದ ಅವರನ್ನು ಸತ್ಕರಿಸಿದನು. ಸಂಬಂಧುವಿನ ಆತಿಥ್ಯ ಶ್ರೀಮಂತರಿಗೆ ಮತ್ತು ತನ್ನ ಬಂಧುಗಳಿಗೆ ಮಾತ್ರ ಸೀಮಿತ. ಚಾಣಕ್ಯನನ್ನು ತನ್ನಡೆಗೆ ಸೆಳೆದುಕೊಳ್ಳಲು ತನ್ನ ಹೆಂಡತಿಯ ಕೈಯಲ್ಲಿ ಅನ್ನದ ಗಂಜಿಯ ಕೆನೆಯನ್ನು ಕೊಟ್ಟು ಕಳುಹಿಸುವನು. ಪ್ರಭುತ್ವ ಈ ರೀತಿಯ ದಾನ, ಸತ್ಕಾರಗಳೆಲ್ಲವೂ ತನ್ನನ್ನು ಪ್ರತಿಬಿಂಬಿಸಿಕೊಳ್ಳುವ ಪ್ರಯತ್ನದಂತೆ ಕಾಣಿಸುತ್ತದೆ.

ಗರ್ಭಿಣಿಯರಿಗೆ ಬಯಕೆಗಳು ಸಹಜ. ಚಂದ್ರಭುಕ್ತನ ತಾಯಿಯದು ವಿಚಿತ್ರ ಬಯಕೆ ಮಯೂರ ವಂಶದ ಕುಮುದನ ಹೆಂಡತಿ ಮಂದೆಗೆ ಚಂದ್ರನನ್ನು ನುಂಗುವ ಬಯಕೆ ಉಂಟಾಗುತ್ತದೆ. ಶ್ರೇಣಿಕನ ಹೆಂಡತಿ ಧನಶ್ರೀಗೆ ಅಕಾಲದಲ್ಲಿ ಮಳೆಗಾಲವನ್ನು ಕಂಡು ಸೈನ್ಯದೊಡನೆ ಕಾಡಿಗೆ ಹೋಗಿ ಮನೋಹರಿ ಎಂಬ ಜಾವದಲ್ಲಿ ಬಿಳಿಯಾನೆಯ ಮೇಲೆ ಕುಳಿತು ಆಲದ ಮರದ ಹಣ್ಣುಗಳನ್ನು ಕಿತ್ತು ಮಡಿಲಲ್ಲಿ ತುಂಬಿಕೊಳ್ಳುವ ಬಯಕೆಯಾಗುತ್ತದೆ. ದಂಡಕ ನಂದಿನಿಯ ಗರ್ಭದಲ್ಲಿರುವಾಗ ಎಲ್ಲಾ ಜನರನ್ನೂ ದಂಡಿಸಬೇಕೆಂಬ ಬಯಕೆಯಾಗುತ್ತದೆ.

ಚಂದ್ರಭುಕ್ತನ ತಾಯಿಯ ಬಯಕೆಯನ್ನು ಚಾಣಾಕ್ಯನು ಮಗನನ್ನು ನನಗೆ ಕೊಡಬೇಕೆಂದು ಷರತ್ತನ್ನು ಹಾಕಿ ನೆರವೇರಿಸುವನು. ಮಂದೆ ಮಗನನ್ನು ಹೆತ್ತಾಗ ಅದನ್ನು ನೋಡಿಕೊಳ್ಳಲು ದಾದಿಯನ್ನು ನೇಮಿಸಿ ಚಾಣಾಕ್ಯನಿಗೆ ಕೊಟ್ಟನು. ಅತ ಬೆಣ್ಣೆಯೊಂದಿಗೆ ಸ್ವಲ್ಪ ಸ್ವಲ್ಪ ವಿಷವನ್ನು ತಿನ್ನಿಸಿ ಬೆಳೆಸುತ್ತಾನೆ. ಈ ರೀತಿ ವಿಷವೂಣಿಸುವುದು ರಾಜನ ಪ್ರಾಣರಕ್ಷಣೆಯ ದೃಷ್ಟಿಯಿಂದ ಇರಬಹುದು. ರಾಜರನ್ನು ಊಟದಲ್ಲಿ ವಿಷ ಹಾಕಿ ಕೊಲ್ಲುವ ಸಂಚುಗಳು ಅರಮನೆಯ ವಾತಾವರಣದಲ್ಲಿ ಇರುವುದನ್ನು ಕಥೆ ಪರೋಕ್ಷವಾಗಿ ತಿಳಿಸುತ್ತದೆ.

ಕಥೆಯಲ್ಲಿ ವಿಧವಾ ವಿವಾಹದ ಪ್ರಸ್ತಾಪವಿದೆ. ಸೋದರಮಾವನಿಗೆ ಮಗಳನ್ನು ಕೊಡುವ ಪದ್ಧತಿ ವ್ಯಾಪಕವಾಗಿ ರೂಢಿಯಲ್ಲಿತ್ತು. ಚಾಣಕ್ಯ ಚಂದ್ರಭುಕ್ತನಿಗೆ ರಾಜ್ಯಾಭಿಷೇಕವನ್ನು ಮಾಡಿ ಪಟ್ಟಗಟ್ಟಿ, ಮಹಾಪದ್ಮನ ರಾಣಿಯಾದ ಚಂದ್ರಮತಿ ಮಹಾದೇವಿಯನ್ನು ಚಂದ್ರಭುಕ್ತನಿಗೆ ಮಹಾರಾಣಿಯಾಗಿ ಮಾಡಿದನು. ರಾಜರಲ್ಲೂ ಪುನರ್ವಿವಾಹ ರೂಢಿಯಲ್ಲಿತ್ತು.

ಚಾಣಾಕ್ಯ ದೊಡ್ಡ ಸೇನೆಯನ್ನು ಸಜ್ಜುಗೊಳಿಸಿ ಚಂದ್ರಭುಕ್ತನ ನೇತೃತ್ವದಲ್ಲಿ ಅನೇಕ ಬಾರಿ ಯುದ್ಧಮಾಡಿ ಸೋಲುವುದು. ಒಮ್ಮೆ ಮತ್ತೆ ತಾನು ಸೋಲುವ ಸೂಚನೆದೊರೆತು ಚಂದ್ರಭುಕ್ತನನ್ನು ತಲೆ ಮರೆಸಿಕೊಳ್ಳಲು ಪ್ರೇರೇಪಿಸಿ, ಯುದ್ಧಭೂಮಿ-ಯಿಂದ ಪಾರಾಗಲು ಮಾರ್ಗಕಾಣದೆ ಹತ್ತಿರದಲ್ಲಿದ್ದ ತಾವರೆಕೆರೆಯಲ್ಲಿ ಅಡಗಿಕೊಂಡು, ಶತ್ರುಸೈನ್ಯ ಹೋದನಂತರ ರಾತ್ರಿ ಹೊತ್ತಿನಲ್ಲಿ ಇವನು ಹೊರಗೆ ಬರುವುದು – ಈ ರೀತಿಯ ಯುದ್ಧದ ಸಣ್ಣ ಸಣ್ಣ ವಿವರಗಳು ದೊರೆತರೂ ಸಾಮಾನ್ಯ ಜನರ (ಸೈನಿಕ) ವಿವರಗಳು ದೊರೆಯುವುದಿಲ್ಲ.

ಚಾಣಾಕ್ಯ ನೇಕಾರರ ಮುದುಕಿ ಸಲಹೆಯಂತೆ ನಂದರಾಜ್ಯವನ್ನು ಹಾಳು-ಮಾಡುತ್ತ, ಸಾಮಂತ ಮಹಾಸಾಮಂತರಿಗೆ ಹಣಚೆಲ್ಲಿ ಭೇದೋಪಾಯ ಮಾಡಿ ಪ್ರತಿಪಕ್ಷವನ್ನು ತನ್ನ ಕಡೆ ಸೆಳೆದುಕೊಂಡು, ಮಹಾಪದ್ಮನನ್ನು ಒಂಟಿ ಮಾಡಿ ಸೋಲಿಸುವನು ಮತ್ತು ಭಂಡಾರ ಬರಿದಾಗಿರುವಾಗ ರಾಜ್ಯದ ಪ್ರಮುಖ ಪ್ರಜೆಗಳಿಂದ ಬಚ್ಚಿಟ್ಟಿರುವ ಹಣವನ್ನು ತಿಳಿದುಕೊಂಡು ಭಂಡಾರ ತುಂಬಿಸಿಕೊಳ್ಳುವುದು ಹಾಗೂ ಸಾಮಂತ ಮಹಾಸಾಮಂತರಿಗೆ ಬಾಳನ್ನು ಕೊಟ್ಟು, ತಳವಾರನನ್ನು ಸಮಾಧಾನ-ಪಡಿಸುವುದು ಇವೆಲ್ಲವೂ ಪ್ರಭುತ್ವ ತನ್ನ ಹಿತಾಸಕ್ತಿಗಾಗಿ ಮಾಡುವ ಕಾರ್ಯಗಳಾಗಿವೆ.

ವಿದ್ಯುಚ್ಚೋರನೆಂಬ ರಿಸಿಯ ಕಥೆಯು ಕಳ್ಳನಿಗೆ ಸಂಬಂಧಿಸಿದ ಕಥೆಯಾಗಿದೆ. ಕಥೆಯಲ್ಲಿ ಒಬ್ಬ ಕಳ್ಳ ನಾಯಕ. ಅನೇಕ ಕಥೆಗಳಲ್ಲಿ ಕಳ್ಳರ ಚಿತ್ರಣ ಸಿಗುತ್ತದೆ. ವಡ್ಡಾರಾಧನೆಯ ಕಥೆಗಳಲ್ಲಿ ಅಸಮಾನ್ಯ ವ್ಯಕ್ತಿಗಳಿಗಿಂತ ಸಾಮಾನ್ಯ ವ್ಯಕ್ತಿಗಳೆ ಕಥಾನಾಯಕ. ಈ ಕಥೆಯು ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಇಣುಕು ಕಂಡಿಯಾಗಿದೆ. ಕಳ್ಳರು ವ್ಯಾಪಾರಸ್ಥರನ್ನು ಭಯಗೊಳಿಸಿ ಅವರ ವಸ್ತುಗಳನ್ನು ದೋಚುತ್ತಿದ್ದರು ಮತ್ತು ಮನೆಗಳಿಗೆ ಕನ್ನಹಾಕಿ, ಹಣ, ಚಿನ್ನವನ್ನು ಕದಿಯುತ್ತಿದ್ದರು. ದಡ್ಡ ಕಳ್ಳರನ್ನು ಗಂಭೀರೆಯೆಂಬ ಮುದುಕಿ ಗೋಳಾಡಿಸುತ್ತಾಳೆ, ಜನಸಂದಣಿಯಲ್ಲಿ

ದೀನಾರದ ಪೊಟ್ಟಣ ಕದ್ದ ಕಳ್ಳ ಒಂದು ಹೆಣ್ಣಿಗೆ ಆಸೆಪಟ್ಟು ಸಿಕ್ಕಿಬೀಳುತ್ತಾನೆ, ಕಳ್ಳರು ರಾತ್ರಿಯ ಹೊತ್ತು ಕುರಿಯನ್ನು ಕದ್ದು ತಂದು ಕೊಂದು ಸುಟ್ಟು ತಿನ್ನುತ್ತಾರೆ, ಸುದಾಮೆ ಆಭರಣಗಳೆಲ್ಲವನ್ನು ಬಿಚ್ಚಿಕೊಟ್ಟಾಗ ಮುಟ್ಟದೆ ಮೆಚ್ಚುಗೆಗೆ ಪಾತ್ರನಾದ ಕಳ್ಳ, ಈ ಚಿತ್ರಣಗಳಲ್ಲದೆ ವಡ್ಡಾರಾಧನೆಯಲ್ಲಿ ಮತ್ತೊಬ್ಬ ಕಳ್ಳನ ಚಿತ್ರಣವಿದೆ. ಅವನೇ ವಿದ್ಯುಚ್ಚೋರ ಮಹಾಕಳ್ಳ, ಛಲವಾದಿ, ಅತಿಬುದ್ಧಿವಂತ. ವಾಸ್ತವವಾಗಿ ಈತ ಒಬ್ಬ ರಾಜ. ಪ್ರತಿಜ್ಞೆ ಪೂರೈಕೆಮಾಡಿಕೊಳ್ಳಲು ಕಳ್ಳನಾಗಿರುತ್ತಾನೆ. ರಾತ್ರಿಯ ಸಮಯದಲ್ಲಿ ವೈಶ್ಯರು, ವ್ಯಾಪಾರಸ್ಥರು, ಅಧಿಕಾರಿಗಳು, ಸಾಮಂತರು, ಹೆಚ್ಚು ಹಣ ತೆಗೆದುಕೊಳ್ಳುವ ಸೂಳೆಯರ ದ್ರವ್ಯವನ್ನು ಈತ ಕದ್ದು ಪಟ್ಟಣಕ್ಕೆ ಬಹಳ ದೂರದಲ್ಲಿದ್ದ ಒಂದು ಪರ್ವತದ ಗುಹೆಯಲ್ಲಿ ಹೂಳಿಟ್ಟು ಗುಹೆಯ ಬಾಗಿಲಿಗೆ ದೊಡ್ಡದಾದ ಬಂಡೆ ಇಟ್ಟು, ಹಗಲೆಲ್ಲಾ ಹಾಳು ದೇವಾಲಯದಲ್ಲಿ ಅಂಜನ ಹಚ್ಚಿ ತೊನ್ನುರೋಗದವನಂತೆ ಕಾಣಿಸಿಕೊಳ್ಳುತ್ತಿದ್ದನು.

ವಿದ್ಯುಚ್ಚೋರ ಕಳ್ಳನಾಗಿದ್ದಾಗ ಸೂಳೆಯರ ಬಳಿಯಲ್ಲಿ ಸುಖಗಳನ್ನು ಅನುಭವಿಸುತ್ತಿದ್ದನು. ನಂತರ ಆತನ ವೃತ್ತಾಂತವನ್ನು ತಿಳಿದ ನಂತರ ವಾಮರಥ ತನ್ನ ಮಕ್ಕಳಾದ ಶ್ರೀಮತಿ ವಸುಮತಿ, ಗುಣಮತಿ, ಸುಲೋಚನೆ, ಸುಪ್ರಭೆ, ಸುಕಾಂತೆ, ಸುಶೀಳೆ, ಮನೋಹರಿಯನ್ನು ನಿನಗೆ ಕೊಡುವೆನು ಮದುವೆಯಾಗು ಮತ್ತು ನೀನು ನನ್ನ ತಂಗಿಯ ಮಗ, ಸೋದರಳಿಯ ಎಂದು ಹೇಳಿದಾಗ, ವಿದ್ಯುಚ್ಚೋರ "ಮುಕ್ತಶ್ರೀಯೆಂಬೊಳ್ ಪೆಂಡತಿಗೆ ಬೇಂಟಂಗೊಂಡಿರ್ದೆನಾಕೆಯಂ ಮದುವೆ ನಿಲಲ್ವೇಟ್ಟುಮೆಂದು ಪರಿಚ್ಛೇದಿಸಿ" ನುಡಿಯುತ್ತಾನೆ. ಹಣವನ್ನು ಕೊಟ್ಟು ವೇಶ್ಯೆಯರ ಬಳಿ ಸುಖವನ್ನು ಪಡೆಯುತ್ತಿದ್ದ ವಿದ್ಯುಚ್ಚೋರ ಎಂಟು ಜನ ಹೆಣ್ಣುಮಕ್ಕಳನ್ನು ಮದುವೆಯಾಗಲು ನಿರಾಕರಿಸುತ್ತಾನೆ. ಮುಕ್ತಶ್ರೀಯ ಮೇಲೆ ಪ್ರೀತಿಯೆನ್ನುತ್ತಾನೆ. ಪ್ರಭುತ್ವ ಪ್ರೀತಿ ಮತ್ತು ಕಾಮಭೋಗವನ್ನು ಬೇರೆ ಬೇರೆಯೆಂದೆ ಸ್ವೀಕರಿಸಿದೆ.

ಕಥೆಯಲ್ಲಿ ಶಿಕ್ಷಣದ ಬಗ್ಗೆಯೂ ಮಾಹಿತಿಗಳಿವೆ. ಅರಮನೆಯ ವಾತಾವರಣದಲ್ಲಿ ಗಂಡು-ಹೆಣ್ಣುಗಳಿಬ್ಬರೂ ವೇದಶಾಸ್ತ್ರಗಳನ್ನು ಕಲಿಯುತ್ತಿದ್ದರು. ವಿದ್ಯುಚ್ಚೋರ ವ್ಯಾಕರಣ, ಪ್ರಮಾಣ, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಸಾಮುದ್ರಿಕ, ವಾತ್ಸಾಯನ, ಶಾಲಿಹೋತ್ರ, ಪಾಲಕಾಪ್ಯ, ಚಾಣಕ್ಯ, ವೈದ್ಯ ಮೊದಲಾದ ಶಾಸ್ತ್ರಗಳನ್ನು ತಿಳಿದಿದ್ದನು. ವಾಮರಥನ ಎಂಟು ಮಂದಿ ಮಕ್ಕಳು ಬರಹ, ಚಿತ್ರವಿದ್ಯೆ, ಗಣಿತ, ಗಾನ, ನೃತ್ಯ, ಚಿತ್ರಕಲೆ, ಭೂರ್ಜಾದಿ ಪತ್ರಗಳನ್ನು ಒಂದೇ ರೀತಿ ಕತ್ತರಿಸುವುದು ಮೊದಲಾದವುಗಳಲ್ಲಿ ಪ್ರವೀಣೆಯಾಗಿದ್ದರು. ಈ ರೀತಿಯ ಶಿಕ್ಷಣ ಜನಸಾಮಾನ್ಯರಿಗಿಲ್ಲದಿದ್ದರೂ ಆಡಳಿತದ

ದೃಷ್ಟಿಯಿಂದ ಮಂತ್ರಿ (ಸುಕುಮಾರಸ್ವಾಮಿಯ ಕಥೆ) ತಳಾರರಿಗೆ ಕಲಿಯಲು ಅವಕಾಶವಿತ್ತು. ಯಮದಂಡನೆಂಬ ತಳಾರ ವಿದ್ಯುಚ್ಚೋರನೊಂದಿಗೆ ವಿದ್ಯೆಕಲಿತರೂ ತಳಾರನ ಮಗನಾಗಿದ್ದರಿಂದ ಕಳ್ಳರನ್ನು ಕಂಡುಹಿಡಿಯುವ ಕ್ರಮವನ್ನು ಹೇಳುವ 'ಸುರಖ' ಎಂಬ ವಿದ್ಯೆಯನ್ನು ಕಲಿಯುತ್ತಾನೆ. ಹಿಂದೆಯೇ ತಿಳಿಸಿದಂತೆ ವಿದ್ಯುಚ್ಚೋರ 'ಕರಪಟಶಾಸ್ತ್ರ'ವನ್ನು ಕಲಿಯುತ್ತಾನೆ. ಅದು ಜೃಂಭಿನಿ (ಪ್ರತ್ಯಕ್ಷವಾಗುವುದು ಮತ್ತು ಮಾಯವಾಗುವುದು), ಸ್ತಂಭಿನಿ (ಗತಿನಿರೋಧ), ಮೋಹಿನಿ (ಮೂರ್ಛೆಯುಂಟು ಮಾಡುವುದು), ಸರ್ಪಪಿ (ಕೆಲವು ರೋಗ ಉಂಟುಮಾಡುವುದು), ತಾಳೋದ್ಘಾಟಿನಿ ವಿದ್ಯೆ (ಬೀಗ ತೆಗೆಯುವ ವಿದ್ಯೆ), ಮಂತ್ರ (ಮಂತ್ರ ಹಾಕುವುದು), ಚೂರ್ಣ (ಪುಡಿ ಎರಚುವುದು), ಯೋಗ (ವಂಚನೆ, ಮೋಸ ಮುಂತಾದವು), ಘಟಿಕಾ (ಗುಳಿಗೆ), ಅಂಜನ (ಕಣ್ಣಿಗೆ ಹಚ್ಚುವ ಲೇಪನ) ಎಂದಿವೇ ಮೊದಲಾದ ತಸ್ಕರ ವಿದ್ಯೆಗಳನ್ನು ಒಳಗೊಂಡಿತ್ತು. ರಾಜ, ರಾಣಿ, ಅವರ ಮಕ್ಕಳು, ಮಂತ್ರಿ, ಪುರೋಹಿತ, ತಳಾರ ಮೊದಲಾದ ಪ್ರಭುತ್ವದ ಪ್ರತಿನಿಧಿಗಳಿಗೆ ಮಾತ್ರ ಈ ಶಿಕ್ಷಣ ಸೀಮಿತವಾಗಿತ್ತು ಎಂಬುದು ಇಲ್ಲಿ ಗಮನಾರ್ಹ ಸಂಗತಿ.

ಕಥೆಯಲ್ಲಿ ರಾಜರ ವೈಭವದ ಚಿತ್ರಣಗಳು ದೊರೆಯುತ್ತವೆ. ಯಮದಂಡನನ್ನು ಕರೆದುಕೊಂಡು ವಿದ್ಯುಚ್ಚೋರ ವೇಣಾತಟ ಪಟ್ಟಣದ ಹೊರಗುಳಿದು, ಸೇವಕರಿಗೆ ಹೇಳಿ ಕಳುಹಿಸುತ್ತಾನೆ. ಕಲಶ, ಕನ್ನಡಿ, ಬಾವುಟ, ತೋರಣ, ಧೂಪ, ದೀಪ, ಭೇರಿ, ಬೀಸಣಿಗೆ ಎಂಬ ಎಂಟು ಬಗೆಯ ಅಲಂಕಾರಗಳಿಂದ ಪಟ್ಟಣ ಕಂಗೊಳಿಸಿತು. ಮಂತ್ರಿ, ಮೇಲಧಿಕಾರಿ, ಪರಿವಾರ, ಸಾಮಂತ, ಮಹಾಸಾಮಂತರೂ ರಾಣಿವಾಸದ ಸ್ತ್ರೀಯರೂ ಪಟ್ಟಣಿಗರೆಲ್ಲರೂ ಎದುರಿಗೆ ಬಂದು ವಂದಿಸಿ ಮಂತ್ರಾಕ್ಷತೆ ಹಾಕಿದ ನಂತರ ವಿದ್ಯುಚ್ಚೋರ ಯಮದಂಡ ಇಬ್ಬರೂ ಪಟ್ಟದಾನೆಯನ್ನೇರಿದರು. ಮುಂದುಗಡೆಯಲ್ಲಿ ಶ್ವೇತಚ್ಛತ್ರಗಳು, ಪಾಳಿಧ್ವಜಗಳು, ಬಾವುಟಗಳು, ಚಂದ್ರ ಸೂರ್ಯ ಸಿಂಹ ಹುಲಿ ಮೀನು – ಇವೇ ಮೊದಲಾದ ರಾಜ್ಯಾಧಿಕಾರದ ಚಿಹ್ನೆಗಳು ಹೋಗುತ್ತಿದ್ದವು. ಪಂಚಮಹಾವಾದ್ಯ ಶಬ್ದಗಳೂ, ಮಂಗಳವಾದ್ಯಗಳೊಂದಿಗೆ ಅವರು ಅರಮನೆಯನ್ನು ಪ್ರವೇಶಮಾಡಿದರು ವಿದ್ಯುಚ್ಚೋರ ಜಿನದೀಕ್ಷೆಯನ್ನು ಪಡೆಯಲು ಹೋದಾಗ ಇದೇ ವರ್ಣನೆಗಳು ಬಂದರೂ ವಂದಿಮಾಗಧರು (ಸ್ತುತಿಪಾಠಕರು), ಬೇಡುವವರು, ದೀನರು, ಅನಾಥರು, ಕುರುಡರಿಗೆ ದಾನವನ್ನು ಕೊಟ್ಟು ಹೋಗುತ್ತಾನೆ ಮತ್ತು ವಿದ್ಯುಚ್ಚೋರ ರಾಜ ಪೂಜಾಗಜವನ್ನು ಹತ್ತಿದಾಗ ರಾಣಿವಾಸದ ಇಬ್ಬರು ದಾಸಿಯರು ಹಿಂದುಗಡೆ

ಹತ್ತಿಕೊಂಡು ಎರಡು ಬದಿಗಳಲ್ಲಿಯೂ ಚಾಮರವನ್ನು ಬೀಸುತ್ತಿದ್ದರು. ಈ ಎಲ್ಲಾ ವಿವರಗಳು ರಾಜನ ಹಿನ್ನೆಲೆಯಲ್ಲಿ ವರ್ಣಿತಗೊಂಡಿವೆ. ಅಂದರೆ ಮೇಲಿನ ವಿವರಗಳು ಅರಸುಕೇಂದ್ರಿತವಾಗಿವೆಯೇ ಹೊರತು ಪ್ರಜಾಕೇಂದ್ರಿತವಾಗಿಲ್ಲ (ಚರಿತ್ರೆಯಲ್ಲಿ ಸಿಗುವ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ ಮೊದಲಾದವು ವಿಚಾರಗಳು ಇದೇ ನೆಲೆಯಲ್ಲಿ ಸಿಗುವುದು) ಈ ವೈಭವದ ಚಿತ್ರಣದಲ್ಲಿ ಸಾಮಾನ್ಯರ ಉಲ್ಲೇಖವಿದೆಯೇ ಹೊರತು ಸಾಮಾನ್ಯತೆಯ ಚಿತ್ರಣವಿಲ್ಲ.

ಕಥೆಯಲ್ಲಿ ಆಡಳಿತ ಕ್ರಮದ ಬಗ್ಗೆಯೂ ವಿಚಾರಗಳಿವೆ. ರಾಜ ಗೃಹಕೃತ್ಯ ಅಥವಾ ಇತರ ಬೇರೆ ಕೆಲಸದ ಮೇಲೆ ಹೋದಾಗ ಮಂತ್ರಿ ಮತ್ತು ಹೆಗ್ಗಡೆ ರಾಜ್ಯಭಾರವನ್ನು ನಡೆಸುತ್ತಿದ್ದರು. ಮತ್ತು ರಾಜ್ಯದ ಹಾಗು ಹೋಗುಗಳಿಗೆ ಸಂಬಂಧಿಸಿದಂತೆ ರಾಜನ ಜೊತೆಯಲ್ಲಿ ಪತ್ರವ್ಯವಹಾರವನ್ನು ಇಟ್ಟುಕೊಳ್ಳುತ್ತಿದ್ದರು.

ಹಿಂದೆ ವಿವರಿಸಿದಂತೆ ವಡ್ಡಾರಾಧನೆಯ ಕಥೆಗಳಲ್ಲಿ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಂಡ ಪ್ರಭುತ್ವದ ಸ್ವರೂಪವನ್ನು ಕಾಣಬಹುದಾಗಿದೆ.

ಧರ್ಮ ಪ್ರಭುತ್ವ

ವಡ್ಡಾರಾಧನೆ ಜೈನಧರ್ಮಕ್ಕೆ ಸಂಬಂಧಿಸಿದ ಒಂದು ಕೃತಿ. ಧರ್ಮ, ಜಾತಿ, ಮತ ಇವು ಮನುಷ್ಯ ಮಾಡಿಕೊಂಡ ವ್ಯವಸ್ಥೆಗಳು. ಪ್ರತಿವ್ಯಕ್ತಿಗೂ ಸಾಮಾಜಿಕ ಮತ್ತು ಧಾರ್ಮಿಕ ಹಕ್ಕುಗಳು ಇರುತ್ತವೆ. ಈ ಹಿನ್ನೆಲೆಯಲ್ಲಿ ವಡ್ಡಾರಾಧನೆಯನ್ನು ನೋಡಬೇಕು. ಇಲ್ಲಿನ ೧೯ ಕಥೆಗಳೂ ಧಾರ್ಮಿಕ ಕಥೆಗಳು. ಎಲ್ಲಾ ಕಥೆಯೂ ಜೈನಧರ್ಮದ ಲೇಪನ ಮತ್ತು ಜೈನ ತತ್ವದ ಚೌಕಟ್ಟಿನಿಂದ ಪ್ರತ್ಯೇಕವಾಗಿಲ್ಲ. ಧರ್ಮ ಮತ್ತು ಸಾಹಿತ್ಯ ಎರಡೂ ಬೆರತು ಇಲ್ಲಿನ ಕಥೆಗಳು ನಿರೂಪಣೆಗೊಂಡಿವೆ. ಪಂಪ "ನೆಗಬ್ದಾದಿಪುರಾಣ-ದೊಳಜೆವುದು ಕಾವ್ಯಧರ್ಮಮಂ ಧರ್ಮಮುಮಂ" ಎಂದು ಹೇಳುತ್ತಾನೆ. ಹತ್ತನೇ ಶತಮಾನದಲ್ಲಿದ್ದ ಪಂಪನ ಸಮಕಾಲೀನನಾಗಿದ್ದ ವಡ್ಡಾರಾಧನಕಾರನೂ ಈ ಮನೋಭಾವಕ್ಕೆ ಅಪವಾದವಾಗಿಲ್ಲ.

ಧರ್ಮಪ್ರಚಾರಕ್ಕೆ ಸಾಮಾನ್ಯವಾಗಿ ಎಲ್ಲರೂ ಕಥೆಗಳನ್ನು ಬಳಸುತ್ತಾರೆ. ಕಥೆ ಕೇಳಗನನ್ನು ಅಥವಾ ಓದುಗನನ್ನು ಹಿಡಿದು ನಿಲ್ಲಿಸಬಲ್ಲದು. ಕಥೆಯು ಓದುಗನಿಗೆ ಅರಿವಾಗದಂತೆ ಧರ್ಮದ ಸಂಗತಿಗಳನ್ನು ಹೇಳಿರುತ್ತದೆ. ಈ ನಿಟ್ಟಿನಲ್ಲಿ ವಡ್ಡಾರಾಧನೆಯ ಕಥೆಗಳು ಮಹತ್ವದ ಪಾತ್ರವಹಿಸುತ್ತವೆ.

ವಡ್ಡಾರಾಧನೆಯ ಎಲ್ಲಾ ಕಥೆಗಳು ಕೂಡ ಜೈನಧರ್ಮದ ಪಾರಮ್ಯವನ್ನು ಮೆರೆಯುತ್ತವೆ. ಸಿಗುವ ಎಲ್ಲಾ ಸಂದರ್ಭವನ್ನು ಬಳಸಿಕೊಂಡು ಧರ್ಮವನ್ನು ಬೋಧಿಸುತ್ತಾನೆ.

ಪುನಿಪುಲ್ಲ ಮುಗಿಲ ಸಂಜೆಯ
ಕನಿಸಿನ ಸುರಧನುವ ನೆಗೆದ ನೊರೆಗಳ ತೇಜಿನಂ
ತನಿತುಂ ನಿಲ್ಲವು ಬಗೆವೊಡೆ
ಮನುಜರ ಯೌವನಮುಮರ್ಥಮುಂ ಬಾಟ್ಕೆಗಳುಂ[೨೪]

ಈ ರೀತಿಯ ಸೂತ್ರಪ್ರಾಯವಾದ ಧರ್ಮವಿಚಾರಗಳು ಅನೇಕ ಕಥೆಗಳಲ್ಲಿ ಬರುತ್ತವೆ. ಇವು ಭೋಗವನ್ನು ಅಥವಾ ಲೌಕಿಕ ಜೀವನವನ್ನು ತಿರಸ್ಕರಿಸುತ್ತವೆ. ಉಗ್ರತಪಸ್ಸು ಇಲ್ಲಿ ಮುಖ್ಯ. ಮಹಾಪುರುಷನಾಗಬೇಕಾದರೆ ಇದರ ಅಗತ್ಯವಿದೆಯೆಂದು ಕಥೆ ಹೇಳುತ್ತದೆ. ಕಥೆಗಳಲ್ಲಿ ಪುಣ್ಯದ ಫಲವಾಗಿ ಮಾನವನಿಗೆ ಸ್ವರ್ಗ ಸುಖವು ದೊರೆಯುತ್ತದೆ. ಆಗ ಸ್ವರ್ಗದ ವರ್ಣನೆಯಿರುತ್ತದೆ. ಪಾಪದ ಫಲವಾಗಿ ಮಾನವನಿಗ ನರಕವು ದೊರೆಯುತ್ತದೆ. ಆಗ ನರಕದ ವರ್ಣನೆಯಿರುತ್ತದೆ. ಮತ್ತು ಪಂಚಾಣುವ್ರತಗಳ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ಜೈನಧರ್ಮದಲ್ಲಿಯ ಪ್ರಮುಖ ತತ್ವ ಮತ್ತು ಆಚಾರಗಳನ್ನು ಬೋಧಿಸಿ ವಿವೇಚಿಸುವ ಕಥೆಗಳಲ್ಲಿ ಸುಕುಮಾರಸ್ವಾಮಿಯ ಕಥೆಯು ಒಂದು. ಗೃಹಸ್ಥ-ಗೃಹಿಣಿಯರ ವ್ರತಗಳ ಆಚಾರವನ್ನು ಮತ್ತು ಅಣುವ್ರತಗಳನ್ನು ಉಪಕಥೆಗಳ ಮೂಲಕ ವಿವರಿಸುತ್ತದೆ. ಅಗ್ನಿಭೂತಿ ಮತ್ತು ವಾಯುಭೂತಿಯವರ ವೃತ್ತಾಂತದಿಂದ ಕಥೆಯು ಅನಾವರಣಗೊಳ್ಳುತ್ತದೆ. ಸಪ್ತವ್ಯಸನಾಧೀನರಾದ ಇವರಿಬ್ಬರು ಅವಮಾನಿತಗೊಂಡು ಸೂರ್ಯಮಿತ್ರನ ಬಳಿ ವಿದ್ಯಾಕಲಿತು ಬೀಳ್ಕೊಡುವಾಗ ನೀವಿಬ್ಬರೂ ತನ್ನ ಸೋದರಳಿಯಂದಿರೆಂಬುದನ್ನು ತಿಳಿಸಿದಾಗ ಅಗ್ನಿಭೂತಿಯು ಸಂತೋಷಗೊಂಡನು ಆದರೆ ವಾಯುಭೂತಿಯು ಕ್ರೋಧಗೊಂಡನು, ಮುಂದೆ ಸೋದರ ಮಾವ ಜೈನಯತಿಯಾಗಿ ಬಂದಾಗ ಅವಮಾನ ಮಾಡಿ, ಆತನ ನಡವಳಿಕೆಯನ್ನು ಆಕ್ಷೇಪಿಸಿದ ಅತ್ತಿಗೆಯನ್ನು ಕಾಲಿನಿಂದ ಒದೆಯುತ್ತಾನೆ. ಇದರ ಫಲವಾಗಿ ಹೆಣ್ಣು ಕತ್ತೆಯಾಗಿ, ಹೆಣ್ಣು ನಾಯಾಗಿ, ಕುರುಡಿ, ಕುರೂಪಿ ಹೆಣ್ಣಾಗಿ ಹುಟ್ಟುತ್ತಾಳೆ. ಅಗ್ನಿಭೂತಿ ಮುನಿಯು ಭಿಕ್ಷೆಯನ್ನು ಬೇಡುತ್ತಾ ಹೋದಾಗ ಹುಟ್ಟು ಗುರುಡಿಯಾದ ಹೊಲೆಗೂಸು ನೇರಳೆ ಹಣ್ಣನ್ನು ಕೈಯಿಂದ ಹುಡುಕುತ್ತ ಆಯ್ದು ತಿನ್ನುವುದನ್ನು ನೋಡಿ ಕಣ್ಣೀರು ಸುರಿಸುತ್ತಾನೆ.

ಆಕೆಯನ್ನು ಕಂಡಾಗ ಪ್ರೀತಿ ಕರುಣೆಯುಂಟಾಗುತ್ತದೆ. ಹಣ್ಣುಗಳನ್ನು ನವಿಲುಗರಿಯ ಕಟ್ಟಿನ ಕೋಲಿನಿಂದ ಕೂಸಿನ ಮುಂದಕ್ಕೆ ತಳ್ಳುತ್ತ "ಇವೇಂ ಪಾಪದ ಫಲಮೋ" ಎನ್ನುಕೊಳ್ಳುತ್ತಾನೆ. ಈ ವಿಷಯವನ್ನು ಸೂರ್ಯಮಿತ್ರಯತಿಗಳಿಗೆ ತಿಳಿಸಿದಾಗ ಆ ಕೂಸು ನಿಮ್ಮ ತಮ್ಮ ವಾಯುಭೂತಿಯ ಜೀವವೆಂದು ಹೇಳಿದರು. ಅಗ್ನಿಭೂತಿ ಋಷಿ ಆಕೆಗೆ ತಿಳಿಯುವಂತೆ ಧರ್ಮವನ್ನು ತಿಳಿಸಿದನು. ಅಣುವ್ರತವೇ ಮೊದಲಾದ ಶ್ರಾವಕ ವ್ರತಗಳನ್ನು ಆ ಹೆಣ್ಣು ಆಚರಿಸಿ ನಾಗಶ್ರೀಯಾಗಿ ಹುಟ್ಟುತ್ತಾಳೆ. ನಾಗಶ್ರೀಯನ್ನು ಕಂಡಾಗ ಅಗ್ನಿಭೂತಿ ಮುನಿಗಳಿಗೆ ಪ್ರೀತಿಯುಂಟಗುತ್ತದೆ. ಪೂರ್ವಜನ್ಮ ಸ್ಮರಣೆಯೇ ಕಾರಣದಿಂದ ಸೂರ್ಯಮಿತ್ರಾಚಾರ್ಯ ಮುನಿಗಳಿಂದ ಅಣುವ್ರತ ಮೊದಲಾಗುಳ್ಳ ಶ್ರಾವಕ ವ್ರತಗಳನ್ನು ಸ್ವೀಕರಿಸುತ್ತಾಳೆ. ಈ ವಿಚಾರವನ್ನು ತಂದೆಗೆ ಹೇಳಿದಾಗ ಆತ "ಮಗಳೆ ನಾಗಶ್ರೀ ನಾಮುಂಪಾರ್ವರೆಮುಂ ಲೋಕಕ್ಕೆಲ್ಲಮಗ್ಗಳಂ ಲೋಕದಿಂದಂ ಪೂಜಿತ (ರ) ಮುಮೆಮ್ಮಿಂದಗ್ಗಳಂ ಪೆಱರಿಲ್ಲದಱಿಂದಂ ಸವಣರ ಧರ್ಮಮಂ ನಮಗೆ ಕೊಳಲಾಗ ಬಿಸುಡು"[೨೫] ಎನ್ನುತ್ತಾನೆ. ಹಾಗಾದರೆ ಋಷಿಗಳ ಬಳಿ ಹೋಗಿ ಅವನ್ನು ಅವರಿಗೆ ಒಪ್ಪಿಸುವೆಯೆಂದು ನಾಗಶ್ರೀ ತಂದೆಯೊಡನೆ ಹೊರಟಳು. ನಾಗಶ್ರೀ ಅಣುವ್ರತಗಳನ್ನು ಒಪ್ಪಿಕೊಂಡು ಆಚರಿಸಲು ಅನುವಾಗುವಂತೆ ಉಪಕಥೆಗಳನ್ನು ವಡ್ಡಾರಾಧನೆಕಾರ ತರುತ್ತಾನೆ ಮತ್ತು "ನಾಮುಂ ಪಾರ್ವರೆಮುಂ ಎಂದು ಬೀಗಿದ ಸೋಮಶರ್ಮನು ತನಗೇ ಪ್ರತ್ಯಕ್ಷವಾಗಿ ಕಂಡ ನಿದರ್ಶನಗಳನ್ನು ಅರ್ಥಮಾಡಿಕೊಂಡು ಜೈನಧರ್ಮದತ್ತ ಒಲಿಯುತ್ತಾನೆ"[೨೬].

೧. ಇಂದ್ರದತ್ತ ಎಂಬ ಶ್ರೀಮಂತ ಸೆಟ್ಟಿಯ ಮಗ ವರಸೇನ ಎಂಬುವವನು ಜೂಜಿನ ಚಟಕ್ಕೆ ಬಿದ್ದು ಸೋತು ಹಣವನ್ನು ಕೊಡಲಾರದೆ ಇನ್ನೊಬ್ಬನನ್ನು ಕೊಂದು ಹಾಕುತ್ತಾನೆ. ಆದ್ದರಿಂದ ರಾಜ ಅವನಿಗೆ ಮರಣದಂಡನೆ ವಿಧಿಸಿರುತ್ತಾನೆ.

೨. ವೈನಯಿಕ ಎಂಬ ಭತ್ತದ ವ್ಯಾಪಾರಿ. ಇವನು ಬೇರೆ ಬೇರೆ ಚಿತ್ರಕಥೆಗಳನ್ನು ಪಟದಲ್ಲಿ ತೋರಿಸಿ, ಭತ್ತದ ವ್ಯಾಪಾರ ಮಾಡುವಾಗ ಜನರಿಗೆ ಆ ಚಿತ್ರಗಳಲ್ಲಿನ ಕನ್ಯೆಯ ಕಥೆ, ವೈನಾಯಕನ ಕಥೆ, ಗಂಭೀರೆ ಎಂಬ ಮುದುಕಿಯ ಕಥೆಯನ್ನು ಹೇಳುತ್ತಾ, ವೈಕ ಮತ್ತು ವ್ಯೋಮಕ ಎಂಬ ಇನ್ನಿಬ್ಬರ ಸಹಾಯದಿಂದ ಭತ್ತ ಅಳೆಯುವಲ್ಲಿ ಮೋಸ ಮಾಡುತ್ತಿದ್ದನು. ಜಗದ್ಗೃಹನೆಂಬುವನ ದೂರಿನ ಹಿನ್ನೆಲೆಯಲ್ಲಿ ರಾಜ ಈ ಮೂವರಿಗೂ ಮರಣದಂಡನೆ ವಿಧಿಸಿರುತ್ತಾನೆ.

೩. ಮೋದಾಳಿ ಮತ್ತು ನಾಗಸೂರ ಎಂಬಿಬ್ಬರ ಅಕ್ರಮ ಸಂಬಂಧ ಹಿನ್ನೆಲೆಯಲ್ಲಿ ಅವರಿಬ್ಬರಿಗೆ ಕಾದಕಬ್ಬಿಣದ ಪ್ರತಿಮೆಗಳನ್ನು ಅಪ್ಪಿಕೊಂಡು ಸಾಯುವ ಶಿಕ್ಷೆ ವಿಧಿಸಲಾಗಿತ್ತು.

೪. ತನಗಿದ್ದಷ್ಟು ಆಸ್ತಿಯಿಂದ ತೃಪ್ತನಾಗದೆ ಹೆಚ್ಚಿನದಕ್ಕೆ ಆಸೆಪಟ್ಟು ದುರಹಂಕಾರದಿಂದ ವರ್ತಿಸಿದ ವೀರಪೂರ್ಣನೆಂಬ ಆ ದನಗಾಹಿಯನ್ನು ರಾಜನು ಕೊಂದು ಹಾಕಲು ಆಜ್ಞೆ ಮಾಡಿದ್ದನು.

ಈ ನಾಲ್ಕು ಕಥಗಳಿಂದ ನಾಗಶ್ರೀ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಪಂಚಾಣುವ್ರತಗಳನ್ನು ಪಾಲಿಸುತ್ತಾಳೆ. "ನಾಗಶ್ರೀ ಅಣು ವ್ರತಗಳನ್ನು ಸ್ವೀಕರಿಸಿ ಅವುಗಳ ಅಂತರಾರ್ಥವನ್ನು ನೈಜ ಬದುಕಿನ ಸಂದರ್ಭಗಳಿಂದ ಪಡೆದುಕೊಳ್ಳುವ ಸಹಜಜ್ಞಾನ ಮುಖ್ಯವಾಗುತ್ತದೆ. ಸುಧಾಮೆ, ಗಂಭೀರೆ, ಮೋದಾಳಿ ಮುಂತಾದವರ ಕತೆಗಳನ್ನು ಒಳಗೊಂಡ ಪ್ರಸಂಗಗಳ ಮೂಲಕ ನಾಗಶ್ರೀ ಅಣುವ್ರತಗಳ ಅಗತ್ಯವನ್ನು ತನ್ನ ತಂದೆಗೂ ಮನವರಿಕೆ ಮಾಡಿಕೊಡುತ್ತಾಳೆ."[೨೭] ನಂತರ ನಾಗಶ್ರೀ ದೀಕ್ಷೆ ತೆಗೆದುಕೊಂಡು ತಪಸ್ಸನ್ನು ಆಚರಿಸಿ ಸತ್ತು ಅಚ್ಯುತಕಲ್ಪದಲ್ಲಿ ಜನಿಸಿದಳು. ಸ್ವರ್ಗದ ಆಯಸ್ಸು ಮುಗಿದ ಬಳಿಕ ಪುನಃ ಭೂಮಿಯಲ್ಲಿ ಜನಿಸಿದಳು ಸೂರದತ್ತ (ಹಿಂದಿನ ಜನ್ಮದ ಸೋಮಶರ್ಮ) ಮತ್ತು ಯಶೋಭದ್ರೆ (ಹಿಂದಿನ ಜನ್ಮದ ತ್ರಿವೇದಿ)ಗೆ ಸುಕುಮಾರನೆಂಬ ಮಗನಾಗಿ ಹುಟ್ಟಿದಳು. ಸ್ತ್ರೀ ಜನ್ಮದಲ್ಲಿ ಮೋಕ್ಷ ಅಲಭ್ಯವೆಂಬ ಜೈನಧರ್ಮದ ತಾತ್ವಿಕತೆಯ ಮಿತಿಯಿಂದ ನಾಗಶ್ರೀಗೆ ಮರುಜನ್ಮ ಸುಕುಮಾರಸ್ವಾಮಿ.

"ಲೌಕಿಕ ಪ್ರಭುತ್ವದಲ್ಲಿ ರಾಜನ ಜೊತೆಗೆ ಪುರೋಹಿತನಾದ ಬ್ರಾಹ್ಮಣ ನಿರ್ಣಾಯಕನಾಗಿ ಬರುತ್ತಾನೆ. ವಡ್ಡಾರಾಧನೆಯಲ್ಲಿ ಬರುವ ಬ್ರಾಹ್ಮಣರಲ್ಲಿ ಬಹುತೇಕ ಜನ ರಾಜಪುರೋಹಿತರೇ ರಾಜ್ಯ ಕಾರ್ಯದಲ್ಲಿ ಇವರು ಸಕ್ರಿಯ ಪಾಲುದಾರರಾಗಿರುವುದರ ಜೊತೆಗೆ ವೇದ – ಶಾಸ್ತ್ರಾದಿ ಬ್ರಾಹ್ಮಣ ವಿದ್ಯೆಯಲ್ಲಿ ಪಾರಂಗತರಾಗಿರುತ್ತಾರೆ. ಇವರು ಜೈನ ಧರ್ಮವನ್ನು ಮುಖಾಮುಖಿ ಮಾಡಿದಾಗ ಕೆಲವರು ಅದರ ಗರಿಮೆಯನ್ನು ನೋಡಿ ಪ್ರಭಾವಿತರಾಗುತ್ತಾರೆ. ಇನ್ನೂ ಕೆಲವರು ಅದನ್ನು ಹಳಿಯುತ್ತಾರೆ ಹಾಗೂ ಆ ಕಾರಣಕ್ಕಾಗಿ ನೀಚ ಜನ್ಮಗಳಲ್ಲಿ ನರಳಿ, ಕೊನೆಗೂ ಅರಿವು ಮೂಡಿ ಜೈನ ಆಚಾರಗಳನ್ನು ಪರಿಗ್ರಹಿಸಿ ಮೋಕ್ಷದತ್ತ ಸಾಗುತ್ತಾರೆ. ಜೈನಯತಿ ಈ ರೀತಿ ಬ್ರಾಹ್ಮಣನಿಗೆ ಅವನ ಮತಿಯನ್ನೂ ತನ್ನ ಶಕ್ತಿಯನ್ನೂ ತೋರಿಸಿಕೊಡುತ್ತಾನೆ. ಸುಕುಮಾರಸ್ವಾಮಿಯ ಕಥೆಯಲ್ಲಿ ಉದ್ದಕ್ಕೂ ಇಂಥ ಸನ್ನಿವೇಶಗಳು ಬರುತ್ತವೆ."[೨೮]

ಸೂರ್ಯಮಿತ್ರನು ಕೊಳದ ಬಳಿ ಸಂಧ್ಯಾವಂದನೆ ಮಾಡುತ್ತಿರುವಾಗ ಅರಸನು ಅವನಿಗೆ ತಾತ್ಕಾಲಿಕವಾಗಿ ಕೊಟ್ಟಿದ್ದ ಮಾಣಿಕ್ಯದ ಉಂಗುರವು ಜಾರಿ ಕೊಳದಲ್ಲಿದ್ದ ತಾವರೆಯ ಮೇಲೆ ಬಿದ್ದಿತು. ಆಗ ಸೂರ್ಯಮಿತ್ರರು ಸ್ವಲ್ಪದೂರ ಬಂದನಂತರ ಗಾಬರಿಗೊಂಡು ಸುಧರ್ಮಾಚಾರ್ಯರನ್ನು ಕಂಡು ಮಹಾಸ್ವಾಮಿ ಆ ಉಂಗುರ ಮತ್ತೆ ಸಿಗುವುದೇ ಎಂದು ಕೇಳಿದಾಗ ಅವರು ಆ ಉಂಗುರವು ತಾವರೆಯಲ್ಲಿ ಇರುವ ವಿಷಯವನ್ನು ತಿಳಿಸಿ, ನಾಳೆ ಸೂರ್ಯೋದಯವಾದಾಗ ತಾವರೆ ಅರಳುತ್ತದೆ. ಆಗ ಅದನ್ನು ತೆಗೆದುಕೊಳ್ಳಬಹುದೆಂದು ತಿಳಿಸಿದರು. ಅದರಂತೆಯೇ ಸೂರ್ಯಮಿತ್ರನು ಉಂಗುರವನ್ನು ಮರಳಿ ಪಡೆದುಕೊಂಡನು. ಸುಧರ್ಮಾಚಾರ್ಯರ ಈ ಜ್ಯೋತಿಷ್ಯಜ್ಞಾನವನ್ನು ಕಂಡು ಅವರಿಂದ ಆ ವಿದ್ಯೆ ಕಲಿಯಬೇಕೆಂದುಕೊಂಡು ಸೂರ್ಯಮಿತ್ರನು ಅವರ ಶಿಷ್ಯನಾದನು. ಆಚಾರ್ಯರು ದೀಕ್ಷೆಕೊಟ್ಟರೂ ಜ್ಯೋತಿಷ್ಯ ಕಲಿಸಲಿಲ್ಲ ಮುನಿಪದ್ಧತಿಯನ್ನು ರಕ್ತಗತಮಾಡಿಕೊಳ್ಳದೆ ನಿನಗೆ ಜ್ಯೋತಿಷ್ಯವಶವಾಗದು ಎಂದರು. ಅದಕ್ಕಾಗಿ ವಿವಿಧ ಪುರಾಣಗಳನ್ನು, ಆಗಮಗಳನ್ನು ಓದಿದರು. ಇವುಗಳ ಅಧ್ಯಯನ ಮಾಡುತ್ತಾ, ಆಚರಿಸುತ್ತಾ ಹೋದ ಹಾಗೆ ನಿಜವಾಗಿಯೂ ಜೈನಧರ್ಮ ತತ್ವಗಳಲ್ಲಿ ಶ್ರದ್ಧೆಯುಂಟಾಗಿ ವೈರಾಗ್ಯಮೂಡಿತು. ಮೊದಲಿನ ಕಪಟತನಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಂಡರು. ಸೂರ್ಯಮಿತ್ರ, ನಾಗಶ್ರೀ, ವಾಯುಭೂತಿಯ ಕೀಳು ಜನ್ಮಗಳು ಇವೇ ಮೊದಲಾದ ಪ್ರಸಂಗಗಳಲ್ಲಿ ಬ್ರಾಹ್ಮಣ ಮತ್ತು ಜೈನಯತಿಗಳ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಕರ್ಮಫಲದಿಂದ ಜೀವವೊಂದು ಯಾವುದೇ ಜಾತಿಯ ವ್ಯಕ್ತಿಯಾಗಿ, ಪ್ರಾಣಿ, ಪಕ್ಷಿ, ಕ್ರಿಮಿ ಕೀಟಗಳಾಗಿ ಜನ್ಮ ತಳೆಯುತ್ತವೆ ಎಂಬ ನಂಬಿಕೆ ಜೈನಧರ್ಮಕ್ಕೆ ಇರುವುದರಿಂದ ಎಲ್ಲರನ್ನು ಜೀವಧಾತುಗಳೆಂದು ಸರಳೀಕರಿಸುತ್ತದೆ. ಜೈನತತ್ವಗಳನ್ನು ಕೈಗೊಳ್ಳುವುದರಿಂದ ಎಲ್ಲಾ ಜೀವಿಗಳು ಮೋಕ್ಷ ಪಡೆಯಬಹುದೆಂದು ಜೈನಧರ್ಮ ಹೇಳುತ್ತದೆ. ಆದರೆ ಹೆಣ್ಣಿನ ಜನ್ಮದ ನಂತರ ಗಂಡಿನ ಜನ್ಮವೆತ್ತ ನಂತರ ಆ ಜೀವಕ್ಕೆ ಮುಕ್ತಿ ದೊರೆಯುತ್ತದೆ ವಿನಃ ಹೆಣ್ಣಿನ ಜನ್ಮಕ್ಕೆ ಮೋಕ್ಷಸಿಗುವುದನ್ನು ವಡ್ಡಾರಾಧನೆಯ ಕಥೆಗಳು ಪ್ರತಿಪಾದಿಸುವುದಿಲ್ಲ.

ವಾಯುಭೂತಿ ಸೋದರ ಮಾವ ಮತ್ತು ಗುರುಗಳಾದ ಸೂರ್ಯಮಿತ್ರರನ್ನು ಅವಮಾನ ಮಾಡಿದ್ದರಿಂದ ಪೆಣ್ಗತ್ತೆ, ಪೇಪಂದಿ, ಪೆಣ್ಣಾಯ್, ಜಾತ್ಯಂಧೆ, ನಾಗಶ್ರೀ, ದೇವ, ಸುಕುಮಾರಸ್ವಾಮಿ, ಸಯಸತ್ರಮ ದೇವ ಜನ್ಮಗಳನ್ನು ಪಡೆಯುತ್ತಾನೆ. “ಭವಾವಳಿಯ

ಮೂಲಕ ಹೀಗೆ ಇಡೀ ಜೀವ ಪ್ರಪಂಚದಲ್ಲಿ ಒಂದು ಒಳ ಸಂಬಂಧವನ್ನು ಕಲ್ಪಿಸಿ ಜೀವಕೋಟಿಯ ಜತೆ ಮನುಷ್ಯ ಸಹ ಬಾಳ್ವೆಮಾಡುವ, ಸಹನೆಯಿಂದ ಬದುಕುವ ಅಗತ್ಯವನ್ನು ಜೈನಧರ್ಮ ಕಲ್ಪಿಸುತ್ತದೆ. ಯಾರನ್ನೂ ಯಾರು ಹಿಂಸಿಸಲು ಹಕ್ಕುದಾರರಲ್ಲ ಎಂಬ ಮೌಲ್ಯವನ್ನು ಪ್ರತಿಪಾದಿಸಿದೆ."[೨೯]

"೧೯ ಕಥೆಗಳಲ್ಲಿ ಮೊದಲನೆಯದಾದ ಈ ಕಥೆಯ ಇನ್ನೊಂದು ಮಹತ್ವದ ಮುಖವೆಂದರೆ, ಇದರಲ್ಲಿ ಕಂಡುಬರುವ ಕಥಾಕಾರನ ಮನದಲ್ಲಿದ್ದ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಕೆಲವು ಉಲ್ಲೇಖಗಳು ಮತ್ತು ಧಾರ್ಮಿಕ ಘಟನೆಗಳು ; ಹೊಸ ಅಥವಾ ತರುಣ ಜೈನಮುನಿಯ ಅಭ್ಯಾಸ ಕ್ರಮವನ್ನು ಉಲ್ಲೇಖಿಸುತ್ತ ಕಥಾಕಾರನು ೪ ಅನುಯೋಗಗಳಲ್ಲಿದ್ದ ಇಡೀ ದಿಗಂಬರ ಅಧಿಕೃತ ಆಗಮವನ್ನು ಸುಧರ್ಮಾಚಾರ್ಯ-ರಿಂದ ಹೇಳಿಸುವನು."[೩೦]

ಭದ್ರಬಾಹು ಭಟ್ಟಾರಕರ ಕಥೆಯು ವಡ್ಡಾರಾಧನೆಯಲ್ಲಿ ಕಂಡುಬರುವ ದೀರ್ಘಕಥೆಗಳಲ್ಲಿ ಒಂದಾಗಿದೆ. ಈ ಕಥೆ ಹರಿಷೇಣನ ಕಥಾಕೋಶದಲ್ಲಿ ಕಂಡುಬರುತ್ತದೆ. ಆದರೆ ಅಲ್ಲಿಯ ಕಥೆಗೂ ವಡ್ಡಾರಾಧನೆಯಲ್ಲಿ ಬರುವ ಕಥೆಗೂ ವ್ಯತ್ಯಾಸವಿದೆ. ಧಾರ್ಮಿಕವಾಗಿಯಲ್ಲದೆ ಚಾರಿತ್ರಿಕವಾಗಿಯೂ ಈ ಕಥೆಯು ಮುಖ್ಯವಾಗಿದೆ. ಕಥೆಯಲ್ಲಿ ನಂದ, ಚಾಣಕ್ಯ, ಚಂದ್ರಗುಪ್ತ, ಬಿಂದುಸಾರ, ಅಶೋಕ, ಸಂಪ್ರತಿ ಚಂದ್ರಗುಪ್ತ ಹೆಸರು ಉಲ್ಲೇಖವಾಗಿವೆ. ಇಲ್ಲಿ ಚಂದ್ರಗುಪ್ತನ ವೃತ್ತಾಂತವನ್ನು ಜೈನೀಯಗೊಳಿಸಲಾಗಿದೆ.

ಧರ್ಮದ ದೃಷ್ಟಿಯಿಂದ ಗಮನಿಸಿದಾಗ ಕಥೆಯು ಉಪವಾಸ ಮಹಿಮೆಯನ್ನು ಸಾರುತ್ತದೆ. ಕಥೆಯು ಸಂಪ್ರತಿ ಚಂದ್ರಗುಪ್ತನ ಹಿಂದಿನ ಜನ್ಮವನ್ನು ಪ್ರಸ್ತಾಪಮಾಡಿ ಸಮಾಧಿಗುಪ್ತ ಅವಧಿಜ್ಞಾನಿಗಳಿಂದ ತನ್ನ ಪೂರ್ವಜನ್ಮಗಳ ಬಗ್ಗೆ ತಿಳಿದುಕೊಳ್ಳುವಂತೆ ಸಂದರ್ಭ ಹೆಣೆದು 'ನಂದಿಮಿತ್ರ' ಪಾತ್ರತಂದು ಉಪವಾಸದ ಮಹಿಮೆಯನ್ನು ತಿಳಿಸುತ್ತದೆ. ರಾಜ, ರಾಣಿ, ಮಂತ್ರಿ, ರಾಜಶ್ರೇಷ್ಠಿ, ಯುವರಾಜ ಆಹಾರ ಸ್ವೀಕಾರಕ್ಕೆ ಆಹ್ವಾನವಿತ್ತರು ನಂದಿಮಿತ್ರನು ಉಪವಾಸ, ತಪಸ್ಸುಗಳನ್ನು ಮಾಡಿ ಕನಕಧ್ವಜ ದೇವನಾಗಿ ಹುಟ್ಟುತ್ತಾನೆ. ರಾಜ, ರಾಣಿ, ಮಂತ್ರಿ, ರಾಜಶ್ರೇಷ್ಠಿ, ಯುವರಾಜ ರಾಜಪ್ರಭುತ್ವದ ಪ್ರತಿನಿಧಿಗಳು. ಭದ್ರಬಾಹು ಭಟ್ಟಾರಕರು ದೇಶಾಂತರಗಳಲ್ಲಿ ಸುತ್ತುತ್ತ ಉಜ್ಜಯಿನಿಗೆ ಬಂದಾಗ ಸಂಪ್ರತಿ ಚಂದ್ರಗುಪ್ತ ಪರಿವಾರದೊಡನೆ ಬಂದು ಅವರಿಗೆ ವಂದಿಸಿ ಶ್ರಾವಕವ್ರತಗಳನ್ನು ಸ್ವೀಕರಿಸಿ ಹೋಗುವುದು, ಮಹಾರಾಜನು ಸಮಸ್ತ ವೈಭವದೊಡನೆ

ಬಸದಿಗೆ ಬಂದು ಕಿತ್ತಯ್ಯ (ನಂದಿಮಿತ್ರ) ಅವರಿಗೆ ನಮಸ್ಕರಿಸುವುದು, ರಾಜ, ರಾಣಿ, ಮಂತ್ರಿ, ರಾಜಶ್ರೇಷ್ಟ, ಯುವರಾಜನು ಕ್ರಮವಾಗಿ ಬಂದು ನಂದಿಮಿತ್ರನನ್ನು ಪ್ರಾರ್ಥಿಸಿಕೊಳ್ಳುವುದು ಮುಖ್ಯವಾಗಿ ಕಥೆಯಲ್ಲಿ ಕಾಣಿಸುತ್ತದೆ. ರಾಜಪ್ರಭುತ್ವವೂ ಧರ್ಮಪ್ರಭುತ್ವವನ್ನು ಒಪ್ಪಿಕೊಂಡು ಅದರಡಿಯಲ್ಲೇ ತನ್ನ ಜೀವನವನ್ನು ವಿಸ್ತರಿಸಿಕೊಂಡಿದೆ. ಭದ್ರಬಾಹು ಭಟ್ಟಾರ, ನಂದಿಮಿತ್ರ, ಸಂಪ್ರತಿ ಚಂದ್ರಗುಪ್ತ ಸಮಾಧಿ ಮರಣವಪ್ಪುದನ್ನು ಕತೆ ಹೇಳುತ್ತದೆ. ಸನ್ಯಾಸನ ವಿಧಿಯಿಂದ ಮರಣ ಹೊಂದಿದವರಿಗೆ ಸದ್ಗತಿಯು ಸಿಗುತ್ತದೆ ಎಂಬುದನ್ನು ಬಲವಾಗಿ ಜನಮನದಲ್ಲಿ ಬಿತ್ತುತ್ತದೆ. ಮತ್ತು ಸೋಮಶರ್ಮನೆಂಬ ರಾಜಪುರೋಹಿತನ ಮಗನಾದ ಭದ್ರಬಾಹು ಓರಗೆಯ ಮಕ್ಕಳೊಡನೆ ಒಂದರ ಮೇಲೊಂದರಂತೆ ಹದಿನಾಲ್ಕು ಜಿಲ್ಲೆಗಳನ್ನು ಜೋಡಿಸಿಟ್ಟು ಆಟ ಆಡುತ್ತಿದ್ದನ್ನು ಕಂಡು ಗೋವರ್ಧನಭಟ್ಟಾರಕರು ಹದಿನಾಲ್ಕು ಎಂಬ ಸಂಖ್ಯೆಯನ್ನು ಹದಿನಾಲ್ಕು ಜೈನಾಗಮಗಳೆಂದು ತಿಳಿದು, ಭದ್ರಬಾಹುವನ್ನು ತಂದೆ-ತಾಯಿಯ ಅನುಮತಿ ಪಡೆದು ಪಂಡಿತನನ್ನಾಗಿ ಮಾಡಿ ಮುಂದೆ ಆ ಮಗುವಿಗೆ ಸನ್ಯಾಸತ್ವವನ್ನು ನೀಡುತ್ತಾರೆ. ಇಲ್ಲೆಲ್ಲ ಧಾರ್ಮಿಕ ಸಂಗತಿಗಳೇ ಮೇಲುಗೈ ಸಾಧಿಸಿವೆ.

ಸಮಾಧಿ ವಿಧಿಯಿಂದ ಮರಣಹೊಂದಿದ ನಂದಿಮಿತ್ರನೆಂಬ ತರುಣಮುನಿಯ ಪ್ರಾರ್ಥಿವ ಶರೀರವನ್ನು ಒಯ್ಯುಲು ಮಂಟಪವನ್ನು ಅರಸನು ಮಾಡಿಸಿದನು. ಹಲವು ಬಗೆಯ ನೇತ್ರನೆಂಬ ರೇಷ್ಮೆವಸ್ತ್ರದ ಮೇಲ್ಕಟ್ಟು ಮತ್ತು ಧ್ವಜಪತಾಕೆಗಳನ್ನು ಕಟ್ಟಿಸಿದನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು, ಜೈನಸನ್ಯಾಸಿಗಳು ಮೆರವಣಿಗೆಯಲ್ಲಿದ್ದರು. ತಮಟೆ, ತುಣವ, ಭಂಭಾ, ಮರ್ದಳೆ, ಝಲ್ಲರಿ, ಮುಕುಂದ, ತಾಳ, ಕಾಹಳ, ಶಂಖ, ಕೊಳಲು, ವೀಣೆ ನಾದಗಳಿಂದ ಶೋಭಿಸುತ್ತಿತ್ತು. ಕವಿಶೇಷರೂ, ರಾಣೀವಾಸದ ಒಳ್ಳೆಯ ಹೆಂಡಿರೂ ಆ ಮಂಟಪಗಳ ಮುಂದೆ ಆಡುತ್ತ ದಮ್ಮ ಎಂಬ ನಾಣ್ಯಗಳನ್ನೂ ಹೊನ್ನುಗಳನ್ನೂ ಆಟದಂತೆ ಮುಂದೆ ಚೆಲ್ಲುತ್ತಿದ್ದರು. ಈ ರೀತಿ ಪಾರ್ಥೀವ ಶರೀರದ ಮೆರವಣಿಗೆಯು ಸಾಗುತ್ತಿತು. "ಕೆಲವು ಅತಿಮಾನುಷ ಅಂಶಗಳನ್ನು ಬಿಟ್ಟರೆ ಅಂದಿನ ಸಮಾಜದಲ್ಲಿ ಒಬ್ಬ ಪ್ರತಿಷ್ಠಿತ ಮನುಷ್ಯನ ಅಂತ್ಯಕ್ರಿಯೆಯ ದೃಶ್ಯವನ್ನು ಪ್ರತಿಬಿಂಬಿಸುತ್ತದೆ ಎನ್ನಲಡ್ಡಿಯಿಲ್ಲ. ಆ ಮೆರವಣಿಗೆಯಲ್ಲಿ ಪೊಲಲೊಳಗುಳ್ಳ ಜನಮೆಲ್ಲಂ ಕೊಂಡು ಬಂದು ಭಾಗವಹಿಸಿದ್ದರು"[೩೧] ಮತ್ತು ಅಂದಿನ ಸಮಾಜದಲ್ಲಿ ಬೇರೆ ಬೇರೆ ಧರ್ಮದವರು ಒಬ್ಬರನ್ನು ಮತ್ತೊಬ್ಬರು ಆದರಿಸುತ್ತಿದ್ದರು. ಧರ್ಮ ಸಾಮರಸ್ಯದಿಂದ ಬದುಕುವ ವಾತಾವರಣವೂ ಇತ್ತೆಂದು ತಿಳಿಯಬಹುದು.

ಲಲಿತಘಟೆಯ ಕಥೆಯು ಜೈನಧರ್ಮದಲ್ಲಿರುವ ತತ್ವಗಳನ್ನು ಆಚಾರಗಳನ್ನು ತಿಳಿಸುತ್ತದೆ. ಅಭಯಘೋಷ ಮಹರ್ಷಿಗಳ ಪ್ರವಚನದಿಂದ ಲಲಿತಘಟೆಯು ಪ್ರಾಯೋಪಗಮನ ವಿಧಿಯಿಂದ ಮರಣವನ್ನಪ್ಪಿ ರತ್ನತ್ರಯವನ್ನು ಸಾಧಿಸಿ ಮುಕ್ತಿಯನ್ನು ಪಡೆಯುತ್ತಾರೆ. ಲಲಿತಘಟೆಯಲ್ಲಿ ಐನೂರು ಮಂದಿಯಿದ್ದರು. ಇವರು ಜೈನಧರ್ಮದಲ್ಲಿ ನಂಬಿಕೆಯಿಲ್ಲದವರಾಗಿದ್ದರು. ಅಭಯಘೋಷ ಮುನಿಗಳ ಪ್ರವಚನದಿಂದ ಅವರ ಮೇಲೆ ಧರ್ಮ ತನ್ನ ಪ್ರಾಬಲ್ಯ ಸಾಧಿಸಿರುವುದನ್ನು ಕಾಣಬಹುದು. ರಾಜರ ವಿನೋದಗಳಲ್ಲಿ ಬೇಟೆಯು ಒಂದು. ಲಲಿತಘಟೆ ಬೇಟೆಗೆ ಹೋದಾಗ ಅಲ್ಲಿ ನಡೆದ ಅಸಾಮಾನ್ಯ, ಆಶ್ಚರ್ಯಕರ ಸಂಗತಿಯಿಂದ ಧರ್ಮೋಪದೇಶವನ್ನು ಪಡೆಯುತ್ತಾರೆ. ಧಾರ್ಮಿಕ, ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳಿಂದ ಲಲಿತಘಟೆಯು ಬದಲಾಗುತ್ತದೆ. ಧರ್ಮ, ದೇವತೆ, ತಪಸ್ವಿ, ಕರ್ಮಫಲಗಳಿಂದುಂಟಾಗುವ ಸ್ವರ್ಗ–ನರಕ ಮತ್ತು ಜನ್ಮಗಳು ಇವೇ ಮೊದಲಾದವುಗಳ ವರ್ಣನೆ ಇಡೀ ಜೈನತತ್ವದ ಸಾರವನ್ನು ಬಿಚ್ಚಿಡುತ್ತದೆ. ಚಿಕ್ಕ ಕಥೆಯಾದರೂ ಧರ್ಮ ನಿರೂಪಣೆ ಅಖಂಡವಾಗಿ ಬರುತ್ತದೆ.

ಬೇಟೆಗೆಂದು ಹೊರಟ ಲಲಿತಘಟೆಯು ಎಂಟು ದಿವಸಗಳ ಕಾಲ ಬೇಟೆ ಸಿಗದೆ ಬೇಸರಪಟ್ಟು, ದುಃಖಪಟ್ಟು ಇರುವಾಗ ಅಭಯಘೋಷ ಮಹರ್ಷಿಗಳನ್ನು ಕಪ್ಪುಮೃಗವೆಂದು ಶ್ರೀವರ್ಧನಕುಮಾರ ಮೊದಲಾದವರೂ ಬಿಲ್ಲುಗಳನ್ನು ಏರಿಸಿ ಬಾಣಪ್ರಯೋಗಿಸಲು ಮುಂದಾಗುವುದು ಮತ್ತು ಪ್ರವಚನ ಕೇಳಿದ ನಂತರ ತಮ್ಮ ತಲೆಗಳನ್ನು ಕಡಿದುಕೊಳ್ಳಲು ಆಯುಧಗಳ ಕಡೆಗೆ ಕೈಗಳನ್ನು ನೀಡಲು ಯೋಚಿಸುವುದು ರಾಜರ ದುಡುಕಿನ ಸ್ವಭಾವಗಳನ್ನೇ ಅಭಿವ್ಯಕ್ತಿಸುತ್ತದೆ. ಇಂತಹ ರಾಜರ ದುಡುಕುತನಗಳನ್ನು ತಡೆದು ಧರ್ಮದ ಎಳೆಯಿಂದ ಬಂಧಿಸಿ ನೈಜಮನೋಧರ್ಮವನ್ನು ವಡ್ಡಾರಾಧನಕಾರ ಮೆರೆದಿದ್ದಾನೆ.

ಲಲಿತಘಟೆಯ ಆಯುಷ್ಯ ಕಡಿಮೆಯಿದ್ದು ನೀರಿನಿಂದ ಮರಣವಿದೆಯೆಂದು ಅಭಯಘೋಷ ಮುನಿಗಳು ಹೇಳಿದಾಗ ಅದಕ್ಕೆ ಕುರುಹೇನು? ಎಂದು ಶ್ರೀವರ್ಧನ ಕುಮಾರ ಕೇಳಿದಾಗ ಮುನಿಗಳು ಹೇಳಿದರು.

೧. ನೀವೀಗ ಪಟ್ಟಣಕ್ಕೆ ಹೋಗುವಾಗ ನಿಮ್ಮೆದುರಿಗೆ ಎರಡು ಕಾಳಿಂಗಸರ್ಪಗಳು ಹೆಡೆಗಳನ್ನೆತ್ತಿ ನಾಲಗೆಗಳನ್ನು ಹೊರಳಿಸುತ್ತ ಬರುವುವು. ಆಗ ನೀವು ಗದರಿಸಿದರೆ ಅದೃಶ್ಯವಾಗುತ್ತವೆ.

೨. ಒಂದು ಕಿರುಗೂಸು ಕೋಲನ್ನು ಹಿಡಿದು ನಿಮ್ಮನ್ನು ಬಡಿಯಲು ಬರುವುದು. ಅದರ ಕೆಲಸವನ್ನು ನೀವು ನೋಡಿ ನಕ್ಕರೆ ನೀವು ನೋಡುತ್ತಿದ್ದಂತೆ ಭಯಂಕರ ಬೇತಾಳದ ರೂಪವನ್ನು ತಾಳಿ ಆಕಾಶದವರೆಗೂ ಬೆಳೆದು ದೊಡ್ಡದಾಗಿ ಮಾಯವಾಗುವುದು.

೩. ತುಂಬಿ ಹರಿಯುವ ತೊರೆ ಎದುರಾಗುವುದು.

೪. ನಿಮ್ಮ ತಾಯಿ ನಿಮ್ಮನ್ನು ರಾಕ್ಷಸ ನುಂಗಿದಂತೆ ಕನಸಿನಲ್ಲಿ ಕಂಡುದನ್ನು ತಿಳಿಸುವಳು.

"ಈ ಮೇಲೆ ಹೇಳಿದ ನಾಲ್ಕು ಮಾತುಗಳೆಲ್ಲಾ ಕೇವಲ ಅಪಶಕುನದ ಆಶಯಗಳಂತೆ ಪ್ರಯೋಗವಾಗಿದ್ದು, ಸಾವು ಈ ಆಶಯಗಳ ಹೊರಗೆ ಇದೆ. ನಂತರ ಭಟ್ಟಾರರ ಭವಿಷ್ಯ ನಿಜವಾಗುವುದನ್ನು ಕಥೆ ಪ್ರತ್ಯೇಕವಾಗಿ ಬಿತ್ತರಿಸುತ್ತದೆ. ಅಂದರೆ ಇಲ್ಲಿ ಭಟ್ಟಾರಕರ ಮಾತಿಗೆ ಪ್ರಾಮುಖ್ಯತೆ ಕೊಡಲಾಗಿದೆ"[೩೨] ಧರ್ಮವನ್ನು ಸ್ಥಾಪಿಸುವುದೇ ಕಥೆಗಾರನ ಪ್ರಮುಖ ಉದ್ದೇಶ.

ಕಾರ್ತಿಕ ಋಷಿಯ ಕಥೆಯೂ ಚಿಕ್ಕದಾದರೂ ಬಹಳ ಸಂಕೀರ್ಣವಾಗಿ ರೂಪುಗೊಂಡಿದೆ. ಅಗ್ನಿರಾಜ ತನ್ನ ಮಗಳಾದ ಕೃತ್ತಿಕೆಯನ್ನೆ ಮದುವೆಯಾಗುತ್ತಾನೆ. ಜೈನಧರ್ಮದ ದೃಷ್ಟಿಯಿಂದ ಯಾವುದೇ ವ್ಯಕ್ತಿ ಸ್ವದಾರ ಸಂತೋಷ ವ್ರತವನ್ನು ಆಚರಿಸಬೇಕು ಆದರೆ ಅಗ್ನಿರಾಜ ಅದನ್ನು ಅತಿಕ್ರಮದಿಂದ ಉಲ್ಲಂಘಿಸಿದ್ದಾನೆ. ಅಗ್ನಿರಾಜ ಮುನಿಗಳಿಗೆ ಪ್ರಶ್ನೆಕೇಳಿದಾಗ ಮುನಿ ಧರ್ಮದ ಪಂಚಸಮಿತಿಗಳಲ್ಲಿ ಒಂದಾದ ಭಾಷಸಮಿತಿಯನ್ನು ಮುನಿಗಳು ಅನುಸರಿಸುತ್ತಾರೆ. ಅಗ್ನಿರಾಜ ಕೋಪದಿಂದ ಮುನಿಗಳನ್ನು ಓಡಿಸುವುದು ಮತ್ತು ಕ್ರೌಂಚರಾಜ ಶಕ್ತಿಯೆಂಬ ಆಯುಧದಿಂದ ಕಾರ್ತಿಕನನ್ನು ಇರಿಯುವುದು ಇವೆರಡು ಕೋಪದ ಪರಿಣಾಮವನ್ನು ತಿಳಿಸುತ್ತವೆ ಮತ್ತು ಕಾರ್ತಿಕ ಋಷಿಯ ದೇಹವನ್ನು ತೊಳೆದ ನೀರು ಸರ್ವರೋಗಕ್ಕೆ ಔಷಧಿಯಾಗಿ ಪರಿವರ್ತನೆಗೊಳ್ಳುತ್ತದೆ.

ವಿದ್ಯುಚ್ಚೋರನೆಂಬ ರಿಸಿಯ ಕಥೆಯು ಮುಖ್ಯವಾಗಿ ಅಸ್ತೇಯ ವ್ರತವನ್ನು ಕುರಿತು ಹೇಳುತ್ತದೆ. ಜೊತೆಗೆ ವ್ರತಗಳನ್ನು ಪಾಲಿಸದಿದ್ದರೆ, ಶೀಲವನ್ನು ಕಾಪಾಡಿ-ಕೊಳ್ಳದಿದ್ದರೆ, ಚಾರಿತ್ರ್ಯವನ್ನು ಮೆರೆಯದಿದ್ದರೆ ಅವರಿಗಾಗುವ ದುಷ್ಪರಿಣಾಮಗಳನ್ನು ವಿವರಿಸುತ್ತದೆ. ಕಥೆಯಲ್ಲಿ ನರಕದ ಘೋರ ಶಿಕ್ಷೆಯ ವರ್ಣನೆ ಇದೆ. ಈ ನರಕದ

ಯಾತನೆಗಳ ಬಗ್ಗೆ ವಿದ್ಯುಚ್ಚೋರ ಚಿಕ್ಕವನಿದ್ದಾಗ ಜೈನಮುನಿಗಳ ಪ್ರವಚನದಿಂದ ತಿಳಿದಿರುತ್ತಾನೆ. ಈ ಸಹನಾಶಕ್ತಿ ಧರ್ಮಪ್ರಭಾವದಿಂದ ನಿರ್ಮಾಣವಾಗಿದೆ. ಮತ್ತು ನಿಜವಾದ ತಪಸ್ಸಿನ, ಧರ್ಮದ ಸ್ವರೂಪವನ್ನು ಕಥೆ ಚರ್ಚಿಸುತ್ತದೆ. ಹಾಗೂ ಶ್ರಾವಕವ್ರತದ ಘನತೆಯನ್ನು ಎತ್ತಿ ತೋರಿಸುತ್ತದೆ.

ಚಿಲಾತಪುತ್ರನ "ಕಥೆಯು ಒಂದು ಕಡೆಗೆ ಶ್ರಾವಕವತ್ರದ ನಾಲ್ಕು ಘಟಕಗಳಲ್ಲಿ (ದಾನ, ಶೀಲ, ಪೂಜೆ ಮತ್ತು ಉಪವಾಸ) ಒಂದಾದ ಆಹಾರ ದಾನದ (ದಾನವಲ್ಲಿ ನಾಲ್ಕು ಪ್ರಕಾರ: ಆಹಾರ, ಔಷಧ, ಆಶ್ರಯ ಮತ್ತು ಜ್ಞಾನ) ಮಹತ್ವವನ್ನು ವಿವೇಚಿಸುತ್ತದೆ ಮತ್ತು ಇನ್ನೊಂದು ಕಡೆಗೆ ಜೈನಕರ್ಮಸಿದ್ಧಾಂತವನ್ನು ತಿಳಿಸಿ ಹೇಳುತ್ತದೆ, ಅಲ್ಲದೆ ಒಬ್ಬ ವ್ಯಕ್ತಿ ಧಾರ್ಮಿಕ ಒಲವನ್ನು ಹೊಂದಿದ್ದಾದರೆ, ಆತನು ಮೊದಲು ಎಂಥ ಪಾಪವನ್ನು ಮಾಡಿದ್ದರೂ ಅದು ಆತನನ್ನು ಮುಕ್ತಿಯ ಮಾರ್ಗದ ಮೇಲಿರಿಸುವುದೆಂದು ಪ್ರತಿಪಾದಿಸುತ್ತದೆ"[೩೩] ಇದನ್ನು ಚಿಲಾತಪುತ್ರನ ಭವಾವಳಿಯಲ್ಲಿ ಗುರುತಿಸಬಹುದು.

ಚಿಲಾತಪುತ್ರನ ಹಿಂದಿನ ಭವ ನಂದಿಮಿತ್ರ. ಶ್ರೀಮಂತ ವ್ಯಾಪಾರಿ. ಸರಕು ಗಾಡಿಗಳಿಗೆ ಯಜಮಾನ. ಒಮ್ಮೆ ವ್ಯಾಪಾರದ ಸರಕಿನೊಂದಿಗೆ ವ್ಯಾಪಾರಕ್ಕೆ ಹೋಗಿದ್ದಾಗ ಒಂದು ಊರಲ್ಲಿ ತಂಗಿದ್ದನು. ಆಗ ಒಂಟಿಯಾಗಿ ಸಂಚರಿಸುವ ತಪೋವರರೆಂಬ ಜೈನಯತಿಗಳು ಗ್ರಾಮ, ನಗರ, ಖೇಡ, ಖರ್ವಡ, ಮಡಂಬ, ಪಟ್ಟಣ, ದ್ರೋಣಾಮುಖ ಎಂಬ ಭೂಭಾಗಗಳಲ್ಲಿ ಸಂಚಾರ ಮಾಡುತ್ತ ಭಿಕ್ಷೆಗೆ ಬಂದಾಗ ಊರೆಲ್ಲವನ್ನೂ ತಿರ್ರನೆ ತಿರುಗಿ ಸುತ್ತಾಡಿದರೂ ಯಾರೂ ಊಟಕ್ಕೆ ನಿಲ್ಲಿಸಲಿಲ್ಲ. ಅದನ್ನು ಕಂಡ ನಂದಿಮಿತ್ರನು ದಯೆಯಿಂದ ನಿಲ್ಲಿಸಿ ಎಳ್ಳಿನ ಉಂಡೆಗಳನ್ನು ಕೊಟ್ಟನು. ಈ ಧಾರ್ಮಿಕ ಕಾರ್ಯದಿಂದ ಅವನು ಮುಂದೆ ಭೋಗಭೂಮಿಯಲ್ಲಿ ವ್ಯಂತರದೇವನಾಗಿ ಹುಟ್ಟುವನು. ಆ ಜನ್ಮ ಕಳೆದ ನಂತರ ಚಿಲಾತಪುತ್ರನಾಗಿ ಹುಟ್ಟುವನು. ವಿಷಯಲಂಪಟನಾಗಿ, ಕೊಲೆಗಾರನಾಗಿ ಬದುಕಿದರೂ ಜೈನಮುನಿಗಳ ದರ್ಶನ ಪಡೆದು ದೀಕ್ಷೆಯನ್ನು ಸ್ವೀಕರಿಸಿ ಉಪಸರ್ಗವನ್ನು ಸಹಿಸಿ ಮುಂದೆ ದೇವನಾಗಿ ಹುಟ್ಟುವನು.

ದಂಡಕನೆಂಬ ಋಷಿಯ ಕಥೆಯು ಮುಖ್ಯವಾಗಿ ಕರ್ಮಫಲ ಸಿದ್ಧಾಂತವನ್ನು ವಿವರಿಸುತ್ತದೆ. ಆ ಮೂಲಕ ಧರ್ಮದ ಆಚರಣೆ ತುಂಬ ಮುಖ್ಯ ಎಂದು ಕಥೆಯು ಹೇಳುತ್ತದೆ.

ವೀತಶೋಕ ಪಟ್ಟಣವನ್ನು ಆಳುತ್ತಿದ್ದ ಅಶೋಕನೆಂಬ ರಾಜನ ಮಹಾಸಾಮಂತನಾದ ಸುಧಾಯಕ ಮಹಾಲೋಭಿಯಾಗಿದ್ದನು. ಬಹಳ ಘೋರವಾದ

ವ್ಯವಸಾಯಗಾರನು. ತನ್ನ ವ್ಯವಸಾಯದ ಹೊಲ ಗದ್ದೆಗಳನ್ನು ಒಕ್ಕಲು ಮಾಡುವಾಗ ಎತ್ತುಗಳ ಬಾಯನ್ನು ಅಲ್ಲಿ ಇಲ್ಲಿ ಬಾಯಿ ಹಾಕದಂತೆ ಕಚ್ಚಿ ಒಕ್ಕಿಸುತ್ತಿದ್ದನು ಮತ್ತು ಅಡಿಗೆ ಮಾಡುವ, ಬಡಿಸುವ, ಸೇವೆ ಮಾಡುವ ಹೆಂಡಿರ ಮೊಲೆಗಳನ್ನು ವಸ್ತ್ರದಿಂದ ಕಟ್ಟಿಸಿ ಶಿಶುಗಳನ್ನು ಮೊಲೆಯುಣ್ಣಲು ಬಿಡದೆ ಸೇವೆಮಾಡಿಸುತ್ತಿದ್ದನು. ನಂತರ ಕೊಲೆಯೂ, ದೊಡ್ಡ ವ್ಯವಸಾಯವೂ ದೊಡ್ಡ ವ್ಯಾಪಾರವೂ ಕಾರಣವಾಗಿ ನರಕದ ಜೀವನವನ್ನನುಭವಿಸುವನು. ಮುಂದೆ ಆತನು ತಲೆಯ ಮತ್ತು ಮುಖದ ರೋಗದಿಂದ ತೀವ್ರಯಾತನೆಗಳನ್ನು ಅನುಭವಿಸುವನು. ಒಮ್ಮೆ ತನಗಾಗಿ ಔಷಧಿಯನ್ನು ಬೆರಸಿ ಬೇಯಿಸಿದ ಅನ್ನವನ್ನು ಉಣ್ಣುವುದಕ್ಕೆಂದು ಸಿದ್ಧನಾದಾಗ ಸಮಾಧಿಗುಪ್ತರೆಂಬ ಋಷಿಗಳು ಭಿಕ್ಷಕ್ಕಾಗಿ ಬಂದಾಗ ತನಗೆ ಇರತಕ್ಕ ರೋಗವು ಅವರಿಗೂ ಉಂಟೆಂಬುದಾಗಿ ತಿಳಿದು ಮದ್ದಿನ ಅನ್ನವನ್ನು ಬಡಿಸಿದನು. ಹನ್ನೆರಡು ವರ್ಷಗಳಿಂದ ಕಾಡುತ್ತಿದ್ದ ರೋಗಗಳಿಂದ ಮುನಿಗಳು ವಿಮುಕ್ತರಾದರು. ಇದರಿಂದ ಸುಧಾಮಕನೂ ದಾನದ ಫಲದಿಂದ ಪುಣ್ಯವನ್ನುಗಳಿಸುವನು. ಇದು ಅನ್ನದಾನದ ಮತ್ತು ಔಷಧ ದಾನದ ಮಹತ್ವವನ್ನು ಎತ್ತಿಹಿಡಿಯುತ್ತದೆ[೩೪]. ತನ್ನ ಮೊದಲಿನ ಕರ್ಮಕ್ಕನುಸಾರವಾಗಿ ಆತನು ನರಕ ಜೀವಿಯಾಗಿ ಹುಟ್ಟಿ, ಭಯಾನಕವಾದ ಯಾತನೆಗಳನ್ನು ಅನುಭವಿಸಿ ದಂಡಕನಾಗಿ ಹುಟ್ಟಿ ತರುವಾಯ ತನ್ನ ಭಾವ ಅರ್ಧಚಕ್ರಿ. ವಿಷ್ಣುವಿನಲ್ಲಿ ದಂಡನಾಯಕನಾಗುವನು.

ದಂಡಕ ತನ್ನ ಹಿಂದಿನ ಭವವನ್ನು ಅರಿಷ್ಟನೇಮಿ ತೀರ್ಥಂಕರರಿಂದ ತಿಳಿದು ನರಕದ ಮಹಾದುಃಖಕ್ಕೆ ಹೆದರಿ. ತಪಸ್ಸನ್ನು ಕೈಗೊಂಡು ಎಲ್ಲಾ ಶಾಸ್ತ್ರಗಳನ್ನೂ ಕಲಿತು ಋಷಿಗಳೊಡನೆ ಸಂಚಾರ ಮಾಡುತ್ತ ಭಿಕ್ಷೆಗೆ ಹೋದಾಗ ಯಾರು ನಿಲ್ಲಿಸುವವರಿಲ್ಲ, ಒತ್ತಾಯದಿಂದ ನಿಲ್ಲಿಸಿದರೆ ಉಂಡುದು ವಾಂತಿಯಾಗುತ್ತದೆ. ಋಷಿಗಳೊಡನೆ ಭಿಕ್ಷೆಗೆ ಹೋದರೆ ಯಾರೊಬ್ಬರಿಗೂ ಭಿಕ್ಷೆ ಸಿಗುವುದಿಲ್ಲ. ಅದಲ್ಲದೆ ವಾತ, ಪಿತ್ತ, ಕಫ. ಖಾಸ, ಉಬ್ಬಸ, ಜ್ವರ, ಅರುಚಿ, ವಾಂತಿ, ಭೇದಿ, ಕಣ್ಣುನೋವು, ಹೊಟ್ಟೆನೋವು, ಭಗಂದರ, ಕುಷ್ಠ, ಕ್ಷಯ, ಗಂಡ ತಲೆನೋವು ಮುಂತಾದ ರೋಗಗಳಾಗಿ ರೂಪವೇ ತಿಳಿಯದ ಹಾಗೆ ರೋಗಗಳಿಗೆ ತುತ್ತಾಗುವನು. ಇದನ್ನು ತಿಳಿದ ವಿಷ್ಣುದಂಡಕ ಮುನಿಗಳನ್ನು ತನ್ನ ಅರಮನೆಗೆ ಆಮಂತ್ರಿಸಿ ಮಳೆಗಾಲದಲ್ಲಿ ಅರಮನೆಯ ದೇವರ ಮಂದಿರದಲ್ಲಿ ಇರಲು ವ್ಯವಸ್ಥೆ ಮಾಡುತ್ತಾನೆ. ವಿಷ್ಣು ತನ್ನ ಪ್ರಧಾನ ವೈದ್ಯನಾದ ಜಯನನ್ನು ಕರೆದು ಹೇಳಲು ದಿವ್ಯವಾದ ಔಷಧಿಗಳಿಂದ ಕೂಡಿದ ಉಂಡೆಗಳನ್ನು ಸಾವಿರಮಂದಿ ರಾಣಿಯರ ಮನೆಗಳಿಂದ ಚರಿಗೆಯ ರೂಪದಲ್ಲಿ ದಂಡಕ ಋಷಿಗೆ ಔಷಧಿ ಕೊಡಿಸಿದನು. ದಂಡಕ

ಮುನಿಗಳಿಗೆ ರೋಗವೆಲ್ಲವೂ ವಾಸಿಯಾಯಿತು. ಔಷಧಿಯಿಂದ ರೋಗವಾಸಿ ಮಾಡಿದ್ದರಿಂದ ವಿಷ್ಣುವಿಗೆ ತೀರ್ಥಂಕರ ಎಂಬ ಹೆಸರು ಬಂದಿತು.

ದಂಡಕ ಋಷಿಗಳಿಗೆ ಬಂದ ರೋಗವನ್ನು ನಿವಾರಿಸಿದ ವೈದ್ಯ ಜಯನನ್ನು ವಿಷ್ಣು ದಂಡಕರ ಎದುರಿನಲ್ಲಿ ಕೊಂಡಾಡಿದನು ಆದರೆ ಮುನಿಗಳು ಏನೂ ಮಾತನಾಡದೆ ಮೌನವಾಗಿದ್ದರು. ಮುನಿಗಳು ತನ್ನನ್ನು ಮೆಚ್ಚಲಿಲ್ಲ ಎಂದು ಜಯನು ಮನಸ್ಸಿನಲ್ಲಿ ಮುನಿಸು ತಾಳಿದನು. ಇವನು ಆರ್ತಧ್ಯಾನ ಮಾಡಿ ಕಾಲವಶವಾಗಿ ವಿಂಧ್ಯಾಟವಿಯ ನಡುವಿದ್ದ ನರ್ಮದಾ ನದೀ ತೀರದಲ್ಲಿ ಕಪಿಯಾಗಿ ಹುಟ್ಟಿದನು. ವಿಷ್ಣುವಿನ ಪ್ರೇರಣೆಯಂತೆ ಜಯನು ನನಗೆ ಔಷಧಿ ಕೊಟ್ಟಿರುವನು. ಇದು ಮುನಿಧರ್ಮಕ್ಕೆ ಅಪಚಾರವಾಯಿತು ಎಂದು ಭಾವಿಸಿ ಪ್ರಾಯಶ್ಚಿತ್ತಮಾಡಿಕೊಂಡರು. ಸಿಂಹನಿಷ್ಕ್ರೀಡಿತ ನೋಂಪಿಯೊಂದಿಗೆ ತಮ್ಮನ್ನು ಶಿಕ್ಷಿಸಿಕೊಳ್ಳುವರು. ಮುಂದೆ ನರ್ಮದ ನದಿ ತೀರದಲ್ಲಿ ಮಾವಿನ ಮರದಡಿ ಸ್ವಾಧ್ಯಾಯನಕ್ಕೆ ಕುಳಿತಾಗ ಮರದ ಮೇಲಿನ ಕಪಿಯು (ಹಿಂದಿನ ಜನ್ಮದಲ್ಲಿ ಔಷಧಿ ನೀಡಿದ ಜಯನೆಂಬ ವೈದ್ಯ) ಹಿಂದಿನ ಭವದ ದ್ವೇಷದಿಂದ ಮಾವಿನ ಕೊಂಬೆಯನ್ನು ದಂಡಕ ಋಷಿಯ ತೊಡೆಸೀಳಿಹೋಗುವಂತೆ ಬೀಸಿತು. ಮುನಿಗಳು ದೇಹದ ಮೇಲಿನ ಮೋಹವನ್ನು ತೊರೆದು ಸಮದಾನವಾಗೇ ಇದ್ದರು ಇವರಿಗೆ ತಮ್ಮ ದೇಹದ ಮೇಲೆ ಮಮಕಾರವಿಲ್ಲವೆಂದು ಪಶ್ಚಾತ್ತಾಪ ಉಂಟಾಗಿ ಕಪಿಗಳ ಸಮೂಹವನ್ನು ಕೂಡಿ ಬಂದು ಕೊಂಬೆಯನ್ನು ಕಿತ್ತು ಮದ್ದನ್ನು ಹಾಕಿಯತಿಗಳ ಕಾಲಿಗೆರಗಿತು. ಇದನ್ನು ಕಂಡು ಮುನಿಯು ಇದು ಭವ್ಯಜೀವಿಯೆಂದು ತಿಳಿದು ಧರ್ಮೋಪದೇಶ ಮಾಡಿದರು. ಜೈನತತ್ವದ ವಿಶ್ವಾಸಪೂರ್ಣ ವ್ರತಗಳನ್ನು ಕೊಟ್ಟರು. ಅದು ಅವನ್ನು ಸ್ವೀಕರಿಸಿ ಧರ್ಮದಲ್ಲಿ ಸೇರಿ ತನ್ನನ್ನು ನಿಂದಿಸಿಕೊಳ್ಳುತ್ತ ವ್ರತ ಉಪವಾಸಗಳಿಂದ ದೇಹವನ್ನು ದಂಡಿಸುತ್ತ ಕಾಲಕಳೆಯುತ್ತ ಒಂದು ದಿವಸ ಬೆಟ್ಟದ ತುದಿಯಿಂದ ಹಾರಿ ಬಿದ್ದಿತು. ಅದು ತಪ್ಪಿ ದಂಡಕ ಋಷಿಯ ಬಳಿಯಲ್ಲಿ ಬಿದ್ದಿತು. ಋಷಿಗಳು ಆ ಕೋತಿಗೆ ಸನ್ಯಾಸದೊಂದಿಗೆ ಪಂಚನಮಸ್ಕಾರಗಳನ್ನು ಉಪದೇಶಿಸಿದರು. ಅದು ಸತ್ತು ಹೋಗಿ ಆ ಜೀವವು ದೇವನಾಗಿ ಹುಟ್ಟಿತು.

ಕಥಾಕಾರನು ಈ ಕಥೆಯಲ್ಲಿ ಧಾರ್ಮಿಕ ಅಂಶಗಳನ್ನು ಹೇಳುವುದರೊಂದಿಗೆ, ಆಹಾರ ಮತ್ತು ಔಷಧಿ ಧಾನವನ್ನು ಎತ್ತಿಹಿಡಿಯುತ್ತದೆ. ಔಷಧಿ ಧಾನದಿಂದ ವಿಷ್ಣುಗೆ ತೀರ್ಥಂಕರ ಎಂಬ ಹೆಸರು ಬರುವುದು. ಕೋತಿಯು ತಾನೆ ಕೊಂಬೆಯಿಂದ ನೋವು ಮಾಡಿದ ಗಾಯಕ್ಕೆ ಔಷಧಿ ಹಚ್ಚುತ್ತದೆ. ದಂಡಕ ಋಷಿಯ ಭವ ಮತ್ತು ಅನುಭವಿಸುವ

ಯಾತನೆಗಳು ಮತ್ತು ಜಯವೈದ್ಯನ ಭವಗಳು ಕರ್ಮದ ಫಲಗಳನ್ನು ಹೇಳುತ್ತದೆ. ಮತ್ತು "ದಾನ ವ್ರತದ ಘನತೆಯನ್ನು ಎತ್ತಿತೋರಿಸಿ ಶ್ರಾವಕರು ಈ ಧಾರ್ಮಿಕ ಆಚರಣೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರಣೆ ನೀಡುತ್ತದೆ."[೩೫]

ಮಹೇಂದ್ರದತ್ತಾಚಾರ್ಯ ಮೊದಲಾದ ಐದುನೂರು ಋಷಿಗಳ ಕಥೆಯಲ್ಲಿ ಜನಾರ್ದನನೆಂಬ ಅರಸನ ಮುಖ್ಯ ಪುರೋಹಿತ ವ್ಯಾಳನು ಸ್ಕಂದಕುಮಾರ ಮುನಿಗಳೊಡನೆ ವಾದಮಾಡಿ ಸೋಲುತ್ತಾನೆ. ಇದರಿಂದ ರಾಜನು ಅವನನ್ನು ಓಡಿಸುತ್ತಾನೆ. ವ್ಯಾಳನು ಹೋಗಿ ದಂಡಕನೆಂಬ ರಾಜನ ಸೇವಕನಾಗಿ ಮಂತ್ರಿಪದವಿಯನ್ನು ಪಡೆದುಕೊಳ್ಳುತ್ತಾನೆ. ಮಹೇಂದ್ರದತ್ತ, ಸ್ಕಂದಕುಮಾರ ಮೊದಲಾದ ೫೦೦ ಮುನಿಗಳನ್ನು ವ್ಯಾಳನು ಮೋಸದಿಂದ ಒಂದು ಸಂಚಿನಲ್ಲಿ ಸಿಲುಕಿಸುತ್ತಾನೆ. ಮೊದಲು ದಂಡಕ ಸಂಚನ್ನು ನಂಬುವುದಿಲ್ಲ. ಋಷಿಗಳು ಪಠನ ಮಾಡುವ ಸ್ಥಳದ ಹತ್ತಿರದಲ್ಲಿ ಒಂದು ಗಿಡದ ಕೆಳಗೆ ಕೆಲವು ಆಯುಧಗಳನ್ನು ಹೂಳಿಟ್ಟು, ಆ ಐನೂರು ಮಂದಿ ಋಷಿಗಳು ರಾಜಕುಮಾರರು, ಶಕ್ತಿ ಪರಾಕ್ರಮವುಳ್ಳವರು ಋಷಿರೂಪ ತೋರಿಸಿ ನಿಮ್ಮ ಪ್ರಾಣಕ್ಕೆ ಅಪಾಯವನ್ನು ಉಂಟುಮಾಡಬೇಕೆಂದು ಯೋಚಿಸಿದ್ದಾರೆ ಎಂದು ವ್ಯಾಳನು ಹೇಳಿದರೂ, ರಾಜನೆ ಆಯುಧಗಳನ್ನು ನೋಡಿದರು ನಂಬುವುದಿಲ್ಲ. ಮತ್ತೊಮ್ಮೆ ವ್ಯಾಳ ಕೋಶಾಗಾರದ ಮನೆಯಲ್ಲಿ ಕನ್ನ ಹಾಕಿಸಿ ಭಂಡಾರದ ದ್ರವ್ಯಗಳ ಪೆಟ್ಟಿಗೆಗಳನ್ನು ಒಡೆದು ದ್ರವ್ಯ ನಾಣ್ಯಗಳನ್ನೂ ಚಿನ್ನವನ್ನೂ ಆಭರಣಗಳನ್ನೂ ಋಷಿಗಳಿರುವ ಬಸದಿಯೊಳಗೆ ಕೋಣೆಯಲ್ಲಿ ರಾಶಿ ಹಾಕಿಟ್ಟು ರಾಜನಿಗೆ ಹೇಳಿದಾಗ ತಳಾರನಿಗೆ ಆಜ್ಞೆ ಮಾಡುತ್ತಾನೆ. ತಳಾರ ಪ್ರಭುವೆ ಋಷಿಗಳು ಕನ್ನ ಹಾಕಿ ಬಸದಿಯಲ್ಲಿ ಚಿನ್ನವನ್ನೆಲ್ಲ ರಾಶಿ ಹಾಕಿದ್ದಾರೆ ಎಂದು ಹೇಳುತ್ತಾನೆ. ಆದರೆ ರಾಜ ಅವರು ಕನ್ನ ಹಾಕಿದ್ದಾರೆಂಬುದನ್ನು ನಂಬುವುದಿಲ್ಲ. ಬೇರೆಯವರು ಈ ಕೆಲಸ ಮಾಡಿದ್ದಾರೆಂದು ತಿಳಿಯುತ್ತಾನೆ. ದಂಡಕ ಮೇಲಿನ ಎರಡು ಪ್ರಸಂಗದಲ್ಲಿ ಒಮ್ಮೆ ಋಷಿಗಳ ಮೇಲೆ ಕೋಪಿಸತಕ್ಕ ಯಾರಾದರೂ ಅಲ್ಲಿ ಆಯುಧಗಳನ್ನು ಹೂಳಿಟ್ಟಿರಬಹುದು ಎನ್ನುತ್ತಾನೆ ಮತ್ತೊಮ್ಮೆ ಋಷಿಗಳು ಶ್ರಾವಕರಿಗೆ ಕಳವು ಮಾಡದಿರಿ ಬೇರೆಯವರ ವಸ್ತುವನ್ನು ತೆಗೆದುಕೊಳ್ಳದಿರಿ ಎಂದು ವ್ರತಗಳನ್ನು ಕೊಡತಕ್ಕವರು ಅವರು ಸ್ವತಃ ಕಳ್ಳತನ ಮಾಡುವರೇ? ಯಾರಾದರೂ ಅವರ ಮೇಲೆ ಕೋಪಗೊಳ್ಳುವವರು ಇದನ್ನು ಮಾಡಿದ್ದಾರೆ ಎನ್ನುತ್ತಾನೆ. ಕೊನೆಗೆ ವ್ಯಾಳ ಸುವ್ರತೆಯೆಂಬ ರಾಣಿಯೊಂದಿಗೆ ಕಾರ್ಯವನ್ನು ವ್ಯವಸ್ಥೆಗೊಳಿಸಿ ಮುನಿಗಳೇ ವಿದ್ರೋಹಿಗಳಾಗಿ, ಕಳ್ಳರಾಗಿ,

ವ್ಯಭಿಚಾರಿಗಳಾಗಿ ಬಾಸವಾಗುವಂತೆ ಮಾಡಿ, ಶಿಕ್ಷೆಯ ಅಧಿಕಾರ ಪಡೆದು ಐನೂರು ಮಂದಿಯನ್ನು ಗಾಣಕಿಕ್ಕಿ ಕೊಲ್ಲುತ್ತಾನೆ. ಇದರಿಂದ ವ್ಯಾಳನಿಗೆ ನರಕ ಪ್ರಾಪ್ತವಾಗುತ್ತದೆ. ಕಥೆಯಲ್ಲಿ ಮೇಲ್ನೋಟಕ್ಕೆ ರಾಜತ್ವ ಗೆದ್ದಂತೆ ಕಂಡರೂ ಧರ್ಮವೇ ತನ್ನ ಪ್ರಭುತ್ವ ಸಾಧಿಸಿದೆ.

ಕಥೆಯಲ್ಲಿ "ಸ್ತ್ರೀ ವಿಷಯಕ ಅನುಮಾನವು ರಿಸಿಯರನ್ನು ರಾಜ ದಂಡಿಸುವಂತೆ ಮಾಡುತ್ತದೆ.. ಜೈನಯತಿಯ ವೇಷ ಧರಿಸಿದವನೊಬ್ಬ ರಾಣಿಯ ಮಂಚವನ್ನೇರಿ ಸಲ್ಲಾಪದಲ್ಲಿ ತೊಡಗಿರುವ ಸನ್ನಿವೇಶವನ್ನು ವ್ಯಾಳ ಕೃತಕವಾಗಿ ಸೃಷ್ಟಿಸುತ್ತಾನೆ. ಅದನ್ನು ನೋಡಿದ ರಾಜ ನಿಂತ ನಿಲುವಿನಲ್ಲಿ ಮುನಿಗಳನ್ನು ಶಿಕ್ಷಿಸುವ ಆದೇಶ ನೀಡುತ್ತಾನೆ. ಈ ರೀತಿಯ ಅಪನಂಬಿಕೆಯಾಗಲಿ, ಅಸೂಯೆಯಾಗಲಿ ದಾಂಪತ್ಯ ಪ್ರೇಮದ ಹೆಸರಿನಲ್ಲಿ ವ್ಯಕ್ತಿಯನ್ನು ತನ್ನ ಅಧಿಕಾರಕ್ಕೆ ಒಳಗುಪಡಿಸುವ ಆಗಮಿಕೆಯ ವಿಸ್ತಾರವೇ ಆಗಿದೆ. ಅಧಿಕಾರದ ನೆಲೆಯಿಂದ ಸಂಬಂಧಗಳನ್ನು ಬಿಟ್ಟುಕೊಟ್ಟಾಗಲೇ ಶುದ್ಧ ಮಾನವೀಯ ಪ್ರೇಮ ಪ್ರಕಟವಾಗುತ್ತದೆ."[೩೬]

ಚಾಣಾಕ್ಯರಿಸಿಯ ಕಥೆಯು ಅಜೈನ ಹಿನ್ನೆಲೆಯನ್ನು ಒಳಗೊಂಡಿದ್ದರೂ ಕೆಲವು ಧಾರ್ಮಿಕ ವಿಚಾರಗಳನ್ನು ಒಳಗೊಂಡಿದೆ. ಅಧಿಕಾರಕ್ಕಾಗಿ ರಾಜ ರಾಜರ ನಡುವೆ ನಡೆಯುವ ಸಂಘರ್ಷವನ್ನು ಚಿತ್ರಿಸುವಲ್ಲಿ ಧರ್ಮದ ವಿಚಾರವೇ ಗೌಣವಾಗಿದೆ. ಆರಂಭದಲ್ಲಿ ಬರುವ ಭಗವತೀ ಆರಾಧನೆಯ ಗಾಹೆ, ಪಠ್ಯದ ಕೊನೆಯಲ್ಲಿ ಮುಖ್ಯ ಧರ್ಮದ ವಿಚಾರಗಳು ಬರುತ್ತವೆ. ಚಾಣಾಕ್ಯ ಐತಿಹಾಸಿಕ ವ್ಯಕ್ತಿ ಮತ್ತು ಬ್ರಾಹ್ಮಣ ಕಥೆಯು ಈತನನ್ನು ಜೈನ ಋಷಿಯನ್ನಾಗಿ ಪರಿವರ್ತಿಸಿದೆ. ನಂದರನ್ನು ನಾಶಮಾಡಿ ಚಂದ್ರಭುಕ್ತನನ್ನು ಪಟ್ಟಕ್ಕೆ ತಂದು ಸಾಮ್ರಾಜ್ಯ ಸ್ಥಾಪಿಸುವುದರಲ್ಲಿ ಚಾಣಾಕ್ಯನ ಪಾತ್ರ ಮುಖ್ಯವಾದುದು. ಕೊನೆಗೆ ಇಹಲೋಕದ ಜೀವನಕ್ಕೆ ಜಿಗುಪ್ಸೆಗೊಂಡು ಮತಿವರಾಚಾರ್ಯರ ಬಳಿ ತಪಸ್ವಿಯಾಗಿ ಆಗಮಗಳೆಲ್ಲವನ್ನು ಕರಗತ ಮಾಡಿಕೊಂಡು, ವಿಹರಿಸುತ್ತಾ ಪಾಟಲೀಪುತ್ರಕ್ಕೆ ಬಂದಾಗ ಸುಬಂಧುವಿಗೆ ಪ್ರತೀಕಾರವು ಹೆಡೆಯೆತ್ತಿ, ಅವರ ಸುತ್ತಲೂ ಗೊಬ್ಬರದ ರಾಶಿಯೊಟ್ಟಿ ಬೆಂಕಿಯಿಡಲು ಆ ವೇದನೆಯನ್ನು ಸೈರಿಸಿ ಕ್ಷಮೆಯನ್ನು ಮೆರೆದು ಚಾಣಾಕ್ಯರಿಸಿಯು ಸದ್ಗತಿ ಪಡೆದನು.

ವೃಷಭಸೇನ ರಿಸಿಯ ಕಥೆಯಲ್ಲಿ ವೃಷಭಸೇನಾಚಾರ್ಯರಿಗೆ ಎಲ್ಲರೂ ಪೂಜಿಸಿ ನಮಸ್ಕರಿಸಿದ್ದನ್ನು ಕಂಡು ಸಹಿಸಲಾಗದೆ ಮಂತ್ರ ವಿಷ್ಣುಮತ್ತ್ಯ ಅವರೊಡನೆ ವಾದಕ್ಕಿಳಿದು

ಸೋತನು. ಅದು ತನಗಾದ ಅವಮಾನವೆಂದು ಬಗೆದು ನಡುರಾತ್ರಿಯಲ್ಲಿ ಮುನಿಸಮುದಾಯಕ್ಕೆ ಕೊಳ್ಳಿಯಿಟ್ಟು ಅವರ ಸಾವಿಗೆ ಕಾರಣನಾಗುತ್ತಾನೆ. ಈ ಕಥೆಯಲ್ಲಿ ಭವಾವಳಿಯಾಗಲಿ, ಉಪಕಥೆಗಳಾಗಲಿ ಇಲ್ಲ ಧರ್ಮ ಕರ್ಮಸಿದ್ಧಾಂತವನ್ನು ಪರಿಚಯಿಸುತ್ತ ಶ್ರಾವಕರಿಗೆ ಪ್ರತಿಫಲತತ್ವವನ್ನು ಬೋಧಿಸುತ್ತದೆ.

ಅಧೀನ ಪರಿಕಲ್ಪನೆ

ಸಾಮಾನ್ಯವಾಗಿ ಪ್ರಾಚೀನ ಕನ್ನಡ ಕಾವ್ಯಪರಂಪರೆಯಲ್ಲಿ ಶ್ರೀಮಂತ ರಾಜ ಮಹಾರಾಜರ, ಉದಾತ್ತಚರಿತರಾದ ಧಾರ್ಮಿಕ ವ್ಯಕ್ತಿಗಳ, ಪುರಾಣ ಪುರುಷರ ಕಥೆಗಳು ವರ್ಣಿತಗೊಂಡಿವೆ. ಇಂತಹ ಕಥೆಗಳಲ್ಲಿ ಅಲ್ಲಲ್ಲಿ ಸಾಮಾನ್ಯರ ಚಿತ್ರಣವೂ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ವಡ್ಡಾರಾಧನೆಯು ಮಹತ್ವದ್ದಾಗಿದೆ. ಇದು ಧರ್ಮ ಮತ್ತು ರಾಜ ಪ್ರಭುತ್ವ ಪದ್ಧತಿಗಳನ್ನು ಕೇಂದ್ರೀಕರಿಸಿಕೊಂಡು ರಚನೆಯಾದ ಕೃತಿಯಾದರೂ ಅಂದಿನ ಸಾಮಾನ್ಯರ ಚಿತ್ರಣವನ್ನು ಬಿಚ್ಚಿಡುತ್ತದೆ. ಧರ್ಮಪ್ರಭುತ್ವ ಮತ್ತು ರಾಜ ಪ್ರಭುತ್ವದಡಿಯಲ್ಲಿ ರಾಜಕೀಯ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಕಳೆದುಕೊಂಡವರ ಚಿತ್ರಣ ಕೃತಿಯಲ್ಲಿದೆ. ಇದಲ್ಲದೆ ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಪದ್ಧತಿಗಳು, ನಂಬಿಕೆಗಳು, ಹಬ್ಬ ಹರಿದಿನಗಳು, ವ್ಯಾಪಾರ, ಶಿಕ್ಷಣ, ಆರ್ಥಿಕ ಸ್ಥಿತಿಗತಿಗಳು, ಕಳ್ಳರು, ಆಹಾರ, ಉಡುಗೆ ತೊಡುಗೆ ಇನ್ನಿತರ ಸಂಗತಿಗಳು ದಾಖಲಾಗಿವೆ.

ಸುಕುಮಾರಸ್ವಾಮಿಯ ಕಥೆಯಲ್ಲಿ ನಾಗಶ್ರೀಯು ಐದು ವ್ರತಗಳನ್ನು ಪಾಲಿಸುವಂತೆ ಮಾಡಲು ಕಥೆಗಾರ ಹೆಣೆದಿರುವ ಉಪಕಥೆಗಳು ಸಾಮಾನ್ಯರ ಬದುಕಿನ ಮುಖಗಳನ್ನು ಪರಿಚಯಿಸುತ್ತವೆ.

ಸಮಾಜದ ಸಾಮಾನ್ಯ ಸ್ವರೂಪದಲ್ಲಿ ಸಾರ್ಥಾಧಿಪತಿ, ಶ್ರೇಷ್ಠಿ, ಶೆಟ್ಟಿ ಮತ್ತು ಪರದ ಮೊದಲಾದವರ

ಚಿತ್ರಣಗಳು ದೊರೆಯುತ್ತವೆ. ಹದಿನಾರು ಕೋಟಿ ಹೊನ್ನುಳ್ಳ ಸೆಟ್ಟಿಯ ಮಗ ವರಸೇನ ಜೂಜಾಡಿ ಸಾವಿರ ದೀನಾರಗಳನ್ನು ಸೋತು, ಆ ಸಾಲವನ್ನು ಕೊಡದೆ ನಿರಪರಾಧಿಯಾದ ಅಕ್ಷಧೂರ್ತನನ್ನು ಕೊಲ್ಲುತ್ತಾನೆ. ಆದ್ದರಿಂದ ರಾಜ ಅವನಿಗೆ ಮರಣದಂಡನೆಯನ್ನು ವಿಧಿಸುತ್ತಾನೆ. ಸಾಮಾನ್ಯವಾಗಿ ಉನ್ನತ ವರ್ಗದವರು ಸಪ್ತವ್ಯಸನಗಳಿಗೆ ಒಳಗಾಗಿರುತ್ತಿದ್ದರು. ಜೂಜಿನಿಂದ ಆದ ಒಂದು ಜೀವದ ಕೊಲೆಯು

ಮೇಲೆ ಈ ಉಪಕಥೆಯು ಬೆಳಕು ಚೆಲ್ಲುತ್ತದೆ. ಒಂದು ಜೀವವನ್ನು ಕೊಂದ ತಪ್ಪಿಗೆ ಮರಣದಂಡನೆಯನ್ನು ವಿಧಿಸುವುದು ಆ ಕಾಲದ ನ್ಯಾಯ. ಈ ವಿಚಾರ ಇವತ್ತಿಗೆ ಮಹತ್ವದ ವಿಚಾರವಾಗಿ ಕಾಣಿಸುತ್ತದೆ. ಒಂದು ಜೀವಿಯನ್ನು ಕೊಂದವನಿಗೆ ಬದುಕುವ ಹಕ್ಕಿಲ್ಲ ಎಂಬ ಉದ್ದೇಶವನ್ನು ಹೇಳುತ್ತದೆ. ಮರಣದಂಡನೆಯಂಥ ಶಿಕ್ಷೆ ಸಮಾಜದಲ್ಲಿ ಇಂತಹ ಕೆಲಸಗಳಿಗೆ ನಿಯಂತ್ರಣವನ್ನು ಹಾಕಿತ್ತು. ಮತ್ತು ಅಂದು ರಾಜಾಜ್ಞೆಯೆ ಅಂತಿಮ ನಿರ್ಧಾರವಾಗಿತ್ತೆಂಬುದನ್ನು ತಿಳಿಸುತ್ತದೆ. "ಹದಿನಾರು ಕೋಟಿ ಹೊನ್ನುಳ್ಳವನು ಸಾವಿರ ದೀನಾರಗಳನ್ನು ಸೋತ ಮಗನನ್ನು ರಕ್ಷಿಸಿಕೊಳ್ಳುವ ಯಾವ ಪ್ರಯತ್ನಗಳನ್ನೂ ಮಾಡುವುದಿಲ್ಲ.... ಜೂಜನ್ನು ರಕ್ಷಿಸುವಂತಹ ರಾಜ್ಯಾಡಳಿತವಿದೆ. (ಉತ್ತಮ ಪ್ರಭುತ್ವ ಲೊಳಲೊಟ್ಟೆ!) ; ಹದಿನಾರು ಕೋಟಿ ಹೊನ್ನುಳ್ಳವನ ಮಗನು ಸಾವಿರ ದೀನಾರದ ಸಾಲದ ಬಾಧೆ ತಾಳಲಾರದೆ ಕೊಲೆ ಮಾಡುತ್ತಾನೆ ಮತ್ತು ಮರಣದಂಡನೆಗೆ ಈಡಾಗುತ್ತಾನೆ. ಕಥೆಯಲ್ಲಿ ಈ ಪೊಳಲ ಪ್ರಧಾನನಪ್ಪ ಶ್ರೇಷ್ಠಿ; ಎನ್ನುವ ಮಾತು ಬರುತ್ತದೆ. ಆದರೆ ಆ ಪೊಳಲಲ್ಲಿ ಪ್ರಧಾನರಾದವರು ಮನುಷ್ಯರಾರೂ ಅಲ್ಲ! ಅಲ್ಲಿ ಮುಖ್ಯವಾದದ್ದು ಸಾವು ಬದುಕಿನ ಆಟವನ್ನು ಆಡಿಸುವಂತಹದು ಹಣ ಮಾತ್ರವಾಗಿದೆ. ಅಕ್ಷಧೂರ್ತನ ಕೊಲೆ ಮತ್ತು ವರಸೇನನ ಮರಣದಂಡನೆಗಳು ಮನುಷ್ಯನ ಜೀವ ಎಷ್ಟು ಅಪಮೌಲ್ಯಗೊಂಡಿವೆ ಎನ್ನುವುದನ್ನು ಹೇಳುತ್ತದೆ."[೩೭]

೨. ವೈನಯಿಕ, ವೈಕ ಮತ್ತು ವ್ಯೋಮಕ ಎಂಬ ಮೂವರು ಭತ್ತದ ವ್ಯಾಪಾರದಲ್ಲಿ ಜನರಿಗೆ ಮೋಸಮಾಡಿ ಧಾನ್ಯ ಕದಿಯುತ್ತಿದ್ದವರ ಉಪ ಕಥೆಯೂ ಮೂರು ಉಪಕಥೆಗಳನ್ನು ಒಳಗೊಂಡಿದೆ. ಈ ಕಥೆಯಲ್ಲಿ ವ್ಯಾಪಾರದ ಚಿತ್ರಣ ಬರುತ್ತದೆ. ಧಾನ್ಯವನ್ನು ಬಳ್ಳದಿಂದ ಅಳೆದು ದೊಡ್ಡ ಪ್ರಮಾಣದಲ್ಲಿ ಲೆಕ್ಕ ಮಾಡುತ್ತಿದ್ದರು ಎಂಬ ಅಂಶ ಗೋಚರಿಸುತ್ತದೆ.

ಕನ್ನೆಯ ಕಥೆ :

ಕೌಶಂಬಿ ಎಂಬ ಊರಿನಲ್ಲಿ ಕೋಟ್ಯಾಧೀಶನಾದ ಸುಮಿತ್ರಶೆಟ್ಟಿಯ ಮಗ ವಸುಮಿತ್ರನು ಸರ್ಪದಿಂದ ಕಡಿಯಲ್ಪಟ್ಟು ಸತ್ತು ಹೋದನು. ಹೆಣವನ್ನು ಮಸಣಕ್ಕೆ ತಂದಾಗ ಗರುಡನಾಭಿಯೆಂಬ ಮಂತ್ರವಾದಿ ಮರುದಿನ ಮಂತ್ರ ಹಾಕಿ ಬದುಕಿಸುವುದಾಗಿ ಹೇಳಿದಾಗ ಸೆಟ್ಟಿಯು ನಾಲ್ವರು ಭಟರನ್ನು ಕಾವಲಿರಿಸಿದನು. ರಾತ್ರಿಯಲ್ಲಿ ಒಂದು ಕುರಿಯನ್ನು ಕದ್ದು ತಂದು ಕೊಯ್ದು ಬೇಯಿಸಿ ನಾಲ್ವರು

ತಿನ್ನುತ್ತಾರೆ. ಮರುದಿನ ಸಾವಿರ ದೀನಾರಗಳಿದ್ದ ನಾಲ್ಕು ಚೀಲಗಳನ್ನು ಎಸೆದಾಗ ಒಬ್ಬ ನನಗೆ ಸಿಗಲಿಲ್ಲ ಎಂದಾಗ, ಸೆಟ್ಟಿ ರಾಜನಿಗೆ ದೂರು ನೀಡಿದನು. ರಾಜ ಕಳ್ಳನನ್ನು ಪತ್ತೆ ಮಾಡಬೇಕೆಂದು ತಳಾರನಿಗೆ ಹೇಳಿದನು. ಆತನಿಗೆ ಅದು ತಿಳಿಯದಿದ್ದಾಗ ಈ ಸಮಸ್ಯೆಯನ್ನು ತಿಳಿದ ತಳವಾರನ ಮಗಳು ಸುಮತಿ ತಂದೆಯ ಬಳಿ ಬಂದು ನಾನು ಪತ್ತೆ ಮಾಡಿಕೊಡುವೆ ಎಂದು ಆ ನಾಲ್ವರು ಭಟರನ್ನು ಕೂರಿಸಿಕೊಂಡು ಸುಧಾಮೆಯ ಕಥೆಯನ್ನು ಹೇಳಿದಳು.

ಸುಧಾಮೆಯು ಮೊಸಳೆಯಿಂದ ತನ್ನನ್ನು ಪಾರು ಮಾಡಿದ್ದಕ್ಕಾಗಿ ತನ್ನ ಮಾವನಿಗೆ ಮದುವೆಯೆಂದು ಮೊದಲ ದಿವಸದ ಅಲಂಕಾರವನ್ನು ತೋರಿಸಲು ಹೋಗುತ್ತಾಳೆ. ದಾರಿಯಲ್ಲಿ ಮೊದಲು ಒಬ್ಬ ಕಳ್ಳನೂ, ಸ್ವಲ್ಪ ದೂರದ ನಂತರ ತಳವಾರನೂ, ಅನಂತರದಲ್ಲಿ ಒಬ್ಬ ಬ್ರಹ್ಮರಾಕ್ಷಸನೂ ಕ್ರಮವಾಗಿ ಭೇಟಿಯಾಗುತ್ತಾರೆ. ತನ್ನನ್ನು ಬೆದರಿಸಿದ ಅವರಿಗೆ ಸುಧಾಮೆಯು ತಾನು ತುರ್ತುಕಾರ್ಯದ ಮೇಲೆ ಹೋಗುತ್ತಿರುವುದಾಗಿಯೂ ಸ್ವಲ್ಪ ಸಮಯದ ನಂತರ ಹಿಂದಿರುಗಿ ಬರುವುದಾಗಿಯೂ ಹೇಳಿದಳು. ಅವರು ಒಪ್ಪಿ ಅವಳನ್ನು ಮುಂದೆ ಹೋಗಲು ಬಿಟ್ಟು ಅವಳಿಗೆ ತಿಳಿಯದಂತೆ ಹಿಂಬಾಲಿಸಿಕೊಂಡು ಹೋದರು. ನಾನು ಕೊಟ್ಟ ಮಾತಿನಂತೆ ನನ್ನ ಅಲಂಕಾರವನ್ನು ತೋರಿಸುವುದಕ್ಕಾಗಿ ಬಂದಿದ್ದೇನೆಂದು ಸೋದರಮಾವನಿಗೆ ಹೇಳಿದಾಗ ವಿದ್ಯಾಧರಿಯ ದೇವಗಣಿಕೆಯ ರೂಪವನ್ನು ಹೋಲುತ್ತೀಯೆಂದು ಹೇಳಿ ಅಲ್ಲಿಂದ ಕಳುಹಿಸುತ್ತಾನೆ. ಸುಧಾಮೆ ಹಿಂತಿರುಗುವಾಗ ಬ್ರಹ್ಮರಾಕ್ಷಸನನ್ನು ಕುರಿತು ನಿನಗೆ ತೋಚಿದಂತೆ ಮಾಡು ಎಂದಾಗ "ನೀಂ ಸತ್ಯವಾದಿಯಯ್ ಆದಮಾನುಂ ರೂಪು ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ವಿಭ್ರಮಂಗಳನೊಡೆಯಯ್ ನಿನ್ನಂ ತಿಂದನಾವಗತಿಗೆ ಪೊಪೆಂ ನಿನ್ನ ರೂಪನಟಿಯಲಾಱನದಱನಂಜದೆ ಪೋಗು"[೩೮] ಎಂದು ಬ್ರಹ್ಮರಾಕ್ಷಸ ಹೇಳುತ್ತಾನೆ. ಮುಂದೆ ತಳಾರ "ನೀ ಪೊಲ್ಲಮಾನಸಿಯೆ ಎಂದು ಮನದೊಳೆ ಬಗೆದೆಂ ನಿನ್ನಂ ತೊಳ್ಳಿದರಾರು ಮಿಲ್ಲ ನುಡಿದ ನನ್ನಿಯಂ ತಪ್ಪದೆ ಬಂದೆ ಸತ್ಯವಾದಿಯಯ್ ಪೋಗಬ್ಬಾ"[೩೯] ಎಂದು ಹೇಳುತ್ತಾನೆ. ಕಳ್ಳನು "ಎನಗೇನೊಂದೆ ಭವಮೆ ನಿನ್ನ ಕೈಯದಂ ಕೊಂಡಾನೇನಾಚಂದ್ರಾರ್ಕತಾರಂಬರಂ ಬರ್ದುಪ್ಪೆನೆ ಎಣಿಕೊಂಡ ಕಸವರಂ ತವನಿಧಿಯಂತೆ ತವದಿರ್ದಪ್ಪುದೆ ನಿನ್ನ ಕೈಯಿಂದಂ ಕೊಳ್ಳೆ ಪೋಗಬ್ಬಾ"[೪೦] ಎಂದು ಹೇಳುತ್ತಾನೆ. ಇದು ಗೋವಿನ ಹಾಡಿನಲ್ಲಿ ಬರುವ 'ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಸರ್ವಬಳಗವು' ಎಂದು ಹೇಳುವ

ಪುಣ್ಯಕೋಟಿಯನ್ನು ನೆನಪಿಸುತ್ತದೆ. ಈ ಕಥೆಯನ್ನು ಹೇಳಿ ಸುಮತಿಯು ಕಳ್ಳನನ್ನು ಕಂಡು ಹಿಡಿದು ತಂದೆಗೆ ಒಪ್ಪಿಸುವಳು. ಈ ಕಥೆಯಲ್ಲಿ ಮುಖ್ಯವಾಗಿ ಸುಮತಿಯ ಬುದ್ಧಿಕುಶಲತೆ, ಸುಧಾಮೆಯ ಸತ್ಯಸಂಧತೆ ಇವೆರಡೂ ಗಮನ ಸೆಳೆಯುತ್ತದೆ. ಸುಮತಿ ಭಟರನ್ನು ಅಣ್ಣಂದಿರೆ ಎಂದು ಕರೆದು, ಕಳ್ಳನನ್ನು ಕಂಡು ಹಿಡಿಯಲು ಕಳ್ಳನನ್ನು ಕುರಿತು ನಿನ್ನನ್ನು ಪ್ರೀತಿಸಿದ್ದೇನೆ. ನನಗೆ ಬೇಕಾದಷ್ಟು ಆಭರಣವನ್ನು ಮಾಡಿಸಲು ತಕ್ಕ ಐಶ್ವರ್ಯ ನಿನ್ನಲ್ಲಿದ್ದರೆ ನಾನು ನಿನ್ನ ಹೆಂಡತಿಯಾಗಿ ನಿನ್ನ ಜೊತೆ ಬರುವೆನು ಎಂದು ಹೇಳುವಲ್ಲಿ ಅವಳ ಬುದ್ಧಿವಂತಿಕೆ ಅನಾವರಣಗೊಂಡಿದೆ. ಸುಧಾಮೆಯ ಸತ್ಯಸಂಧತೆಯನ್ನು ಅನಾವರಣಗೊಳಿಸುತ್ತ, ಸತ್ಯ ಪ್ರತಿಯೊಬ್ಬನೂ ಪಾಲಿಸಬೇಕಾದ ಮೌಲ್ಯ ಎಂಬುದನ್ನು ಕಥೆಗಾರ ತಿಳಿಸುತ್ತಾನೆ ಮತ್ತು ಬ್ರಹ್ಮರಾಕ್ಷಸ ಕಲ್ಪನೆಯಾದರೂ ತಳಾರ ಮತ್ತು ಕಳ್ಳ ಇವರಿಬ್ಬರ ಕೆಲಸಗಳು ರಾತ್ರಿಯಲ್ಲೇ. ತಳಾರ ನೈತಿಕತೆಯ ಉಳಿವಿಗಾಗಿ ಕೆಲಸ ಮಾಡುತ್ತಾನೆ. ಆದರೆ ಕಳ್ಳ ನೈತಿಕತೆಯ ಹರಣ ಮಾಡುತ್ತಾನೆ.

ವೈನಾಕನ ಕಥೆ :

ನಾಗದತ್ತ ಆಳು ವೈನಾಕನು ಕಬ್ಬಿನ ಗದ್ದೆಯನ್ನು ಉಳುತ್ತಿದ್ದಾಗ ಅವನಿಗೆ ನಿಧಿಯು ಸಿಕ್ಕಿತು. ಆ ವಿಷಯವನ್ನು ಗುಟ್ಟಾಗಿಡಲು ಮತ್ತು ಹೆಂಡತಿಯ ಮನಸ್ಸನ್ನು ಪರೀಕ್ಷಿಸಲು ಬಯಸಿ ತಾನು ಗರ್ಭ ತಾಳಿದವನಂತೆ ನಟಿಸಿದನು. ಗಂಡಸರಿಗೆ ಆಗದಿರುವಂಥದು ನನಗೆ ಆಗಿದೆ ಯಾರಿಗೂ ಹೇಳದಿರು ಎನ್ನಲು ಆಕೆ ಸಹಿಸಲಾರದೆ ಪಟ್ಟಣದ ಜನರೆಲ್ಲರಿಗೂ ತಿಳಿಯುವ ಹಾಗೆ ಹೇಳಿದಳು. ಕಥೆಯಲ್ಲಿ ವೈನಾಕ ನಿಧಿ ಸಿಕ್ಕಾಗ ಅದನ್ನು ನಾಗದತ್ತಸೆಟ್ಟಿಗೆ ತಂದು ಕೊಡದೆ ಹೆಂಡತಿಗೂ ಹೇಳದೆ ಗುಟ್ಟಾಗಿಡಲು ಪ್ರಯತ್ನಿಸುವನು. ನಿಧಿ ಅವನನ್ನು ಅಪ್ರಮಾಣಿಕನನ್ನಾಗಿ ಮಾಡುವುದು. ಪರೀಕ್ಷೆಗೊಳಪಡುವುದು ಮತ್ತು ಊರಿಗೆಲ್ಲ ತಿಳಿಯುವ ಹಾಗೆ ಗುಟ್ಟನ್ನು ಹೇಳುವುದು ಈ ಎರಡು ಅಂಶಗಳಿಂದ ವೈನಾಕನ ಹೆಂಡತಿ ಗಮನ ಸೆಳೆಯುವಳು. ಈ ಪಾತ್ರಕ್ಕೆ ವಿರುದ್ಧ ದಿಕ್ಕಿನಲ್ಲಿ ಸುಧಾಮೆ, ಸುಮತಿ ಹೆಣ್ಣು ಮಕ್ಕಳು ಕಾಣಿಸುತ್ತಾರೆ. ಕಥೆಯಲ್ಲಿ ಹೆಣ್ಣಿನ ವಿವಿಧ ಮುಖಗಳನ್ನು ಕಥೆಗಾರ ಚಿತ್ರಿಸುತ್ತಾನೆ.

ಗಂಭೀರೆಯ ಕಥೆ :

ಗಂಭೀರೆಯೆಂಬ ಮುದುಕಿಯ ಮಗಳು ಹರಿಣಿ ಗರ್ಭಿಣಿಯಾದಾಗ ಆಕೆಗೆ ಕಡುಬು ತಿನಬೇಕೆನಿಸಿತು. ಗಂಭೀರೆ ವಿವಿಧ ಲಾಡುಗಳು, ಕಡುಬುಗಳು ಇತರ ಹಲವು

ಭಕ್ಷ್ಯಗಳನ್ನು ಮಾಡಿಕೊಂಡು ಹೋಗುವಾಗ ದಾರಿಯಲ್ಲಿ ಎಂಟು ಜನ ಕಳ್ಳರು ಎದುರಾದಾಗ, ಅವರಲ್ಲೊಬ್ಬನನ್ನು ಗಂಭೀರೆ ಗಟ್ಟಿಯಾಗಿ ಹಿಡಿದುಕೊಂಡು ಹನ್ನೆರಡು ವರ್ಷಗಳ ಹಿಂದೆ ಮನೆಬಿಟ್ಟು ಹೋದ ನನ್ನ ಮಗನಂತೆ ಇರುವೆಯೆಂದು, ಅವನನ್ನು ಮಗಳ ಮನೆಗೆ ಕರೆತಂದು ಈ ಕಳ್ಳರ ತಲೆಗೆ ಎಣ್ಣೆ ಹಾಕಿ, ನೀರು ಕಾಯಿಸಿಟ್ಟು ತಲೆಗೆ ಬಿಸಿಗಂಜಿಯನ್ನು ಸುರಿದು ಮನೆಯ ಮಾಳಿಗೆಗೆ ಬಂದು ಕಳ್ಳರೆಂದು ಅರಚಿಕೊಂಡಳು. ಕಳ್ಳರು ಹೆದರಿ ಓಡಿದರು. ಮುದುಕಿ ವಂಚಿಸಿದಳೆಂದು ಕಳ್ಳರು ಹಗೆತನವನ್ನು ಹಿಡಿದರು. ಆ ಕಳ್ಳರು ರಾತ್ರಿ ಕನ್ನ ಹಾಕಲು ಬಂದಾಗ ಅವರ ಮೂಗುಗಳನ್ನು ಕೊಯ್ದಳು. ಈ ಮನೆಯ ಗೊಡವೆ ಬೇಡೆಂದು ಇಂದ್ರಜಾಲಿಗನ ಮನೆಗೆ ಕನ್ನಹಾಕಿ ಪೆಟ್ಟಿಗೆಯನ್ನು ಸ್ಮಶಾನಕ್ಕೆ ಹೊತ್ತು ತಂದರು. ಅವರಲ್ಲಿ ಆರು ಜನರು ಹೋಗಿ ಕುರಿಯನ್ನು ಕದ್ದು ತಂದು ಕೊಂದು ಬೇಯಿಸಿ ತಿಂದು ಮುಂದೆ ಪಯಣ ಬೆಳೆಸಿದರು. ಇತ್ತ ಗಂಭೀರೆ ಮರುದಿನ ಬೆಳಗಾಗಲು ಮೂರು ಗಂಟೆಗಳಿವೆಯೆಂಬ ಸಮಯದಲ್ಲಿ ತನ್ನ ಊರಿಗೆ ಹೊರಟಳು. ದಾರಿಯಲ್ಲಿ ಹೆದರಿ ಆಲದ ಮರವೇರಿದಾಗ ಆ ಕಳ್ಳರು ಮರದ ಬುಡಕ್ಕೆ ಬಂದರು. ಅವರಲ್ಲೊಬ್ಬನು ದಾರಿಹೋಕರನ್ನು ಗಮನಿಸಲು ಮರಹತ್ತಲು ಗಂಭೀರೆಯನ್ನು ಕಂಡು ನೀನಾರೆಂದು ಕೇಳಲು ನಾನು ಈ ಮರದಲ್ಲಿರುವ ಯಕ್ಷಿಣಿ ಎಂದಳು. ನನ್ನ ಹೆಂಡತಿಯಾಗುವೆಯಾ? ಎಂದು ಕಳ್ಳ ಕೇಳಿದನು. ಗಂಭೀರೆ ಹೇಳಿದಂತೆ ಕಳ್ಳ ನಾಲಗೆಯಿಂದ ಮಾಂಸದ ತುಂಡನ್ನು ಅವಳ ಬಾಯಲ್ಲಿಡುವಾಗ ಅವನ ನಾಲಗೆ ಹರಿದುಹೋಗುವಂತೆ ಕಚ್ಚಿದಳು. ಆತ ಕೂಗಾಡಿಕೊಂಡು ಬಿದ್ದುಬಿಟ್ಟನು. ಕಳ್ಳರು ಹೆದರಿ ಓಡಲು ನೀವು ಕದ್ದುದರಲ್ಲಿ ಎಂಟನೆಯ ಒಂದು ಅಂಶವನ್ನು ನನಗೆ ತಂದು ಈ ಮರದ ಪೊಟರೆಯಲ್ಲಿಟ್ಟು ಹೋಗಬೇಕು ಇಲ್ಲ ನಿಮ್ಮೆಲ್ಲರನ್ನೂ ತಿಂದು ಬಿಡುವೆನೆಂದು ಗಂಭೀರೆ ಹೇಳಿದಾಗ ಅವರು ಹಾಗೆಯೇ ಮಾಡಿದರು. ಪ್ರತಿದಿನ ಊರಿನಿಂದ ಬಂದು ಪೊಟರೆಯಲ್ಲಿದ್ದ ದ್ರವ್ಯವನ್ನು ಕೊಂಡು ಹೋಗುತ್ತಿದ್ದಳು. ಕಥೆಯಲ್ಲಿ ಗಂಭೀರೆಯ ಬುದ್ಧಿವಂತಿಕೆ ಗಮನ ಸೆಳೆಯುತ್ತದೆ. ಮತ್ತು ಆಕೆ ಕದ್ದ ಹಣದಲ್ಲಿ ಎಂಟನೆಯ ಒಂದು ಭಾಗ ಕೇಳುವುದರಲ್ಲಿ ಅನ್ಯಾಯದಲ್ಲಿಯೂ ಒಂದು ನ್ಯಾಯವನ್ನು ಕಾಣಬಹುದು. ಹಾಗೂ ಮಗಳು ಗರ್ಭಿಣಿಯಾದಾಗ ತಾಯಿ ವಿವಿಧ ರೀತಿಯ ಭಕ್ಷ್ಯಗಳನ್ನು ಕೊಂಡು ಹೋಗುತ್ತಿದ್ದಳು ಎಂಬ ಅಂಶಗಳು ಗೋಚರಿಸುತ್ತವೆ.

ಕಥೆಯಲ್ಲಿ ಕಳ್ಳರ ಬಗ್ಗೆ ವಿವರಗಳು ದೊರೆಯುತ್ತವೆ. ಕುರಿಯನ್ನು ಕದ್ದು ತಂದು ಕೊಂದು ಬೇಯಿಸಿ ತಿನ್ನುವ ಪ್ರಸಂಗವಿದೆ (ಕನ್ನೆಯ ಕಥೆಯಲ್ಲೂ ಬರುತ್ತದೆ).

೧೩. ಸೂರದತ್ತನೆಂಬ ವ್ಯಾಪಾರಿಯ ಮಗಳಾದ ಮೋದಾಳಿಯು ತಾಯಿಯ ಗರ್ಭದಲ್ಲಿರುವಾಗಲೇ ಸೋದರಮಾವನಾದ ನಂದನಿಗೆ ಕೊಡಬೇಕೆಂದು ನಿಶ್ಚಯಿಸಿದ್ದರು. ಹುಟ್ಟುವ ಮಗು ಹೆಣ್ಣೋ-ಗಂಡೋ ಎಂಬ ವಿಷಯವು ತಿಳಿಯದೆ ಒಪ್ಪಂದ ಮಾಡಿದರು. ತನಗಾಗಿ ಹನ್ನೆರಡು ವರ್ಷಗಳು ಕಾಯುವಂತೆಯೂ ಬಾರದಿದ್ದಲ್ಲಿ ಮೋದಾಳಿಯನ್ನು ತಮ್ಮ ಬೋಧನಿಗೆ ಕೊಟ್ಟು ಮದುವೆ ಮಾಡುವುದೆಂದು ನಂದ ಹಣ ಸಂಪಾದಿಸಲು ಸುವರ್ಣ ದ್ವೀಪಕ್ಕೆ ಹೋಗುವನು. ಅವಧಿ ಕಳೆದರೂ ನಂದ ಹಿಂದಿರುಗದಿರಲು ತಮ್ಮನಿಗೆ ಸೂರದತ್ತ ಧಾರೆಯೆರೆದು ಕೊಡುವ ಸಂದರ್ಭದಲ್ಲಿ ನಂದನು ಬರತ್ತಾನೆ. ಆಗ ನಂದ ಬೋಧರಿಬ್ಬರು 'ಅವನ ಹೆಂಡತಿಯನ್ನು ನನಗೆ ಸ್ವೀಕರಿಸಲು ಬರುವುದೇ?' ಎಂದು ಹೇಳುತ್ತ ಮೋದಾಳಿಯನ್ನು ಮದುವೆಯಾಗು-ವುದಿಲ್ಲ. ಮುಂದೆ ಎಂಟು ಮಂದಿ ಹೆಂಡತಿಯರಿದ್ದರೂ ತೃಪ್ತನಾಗದ ನಾಗಸೂರ ಎಂಬುವವನು ಮೋದಾಳಿಯ ಜೊತೆ ಗುಟ್ಟಾಗಿ ಸೇರುತ್ತಾನೆ. ಇವರಿಬ್ಬರು ಚಂಪಾನಗರಕ್ಕೆ ಬಂದಾಗ ತಳಾರನ ಕೈಗೆ ಸಿಕ್ಕಿ ಶಿಕ್ಷೆಗೆ ಗುರಿಯಾಗುವರು.

ವಡ್ಡಾರಾಧನೆಯ ಕಾಲದಲ್ಲಿ ಸೋದರ ಮಾವನಿಗೆ ಮದುವೆಯಾಗುವ ಪರಿಪಾಠವಿತ್ತು. ಈ ರೀತಿಯ ನೈತಿಕ ಸಂಬಂಧವಲ್ಲದೆ. ಮೋದಾಳಿ ಮತ್ತು ನಾಗಸೂರರಂತಹ ಅನೈತಿಕ ಸಂಬಂಧಗಳು ಸಾಮಾಜಿಕ ವ್ಯವಸ್ಥೆಯಲ್ಲಿದ್ದವು. ನಾಗಸೂರ ಎಂಟು ಜನ ಹೆಂಡತಿಯರನ್ನು ಹೊಂದಿದ್ದರೂ ತೃಪ್ತನಾಗದೆ ಮೋದಾಳಿಯ ಜೊತೆ ಗುಟ್ಟಾಗಿ ಬಾಳುತ್ತಿದ್ದನು. ಗಂಡು ಎಷ್ಟು ಬೇಕಾದರೂ ಮದುವೆಯಾಗ-ಬಹುದಾಗಿತ್ತು, ನಿರ್ಬಂಧಗಳಿರಲಿಲ್ಲ.

೧೪. ರಾಜನ ಹಸುಗಳ ಮಂದೆಯನ್ನು ಕಾಯುತ್ತಿದ್ದ ವೀರಪೂರ್ಣನಿಗೆ ರಾಜ ಮೆಚ್ಚಿ ಹತ್ತು ಕರೆವ ಹಸುಗಳನ್ನು ಮತ್ತು ಮೂರು ಸಾವಿರ ಖಂಡುಗ ಭತ್ತವನ್ನೂ ಕೊಟ್ಟನು. ವೀರಪೂರ್ಣನು ಆ ಸಲುಗೆಯಿಂದ ರಾಜನು ತನಗೆ ಕೊಟ್ಟಿದ್ದಾನೆಂದು ಹೇಳಿಕೊಂಡು ಅಧೀನ ರಾಜರ, ಅಧಿಕಾರಿಗಳ ಹಾಗೂ ಅರಸಿಯರ ಆಕಳುಗಳೊಳಗೆ ಉತ್ತಮವಾದ ಎಮ್ಮೆಗಳನ್ನೂ, ಹಸುಗಳನ್ನೂ ಆಯ್ದುಕೊಂಡು ರಾಜನ ಹಸುಗಳ ಮಂದೆಯೊಳಗೆ ಸೇರಿಸಿಕೊಂಡು ಉಣ್ಣುತ್ತಿದ್ದನು. ಒಮ್ಮೆ ಮಹಾರಾಣಿಯ ಕಾಮಧೇನುವನ್ನು ವಶಪಡಿಸಿಕೊಂಡಾಗ ರಾಜನು ಕೋಪಗೊಂಡು "ಎನ್ನ ಕೊಟ್ಟುದಱಿಕೊಳ್ ಸಂತೋಷಂ ಬಟ್ಟನಿಲ್ಲ ಲೋಗರ ಪಶುಗಳಂ ಕೊಳಲ್ತಗುಳ್ದೊನ್

ಮಹಾಲೋಭಾಭಿಭೂತನ ಸಂತುಷ್ಟಚಿತ್ತನಿವನಂ ಕೊಲ್ಲಿ"[೪೧] ಎಂದು ತಳಾರನಿಗೆ ಹೇಳಿದನು. ದುರಾಸೆಗೆ ಸಿಗುವ ಫಲವನ್ನು ವೀರಪೂರ್ಣನ ಕಥೆ ಹೇಳುತ್ತದೆ.

ಸುಕುಮಾರಸ್ವಾಮಿಯ ಕಥೆಯಲ್ಲಿ ಬರುವ ಮೇಲಿನ ಉಪಕಥೆಗಳಲ್ಲಿ ಚದುರಿದಂತೆ ಸಾಮಾಜಿಕ ಚಿತ್ರಣಗಳು ದೊರೆಯುತ್ತದೆ. ಈ ಕಥೆಯು ಒಳಗೊಂಡಂತೆ ಕೃತಿಯ ಉಳಿದ ಕಥೆಗಳಲ್ಲಿ ಸಿಗುವ ಸಮಾಜ ಅಧಿಕಾರಸ್ಥ ನೆಲೆಗಳನ್ನು ಒಪ್ಪಿಕೊಂಡು ಬದುಕುವ ವ್ಯವಸ್ಥೆಯ ಚಿತ್ರಣ ದೊರೆಯುತ್ತದೆ. ರಾಜರುಗಳು ಪ್ರಜೆಗಳ ಕಷ್ಟಕ್ಕೆ ತತ್‌ಕ್ಷಣ ಸ್ಪಂದಿಸಿ ಯಜಮಾನಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡಿದ್ದರು. ರಾಜ ಪಟ್ಟಣದಲ್ಲಿ ನಡೆಯುವ ಕಳ್ಳತನವನ್ನು ಪತ್ತೆ ಹಚ್ಚಲು ತಳಾರನಿಗೆ ತಕ್ಷಣ ಆಜ್ಞಾಪಿಸುತ್ತಾನೆ. ಕೊಲೆಗಾರನಾದ ವರಸೇನ, ಮೋಸಗಾರನಾದ ವೈನಯಿಕ, ವ್ಯಭಿಚಾರಿಗಳಾದ ಮೋದಾಳಿ ಮತ್ತು ನಾಗಸೂರ, ದನಗಾಹಿಯಾದ ವೀರಪೂರ್ಣರಿಗೆ ಶಿಕ್ಷೆ ನೀಡುತ್ತಾನೆ. ಸೋಮಶರ್ಮ ನನ್ನ ಮಗಳಾದ ನಾಗಶ್ರೀಯನ್ನು ಜೈನಸನ್ಯಾಸಿಗಳು ತಮ್ಮ ಮಗಳೆಂದು ವಶದಲ್ಲಿಟ್ಟುಕೊಂಡಿದ್ದಾರೆ ಎಂದು ಚಂದ್ರವಾಹನ ರಾಜನಿಗೆ ದೂರು ಕೊಟ್ಟಾಗ ರಾಜ ನಾಗಸ್ಥಾನಕ್ಕೆ ಬರುತ್ತಾನೆ. ರಾಜ ವೃಷಭಾಂಕನು ಲಕ್ಷ ದೀನಾರವನ್ನು ಕೊಟ್ಟು ರತ್ನಗಂಬಳಿಯನ್ನು ಕೊಳ್ಳಲಾಗದ್ದನ್ನು ಸುಕುಮಾರಸ್ವಾಮಿಯ ತಾಯಿ ಯಶೋಭದ್ರೆ ಕೊಂಡಾಗ ಅವರ ಮನೆಗೆ ಹೋಗಿ ವೈಭವವನ್ನು ನೋಡಿ ಆಶ್ಚರ್ಯಗೊಳ್ಳುತ್ತಾನೆ. ಇದರ ನಡುವೆಯೇ ಸುಧಾಮೆ, ಸುಮತಿ, ಗಂಭೀರೆ, ವೈನಯಿಕ, ಮೋದಾಳಿಯರಂಥ ಸಾಮಾನ್ಯರ ಜೀವನ ಗಮನ ಸೆಳೆಯುತ್ತದೆ.

ನಾಗರಕಲ್ಲಿಗೆ ಪೂಜೆ ಮಾಡಿದರೆ ಮಕ್ಕಳಿಲ್ಲದವರಿಗೆ ಮಕ್ಕಳಾಗುವುದೆಂಬ ನಂಬಿಕೆ ಅತ್ಯಂತ ಪ್ರಾಚೀನ ಕಾಲದಿಂದಲೂ ನಮ್ಮಲ್ಲಿದೆ. ರಾಜ ಪುರೋಹಿತ ಸೋಮಶರ್ಮ ಮಕ್ಕಳನ್ನು ಬೇಡಿ ಸಂಬರ ನಾಗಠಾಣಕ್ಕೆ ವೈಭವೋಪೇತ ಮೆರವಣಿಗೆಯನ್ನು ಪೂಜಾ ದ್ರವ್ಯಗಳನ್ನು ಕೊಂಡೊಯ್ಯುತ್ತಿರುವುದನ್ನು ಕೇಳಿ ತಿಳಿದ ಜಾತ್ಯಂಧೆ ಸಂಕಲ್ಪ ಮಾಡಿಕೊಂಡು ಸತ್ತು ಅವರಿಗೆ ನಾಗಶ್ರೀಯಾಗಿ ಹುಟ್ಟುತ್ತಾಳೆ. ನಂಬಿಕೆಗಳು ಸಾಮಾನ್ಯರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ನಿರ್ಜೀವ ವಸ್ತುವಿನಂತೆ ಅಥವಾ ಅವಲಂಬಿತ ಸ್ಥಿತಿಯಲ್ಲಿ ವಡ್ಡಾರಾಧನೆಯ ಕಥೆಗಳು ಪರಿಚಯಿಸುತ್ತವೆ. ಕಾರ್ತಿಕ ಋಷಿಯ ಕಥೆಯಲ್ಲಿ ಅಗ್ನಿರಾಜ ಕೃತಿಕೆಯನ್ನು ಒಂದು ವಸ್ತುವಿನಂತೆ ಗುರುತಿಸುತ್ತಾನೆ.

ಸುಕೌಶಳಸ್ವಾಮಿಯ ಕಥೆಯಲ್ಲಿ ಸುಕೌಶಳಸ್ವಾಮಿಗೆ ಸುವ್ರತೆ ಎಂಬ ದಾದಿಯು ಹಾಲುಣಿಸುತ್ತಿದ್ದಳು, ಸುಮತಿ ಎಂಬುವಳು ಲೇಪನಾದಿಗಳನ್ನು ಸಿದ್ಧಪಡಿಸಿ ಹಚ್ಚುವವಳಾಗಿದ್ದಳು, ನಂದೆ ಎಂಬುವಳು ಆಟವಾಡಿಸುವ ದಾದಿಯಾಗಿದ್ದಳು, ಸುಪ್ರಭ ಎಂಬುವಳು ಸ್ನಾನ ಮಾಡಿಸುವವಳಾಗಿದ್ದಳು, ಮೇಘಮಾಲೆ ಎಂಬುವಳು ಅಲಂಕಾರ ಮಾಡುವ ದಾದಿಯಾಗಿದ್ದಳು – ಈ ರೀತಿಯಾಗಿ ಐದು ಜನ ದಾದಿಯರ ಚಿತ್ರಣ ದೊರೆಯುತ್ತದೆ. ಈ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮಾನವ ಸಂಬಂಧಗಳ ಮೌಲ್ಯಹರಣವಾಗಿದೆ. ಮತ್ತು ಕಥೆಯಲ್ಲಿ ಜಯಾವತಿ ಗೌಪ್ಯವಾಗಿ ಮಗನನ್ನು ಹೆತ್ತ ವಿಷಯ ಕುಂದಬ್ಬೆ ಮತ್ತು ನಾಗಬ್ಬೆಯ ಸಂಭಾಷಣೆಯಿಂದ ತಿಳಿಯುತ್ತದೆ. ಮತ್ತು ಜಯಾವತಿ ಮಗನು ಪ್ರಾಯಕ್ಕೆ ಬಂದಾಗ ಮೂವತ್ತೆರಡು ರಾಜಕುಮಾರಿಯರನ್ನು ಏಕಕಾಲದಲ್ಲಿ ಮದುವೆ ಮಾಡಿಸುತ್ತಾಳೆ. ಸ್ವಸ್ತಿಕ, ನಂದ್ಯಾವರ್ತ ಮುಂತಾಗಿರುವ ಮನೆಗಳನ್ನು ಮೂವತ್ತೆರಡು ಬಗೆಯ ಸಾಲು ಕಟ್ಟಡಗಳನ್ನು ಮಾಡಿಸಿದಳು. ಮನೆಯ ಅಂಗಳದಲ್ಲಿ ಚೆಂಡಾಡುವುದಕ್ಕೆ ತಕ್ಕುದಾದ ಜಗಲಿಗಳನ್ನೂ ಆನೆಯ ಮೇಲೇರಿ ಸವಾರಿ ಮಾಡುವ ವಿನೋದ ಮುಂತಾಗಿರುವ ವಿನೋದಸ್ಥಾನಗಳನ್ನು ಮಾಡಿಸುವಳು. ಆತನ ಸುತ್ತ ಸುಖದ ಕೋಟೆಯನ್ನೇ ನಿರ್ಮಿಸುವಳು.

ಸನತ್ಕುಮಾರ ಚಕ್ರವರ್ತಿಯ ಕಥೆಯು ದೀರ್ಘವಾದ ಕಥೆಗಳಲ್ಲಿ ಒಂದು. ಕಥೆಯು ವಿದ್ಯಾಧರ ಅರಸುಕುಮಾರರ ಭೋಗ ಜೀವನ, ಸಾಹಸ, ಯುದ್ಧಗಳ ವರ್ಣನೆಯನ್ನು ಒಳಗೊಂಡಿದೆ. ಕೆಲವು ದೃಶ್ಯಗಳಲ್ಲಿ ಯಕ್ಷ, ಕಿನ್ನರಾದಿಗಳ ಚಿತ್ರಣವಿದೆ. ಆದರೆ ಧಾರ್ಮಿಕ ಸಂಗತಿಗಳೇ ಮೇಲುಗೈ ಸಾಧಿಸಿವೆ. ಕಥೆಯಲ್ಲಿ ನಾಗಚಂದ್ರನೆಂಬ ವರ್ತಕನು ವಿಷ್ಣುಶ್ರೀಯೆಂಬ ತನ್ನ ಹೆಂಡತಿಯ ಅಗಲಿಕೆಯ ಕಾರಣದಿಂದ ಸತ್ತು ಭಾರದ್ವಾಜ ಎಂಬ ಬ್ರಾಹ್ಮಣನಾಗಿ ಹುಟ್ಟಿ, ದೊಡ್ಡ ತಪಸ್ವಿಯಾಗುತ್ತಾನೆ. ಕಳೆದ ಜನ್ಮದಲ್ಲಿ ವಿಷ್ಣುಶ್ರೀಯನ್ನು ಮಂತ್ರಶಕ್ತಿಯಿಂದ ವಶಪಡಿಸಿಕೊಂಡು, ತನ್ನ ಹೆಂಡತಿಯ ಅಗಲಿಕೆಗೆ ಕಾರಣನಾದ ಜಿನವರ್ಮನು ಹರಿವಾಹನನೆಂಬ ರಾಜನ ಜೊತೆ ಬರಲು ಪೂರ್ವಜನ್ಮದ ವೈರದಿಂದ ಅವನ ಬೆನ್ನಿನ ಮೇಲೆ ಅಡಿಯಿಲ್ಲದ ತಟ್ಟೆಯನ್ನಿಟ್ಟು ಬಿಸಿ ಪಾಯಸವನ್ನು ಊಟಮಾಡುತ್ತಾನೆ. ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಧರ್ಮ ಸಂಘರ್ಷವನ್ನು ಗುರುತಿಸಬಹುದಾಗಿದೆ.

ಕಥೆಯಲ್ಲಿ ಪ್ರತಿಮುಖನೆಂಬ ರಾಜ ಎಂಟು ನೂರು ಅಂತಃಪುರ ಸ್ತ್ರೀಯರಿದ್ದರೂ, ಪಟ್ಟಣದ ನಾಗಚಂದ್ರನ ಹೆಂಡತಿ ವಿಷ್ಣುಶ್ರೀಯ ರೂಪಕ್ಕೆ ಮನಸೋತು,

ಆಕೆಯನ್ನು ವಶಪಡಿಸಿಕೊಂಡು ಇತರರಿಗಿಂತ ಮೇಲಿನ ಹೆಂಡತಿಯಾಗಿ ನಡೆಸಿಕೊಳ್ಳುತ್ತಿದ್ದನು. ಇದರಿಂದ ರಾಜನ ಅಂತಃಪುರದವರೆಲ್ಲ ಸಿಟ್ಟುಗೊಂಡರು. ಒಮ್ಮೆ ರಾಜನು ಅರಮನೆಯಿಂದ ಹೊರಹೋದಾಗ ಅಂತಃಪುರದ ಅರಸಿಯರು ಒಟ್ಟುಗೂಡಿ ವಿಷ್ಣುಶ್ರೀಗೆ ವಿಷ ಪ್ರಯೋಗದಿಂದ ಕೊಂದು ಯಾರೊಬ್ಬರೂ ತಿಳಿಯದ ಹಾಗೆ ಸ್ಮಶಾನದಲ್ಲಿ ಬೀಸಾಡುತ್ತಾರೆ. ಇಂತಹ ಕ್ರೌರ್ಯ ಚಿತ್ರಣದ ಜೊತೆಗೆ ಮಾನವತಾವಾದಿಯಾಗಿ ಗೋಚರಿಸುವ ಓರ್ವ ಬಡ ಮುದುಕಿ ಹಸಿದು ಬಂದ ಯತಿಗೆ ಹಾರಕದಕ್ಕಿಯ ಅನ್ನವನ್ನೂ, ಅವರೆಕಾಯಿಯ ತಿನಿಸನ್ನೂ, ಎಣ್ಣೆಯನ್ನೂ, ಆಡಿನ ಮಜ್ಜಿಗೆಯನ್ನೂ ಬಡಿಸುವ ಚಿತ್ರಣವೂ ದೊರೆಯುತ್ತದೆ.

ಅಣ್ಣಿಕಾಪುತ್ರನ ಕಥೆಯು ಚಿಕ್ಕ ಕಥೆಗಳಲ್ಲಿ ಒಂದು. ವ್ಯಾಪಾರಸ್ಥನ ಮಗನಾದ ಅಣ್ಣಿಕಾಪುತ್ರ ಅವಧಿ ಜ್ಞಾನವನ್ನು ಹೊಂದಿದ ದಮಸೂರಿ ಮುನಿಗಳಿಂದ ಶ್ರಾವಕವ್ರತ ಸ್ವೀಕರಿಸಿದನು. ತನ್ನ ಆಯುಷ್ಯ ಸ್ವಲ್ಪ ಇರುವುದನ್ನು ತಿಳಿದು ದೀಕ್ಷೆ ಪಡೆದು ಗಂಗಾನದಿಯನ್ನು ದಾಟುವಾಗ ಬಿರುಗಾಳಿಯಿಂದ ಉದ್ಭವಿಸಿದ ಉಪಸರ್ಗವನ್ನು ಸಹಿಸಿ ಶಾಶ್ವತ ಶಾಂತಿಯನ್ನು ಪಡೆದನು. ವಡ್ಡಾರಾಧನೆಯಲ್ಲಿ ವರ್ಣ ವ್ಯವಸ್ಥೆಯು ಸ್ಪಷ್ಟವಾದ ಪರಿಕಲ್ಪನೆಯು ಸಿಗದಿದ್ದರೂ, ಪ್ರಾಚೀನ ಭಾರತ ಸಾಮಾಜಿಕ ಚೌಕಟ್ಟಿಗಿಂತ ಭಿನ್ನವಾಗಿರದ ಚಾತುವರ್ಣಾಶ್ರಮದಲ್ಲಿ ಒಂದಾಗ ವೈಶ್ಯರ ಚಿತ್ರಣ ಈ ಕಥೆಯಲ್ಲಿ ದೊರೆಯುತ್ತದೆ. ವೈಶ್ಯ ಕುಲದವರು ಜೈನಧರ್ಮವನ್ನು ಆಚರಿಸಬಹುದು ಎಂಬುದನ್ನು ಕಥೆ ತಿಳಿಸುತ್ತದೆ. ಜೈನಧರ್ಮ ಎಲ್ಲ ವರ್ಗದವರಿಗೂ ಸಲ್ಲುವಂತದ್ದು. ಎಲ್ಲರೂ ಆಚರಿಸಬಹುದು ಎಂಬ ಒಳದನಿ ಇಲ್ಲಿದೆ. ಅನೇಕ ಕಥೆಗಳಲ್ಲಿ ರಾಜಶ್ರೇಷ್ಠಿಯ ಉಲ್ಲೇಖ ಬರುತ್ತದೆ. ಈ ಕಥೆಯಲ್ಲಿ ರಾಜಶ್ರೇಷ್ಠಿಯಲ್ಲದೆ ಸರಕಿನ ಬಂಡಿಗಳ ಶ್ರೇಣಿಗೆ ಒಡೆಯನಾದ ಸಾರ್ಥಾಧಿಪತಿಯ ಉಲ್ಲೇಖವಿದೆ. ಧನದೇವನು ಒಮ್ಮೆ ವ್ಯಾಪಾರಕ್ಕೆಂದು ಸರಕುಗಳನ್ನು ತೆಗೆದುಕೊಂಡು ವ್ಯಾಪಾರಕ್ಕೆ ಹೋಗುತ್ತಾನೆ. ಅಲ್ಲಿ ಇವನ ರೂಪ, ಗುಣಗಳಿಗೆ ಮಾರುಹೋಗಿ ತಿಳಕಶ್ರೇಷ್ಠಿಯು ತನ್ನ ಕೊನೆಯ ಮಗಳಾದ ಅಣ್ಣಿಕೆಯನ್ನು ಕೊಟ್ಟು ಮದುವೆ ಮಾಡಿದನು. ಈ ರೀತಿಯಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿದ್ದವು. ವ್ಯಾಪಾರಕ್ಕೆಂದು ತೆರಳಿದಾಗ ಕೆಲವು ದಿನಗಳು ಅಲ್ಲೇ ಉಳಿಯುತ್ತಿದ್ದರು. ಹೋಗುವಾಗ ತಮ್ಮ ಸರಕುಗಳನ್ನು ಒಯ್ದು ಮಾರಿ ಬರುವಾಗ ಅಲ್ಲಿನ ವಸ್ತುಗಳನ್ನು ತಮ್ಮ ಸ್ಥಳಗಳಿಗೆ ತಂದು ಮಾರುತ್ತಿದ್ದರು. ಇದರಿಂದ ಒಂದು ಭಾಗದ ವಸ್ತುಗಳು ಮತ್ತೊಂದು ಕಡೆ ಬಳಸಲ್ಪಡುತ್ತಿದ್ದವು. ವ್ಯಾಪಾರಕ್ಕೆ ಹೋಗುವಾಗ

ಅನೇಕ ಬಂಡಿಗಳು ಹೋಗುತ್ತಿದ್ದವು. ಅವುಗಳಿಗೆಲ್ಲ ಒಬ್ಬ ಒಡೆಯ ಅವನೇ ಸಾರ್ಥಾಧಿಪತಿ. "ಇಂಥ ಸಾರ್ಥಾಧಿಪತಿ ಬಿಲ್ಲು ವಿದ್ಯೆಯಲ್ಲಿಯೂ ಆಡಳಿತದಲ್ಲಿಯೂ ನಿಪುಣನಾಗಿರುತ್ತಿದ್ದ. ಅವರಿಗೆ ಅರಣ್ಯಗಳಲ್ಲೇ ಅಲ್ಲದೆ ಉಳಿದೆಡೆಗಳಲ್ಲೂ ದರೋಡೆಕಾರರ ಅನಿರೀಕ್ಷಿತ ಧಾಳಿಯ ಅಪಾಯವಿದ್ದೇ ಇರುತ್ತಿತ್ತು."೪೨ (ಭದ್ರಬಾಹುಭಟ್ಟಾರರ ಕಥೆಯಲ್ಲಿ ವ್ಯಾಪಾರಕ್ಕೆ ಹೋಗುತ್ತಿದ್ದ ವ್ಯಾಪಾರಸ್ಥರನ್ನು ದಾರಿಗಳ್ಳರು ದಾರಿಯನ್ನು ಕಟ್ಟಿ ದರೋಡೆ ಮಾಡುತ್ತಾರೆ. ಅದರಲ್ಲಿ ಅನೇಕ ವರ್ತಕರು ಕಳ್ಳರ ದಾಳಿಗೆ ಜೀವ ಕಳೆದುಕೊಳ್ಳುವ ಚಿತ್ರಣ ಸಿಗುತ್ತದೆ) ವ್ಯಾಪಾರಸ್ಥರು ರಕ್ಷಣೆಗೋಸ್ಕರ ಬಿಲ್ಲುವಿದ್ಯೆಯನ್ನು ಕಲಿತಿದ್ದರು. ಮತ್ತು "ಸಾರ್ಥಾಧಿಪತಿ ತನ್ನೊಡನೆ ಸಹ ಪ್ರಯಾಣಕ್ಕೆ ಒಪ್ಪಿದ ವರ್ತಕ ತಂಡವನ್ನು ಕರೆದುಕೊಂಡು ಪ್ರಯಾಣ ಹೊರಡುವ ಮೊದಲು ರಾಜನ ಪರವಾನಗಿ – ರಹದಾರಿ ಪಡೆಯಬೇಕಾಗುತ್ತಿತ್ತು."೪೩

ಭದ್ರಬಾಹುಭಟ್ಟಾರರ ಕಥೆಯಲ್ಲಿ ಸಂಪ್ರತಿ ಚಂದ್ರಗುಪ್ತನ ಪೂರ್ವಜನ್ಮದ ಸಂದರ್ಭ ಬಂದಾಗ ನಂದಿಮಿತ್ರನೆಂಬ ಸೌದೆ ಹೊರುವವನ ಕಥೆಯು ಬರುತ್ತದೆ. ಈ ಉಪಕಥೆಯಲ್ಲೂ ವ್ಯಾಪಾರಿಗಳ ಚಿತ್ರ ದೊರೆಯುತ್ತದೆ. ಹತ್ತಿಯನ್ನು, ಧಾನ್ಯವನ್ನು ಗಾಡಿಗಳಲ್ಲಿ ತುಂಬಿಕೊಂಡು ವ್ಯಾಪಾರಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಕಳ್ಳರು ದಾರಿಯನ್ನು ಕಟ್ಟಿ ದರೋಡೆ ಮಾಡುತ್ತಿದ್ದರು. ಅದರಲ್ಲಿ ಅನೇಕ ವರ್ತಕರು ಕಳ್ಳರ ದಾಳಿಗೆ ಜೀವ ಕಳೆದುಕೊಳ್ಳುತ್ತಿದ್ದರು. ಕೆಲವರು ಜೀವ ರಕ್ಷಣೆಗಾಗಿ ಓಡಿ ಹೋಗುತ್ತಿದ್ದರು. ಈ ರೀತಿ ವೈಶ್ಯರ ಚಿತ್ರಣ ದೊರೆಯುತ್ತದೆ. ನಂದಿಮಿತ್ರನ ತಂದೆ ವ್ಯಾಪಾರಕ್ಕೆ ಹೋಗಿದ್ದಾಗ ದಾರಿಗಳ್ಳರಿಂದ ಸಾಯುತ್ತಾನೆ. ತಾಯಿಯು ಈತನನ್ನು ಹೆತ್ತ ಎರಡು ಮೂರು ತಿಂಗಳಲ್ಲಿ ಸಾಯುತ್ತಾಳೆ. ನಂಟರು ನಂದಿಮಿತ್ರನನ್ನು ಸಾಕಿದರು. ಅವರೂ ಕೆಲವು ವರ್ಷಗಳ ನಂತರ ಸತ್ತರು. ಅವರ ಕುಲವೇ ನಾಶವಾಯಿತು. ಇದು ಆಕಸ್ಮಿಕವೋ ಅಥವಾ ಕಾಕತಾಳೀಯವೋ ಎಂಬಂತೆ ಕಂಡರೂ ಜನರು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. "ಈ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮಮೋಘಮಕ್ಕುಂ"೪೪

ಎಂದು ಪಟ್ಟಣದಿಂದ ನಂದಿಮಿತ್ರನನ್ನು ಹೊರಗಟ್ಟುತ್ತಾರೆ. ಇಲ್ಲಿ ಸಾವಿನ ಹಿನ್ನಲೆಯಲ್ಲಿ ವ್ಯಕ್ತಿಯನ್ನು ವ್ಯಾಖ್ಯಾನಿಸುವ ರೀತಿ ಗೋಚರಿಸುತ್ತದೆ. ಕಾಷ್ಠಕೂಟ ಎನ್ನುವವನು ಅಲೆಯುತ್ತಿದ್ದ ನಂದಿಮಿತ್ರನ ಶಕ್ತಿಯನ್ನು ನೋಡಿ ಆಶ್ರಯವನ್ನು ನೀಡುವನು. ನಂದಿಮಿತ್ರನ ಶ್ರಮದಿಂದ ಕಾಷ್ಠಕೂಟ ಶ್ರೀಮಂತನಾಗುತ್ತಾನೆ. ಆದರೆ

ನಂದಿಮಿತ್ರ ಹೊಟ್ಟೆತುಂಬ ಊಟ ಹಾಕುತ್ತಿರಲಿಲ್ಲ. ತನ್ನ ಹೆಂಡತಿಗೆ ನೀನು ಇವನಿಗೆ ಹೊಟ್ಟೆತುಂಬ ಉಣಲಿಕ್ಕೆ ಇಡಬೇಡ, ತಲೆಗೆ ಎಣ್ಣೆ ಕೊಡಬೇಡ, ಸ್ನಾನಕ್ಕೆ ಕೇಳಿದರೆ ಎರೆಯಬೇಡ ಎಂದು ಸೂಚನೆ ಕೊಟ್ಟಿದ್ದ. ಹಾಗೆ ಅವಳೂ ನಡೆಯುತ್ತಿದ್ದಳು. ಒಂದು ದಿನ ಕರುಣೆಯಿಂದ ತೃಪ್ತಿಯಾಗುವಷ್ಟು ಬಡಿಸಿದಳು. ಮಾರನೆಯ ದಿನ ಸೌದೆ ತರಲು ಹೋದಾಗ ನಂದಿಮಿತ್ರ "ಅಯ್ಯ ಎನಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ ಸೀರೆಯಂ ಕೊಂಡೀಯಿಂ"[೪೫] ಎನ್ನುತ್ತಾನೆ. ಮನೆಗೆ ಬಂದ ಕಾಷ್ಠಕೂಟ ಹೆಂಡತಿಯನ್ನು ವಿಚಾರಿಸಿ ತೃಪ್ತಿಯಾಗುವಷ್ಟು ಊಟ ಬಡಿಸಿದ್ದಾಳೆ ಮನೆಯಿಂದ ಹೆಂಡತಿಯನ್ನು ಓಡಿಸುತ್ತಾನೆ. ಮನುಷ್ಯನ ಪ್ರಾಥಮಿಕ ಅವಶ್ಯಕತೆ ಊಟ ನಂತರ ಬಟ್ಟೆ. ಮನುಷ್ಯನಿಗೆ ಒಂದೊಂದು ಅವಶ್ಯಕತೆಗಳು ಪೂರೈಕೆಯಾದಂತೆ ಮತ್ತೊಂದಕ್ಕೆ ಹಾತೊರೆಯುತ್ತಾನೆ.

ಭದ್ರಬಾಹು ಭಟ್ಟಾರರು ಹನ್ನೆರಡು ವರ್ಷಗಳ ಕಾಲದ ಕ್ಷಾಮದ ವಿಷಯ ತಿಳಿದು, ಸಂಪ್ರತಿ ಚಂದ್ರಗುಪ್ತ ಹಾಗೂ ಬಹುಸಂಖ್ಯೆಯ ಋಷಿಗಳೊಡನೆ ದಕ್ಷಿಣಾಪಥಕ್ಕೆ ಪ್ರಯಾಣ ಹೊರಡುತ್ತಾರೆ. ಬರಗಾಲದ ಸೂಚನೆಯರಿತ ರಾಜ ಮತ್ತು ಮುನಿಗಳು ಅಲ್ಲಿಂದ ಹೊರಡುತ್ತಾರೆ. ಆದರೆ ಸಾಮಾನ್ಯರ ಬದುಕಿನ ಬಗ್ಗೆ ಏನನ್ನು ಕಥೆಗಾರ ತಿಳಿಸುವುದಿಲ್ಲ.

ಧರ್ಮಘೋಷ ಭಟ್ಟಾರರ ಕಥೆಯಲ್ಲಿ ಧರ್ಮಘೋಷ ಮತ್ತು ಧರ್ಮಕೀರ್ತಿ ಎಂಬ ರಾಜಕುಮಾರರು ಗುಣೋತ್ತಮರೆಂಬ ಋಷಿಗಳ ಹಲವು ಉದ್ಧರಣೆಗಳನ್ನೊಳಗೊಂಡ ಸಂಕ್ಷಿಪ್ತ ಧರ್ಮೋಪದೇಶವನ್ನು ಕೇಳಿ ದೀಕ್ಷೆ ಪಡೆಯುತ್ತಾರೆ. ಜೈನಮುನಿಗಳು ದೇವ-ದೇವತೆಗಳಿಂದ ಅನ್ನ ಅಥವಾ ನೀರನ್ನು ಸ್ವೀಕರಿಸಬಾರದು ಎಂಬ ಜೈನಧರ್ಮದ ನಿಯಮವು ಕಥೆಯಲ್ಲಿದೆ ಮತ್ತು ಗಂಗಾದೇವತೆ ಪೂರ್ವಾರ್ಧಿ ದೇಹಕ್ಕೆ ಹೋಗಿ ಸೀಮಂಧರ ತೀರ್ಥಂಕರರ ಬಳಿ ಸಲಹೆ ಕೇಳುವುದು ಜೈನವಿಶ್ವದ ವಾತಾವರಣವನ್ನು ತೋರಿಸುತ್ತದೆ.[೪೬]

ಈ ಕಥೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರಗಳೆಂದರೆ, ಮುನಿಗಳು ಪ್ರಭುತ್ವವನ್ನು ಆಶ್ರಯಿಸದೆ ಸಾಮಾನ್ಯರ ನೆಲೆಯಲ್ಲೇ ಜೀವಿಸುತ್ತಿದ್ದರು. ಗುಣೋತ್ತಮ ಋಷಿಗಳನ್ನು ಕೇಳಿಕೊಂಡು ಅವರ ಅನುಮತಿಯನ್ನು ಪಡೆದು ಧರ್ಮಘೋಷ ಮತ್ತು ಧರ್ಮಕೀರ್ತಿ ಭಟ್ಟಾರರು ಚಂಪಾನಗರದ ತಾವರೆಕೊಳ ತೀರದಲ್ಲಿ ಮರೆಯಾಗಿ ಒಂದು ತಿಂಗಳ ಉಪವಾಸವನ್ನು ಮಾಡಿದ ನಂತರ ಭಿಕ್ಷೆಗಾಗಿ ಮನೆಗಳನ್ನು ಪ್ರವೇಶಿಸದೆ

ಗಂಗಾತೀರದ ಹಸುಗಳ ಹಟ್ಟಿಗೆ ಹೋದಾಗ ಅವರು ಆ ಸ್ಥಳದಿಂದ ಬಹಳ ದೂರದ ಬೇರೊಂದು ಎಡೆಗೆ ಹೋಗಿದ್ದರು. ಮತ್ತು ಧರ್ಮಘೋಷ ಭಟ್ಟಾರರು ಮೋಕ್ಷಪಡೆದ ನಂತರ ಧರ್ಮಕೀರ್ತಿ ಭಟ್ಟಾರರು ಭಿಕ್ಷೆಗಾಗಿ ಬೇರೊಂದು ತರು (ಹಸು) ಹಟ್ಟಿಗೆ ಹೋದಾಗ, ಆ ತರುಹಟ್ಟಿ ಅಲ್ಲಿಂದ ಬೇರೊಂದು ಕಡೆಗೆ ಹೋಗಿದ್ದರು. ಇವರಿಗೆ ಹಸಿವು ಬಾಯಾರಿಕೆಗಳು ಬಾಧಿಸಿದವು. ಗೊಲ್ಲರು ಕಾಲದಿಂದ ಕಾಲಕ್ಕೆ ವಲಸೆ ಹೋಗುತ್ತಿದ್ದರು. ಈ ಗೊಲ್ಲರು ಗುಂಪಾದ ಒಂದು ಸಮುದಾಯ. ಒಂದು ಪ್ರದೇಶದಲ್ಲಿ ಸಿಗುವ ಹುಲ್ಲು ಇತರೆ ತಮಗೆ ಅವಶ್ಯಕವಾದ ಎಲ್ಲವನ್ನೂ ಬಳಸಿಕೊಂಡು ಬಹುಶಃ ಬೇರೊಂದು ಪ್ರದೇಶಕ್ಕೆ ಹೋಗುತ್ತಿದ್ದರು. ಕಥೆಯಲ್ಲಿ ಆಧಾರಗಳಿಲ್ಲದಿದ್ದರು ಊಹಿಸಲು ಅವಕಾಶವಿದೆ.

ವಿದ್ಯುಚ್ಚೋರನೆಂಬ ರಿಸಿಯ ಕಥೆಯು ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಇಣುಕು ಕಂಡಿಯಾಗಿದೆ. ಇದೊಂದು ಕಳ್ಳನಿಗೆ ಸಂಬಂಧಿಸಿದ ಕಥೆ. ಕಥೆಯಲ್ಲಿ ವಿದ್ಯುಚ್ಚೋರನ ವೇಶ್ಯರೊಂದಿಗಿನ ಒಡನಾಟ ಅಂದಿನ ಭೋಗಜೀವನವನ್ನು ಚಿತ್ರಿಸುತ್ತದೆ. ವಿದ್ಯುಚ್ಚೋರ ರಾತ್ರಿಯಾಗುತ್ತಿದ್ದಂತೆ ತನ್ನ ಸ್ವಾಭಾವಿಕ ರೂಪವನ್ನು ಪಡೆದು ಮನಸ್ಸಿಗೆ ಹಿಡಿಸಿದ ಉತ್ತಮ ಹೆಣ್ಣಿಗೆ ದ್ರವ್ಯವನ್ನು ಕೊಟ್ಟು ಸುಖವನ್ನು ಅನುಭವಿಸುತ್ತಿದ್ದನು. ಒಂದು ಸಮಾಜದ ಆರೋಗ್ಯಕರವಾದ ವಾತಾವರಣವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಪಟ್ಟಣದಲ್ಲಿ ಸೂಳೆಗೇರಿಗಳಿದ್ದವು ಎನಿಸುತ್ತದೆ. ವಿದ್ಯುಚ್ಚೋರ ಸೂಳೆಯ ಬೀದಿಗಳಿಗೆ ಹೋಗುವಾಗ ಒಳ್ಳೆಯ ವಸ್ತ್ರವನ್ನುಟ್ಟು, ಮೈಗೆ ಸುಗಂಧವನ್ನು ಹಾಕಿಕೊಂಡು, ಹೂ ಮುಡಿದು, ಕರ್ಪೂರದಿಂದ ಬೆರಕೆಯಾದ ತಾಂಬೂಲವನ್ನು ತಿನ್ನುತ್ತ ಹೋಗುತ್ತಾನೆ. ಇದರಿಂದ ಪುರುಷರು ಹೂ ಮುಡಿಯುತ್ತಿದ್ದರು ಎಂಬುದು ತಿಳಿದು ಬರುತ್ತದೆ. ಇದಲ್ಲದೆ ಕಥೆಯು ಉಳಿಸೆಂಡು ಎಂಬ ಆಟ ಮತ್ತು ಗ್ರಾಮ ದೇವತೆಯ ಜಾತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. ವಿದ್ಯುಚ್ಚೋರ ಮತ್ತು ಯಮದಂಡರಿಬ್ಬರೂ ನಂದನದ ಉದ್ಯಾನದಲ್ಲಿ ಉಳಿಸೆಂಡಿನ ಆಟವನ್ನು ಆಡುತ್ತಿದ್ದರು. ಅದೊಂದು ಚೆಂಡನ್ನು ಬಚ್ಚಿಟ್ಟು ಆಡುವ ಆಟ. ಉಳಿಸೆಂಡಿನಂತೆ ಪೊಡೆಸೆಂಡು ಎಂಬ ಚಂಡಾಟವಿತ್ತು.[೪೭]

ಕಥೆಯ ಕೊನೆಯಲ್ಲಿ ವರಾಂಗಾಯಿ ಎಂಬ ಉಗ್ರದೇವತೆಯ ಪ್ರಸ್ತಾಪವಿದೆ. ಆಕೆಗೆ ಆರು ತಿಂಗಳಿಗೊಮ್ಮೆ ಪ್ರತಿವರ್ಷವೂ ಬಿಡದೆ ಜಾತ್ರೆಯಾಗುತ್ತಿತ್ತು. ವಿಶೇಷವಾಗಿ ದುರ್ಗಾಷ್ಟಮಿಯಂದು ಜನರೆಲ್ಲ ಬಂದು ಸೇರಿ ಜಾತ್ರೆಯನ್ನು ಮಾಡುತ್ತಿದ್ದರು.

ಸಾಮಾನ್ಯವಾಗಿ ಗ್ರಾಮದೇವತೆ ಹಬ್ಬ ವರ್ಷಕ್ಕೊಮ್ಮೆ ಆದರೆ ಉಗ್ರದೇವತೆಯ ಜಾತ್ರೆ ವರ್ಷಕ್ಕೆ ಎರಡು ಬಾರಿಯೆಂದು ಉಲ್ಲೇಖವಾಗಿದೆ.

ದಂಡಕನೆಂಬ ಋಷಿಯ ಕಥೆಯಲ್ಲಿ ಅಶೋಕನೆಂಬ ರಾಜನ ಮಹಾಸಾಂತನಾದ ಸುಧಾಮಕನ ಕ್ರೌರ್ಯ ಚಿತ್ರಣಗೊಂಡಿದೆ. ಸುಧಾಮಕ "ತೀವ್ರಲೋಭದೊನತಿ ರೌದ್ರಮಪ್ಪಾರಂಭ ಕರ್ಮದೊಳ್ ಕೂಡಿದೊಂ ತನ್ನಾರಂಭದ ಕೆಯ್ಗಳನೊಕ್ಕು ವೆಟ್ಟುಗಳ ಬಾಯಂ ಕಟ್ಟಿಯೊಕ್ಕಿಸುಗುಂ ಮತ್ತಡುವ ಬಡ್ಡಿಸುವ ಬೆಸಕೆಯ್ವ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ಯುಗುಂ"[೪೮] ಎಂಬುದು ಮನುಷ್ಯತ್ವವನ್ನೇ ಪ್ರಶ್ನಿಸುತ್ತದೆ. ಪ್ರಭುತ್ವದಡಿಯಲ್ಲಿ ಮನುಷ್ಯರಲ್ಲದೆ ಪ್ರಾಣಿಗಳು ಕೂಡ ಹಿಂಸೆಗೆ ಒಳಪಟ್ಟಿದ್ದವು. ಈ ಹಿಂಸೆ ನೈತಿಕವಾಗಿಯೆ ನಿರ್ಮಾಣಗೊಂಡಿರುವುದು ದುರಂತ. ಪೆಂಡಿರ ಮೊಲೆಗಳನ್ನು ವಸ್ತ್ರದಿಂದ ಕಟ್ಟಿಸಿ ಶಿಶುಗಳನ್ನು ಮೊಲೆಯುಣ್ಣಲು ಬಿಡದೆ ಸೇವೆ ಮಾಡಿಸಿಕೊಳ್ಳುವುದು ಪ್ರಭುತ್ವ ಕ್ರೂರತನದ ಪರಾಕಾಷ್ಟೆ. ಕೇಂದ್ರ ಪ್ರಭುತ್ವವಲ್ಲದೆ ಅದರ ಅಧೀನ ಪ್ರಭುತ್ವವೂ ನಿರ್ದಯತೆಯ ಪ್ರತಿನಿಧಿಗಳು. "ತಾಯ್ತನದ ಮೌಲ್ಯವು ಸಾಮಾಜಿಕ ವಾಸ್ತವದಲ್ಲಿ ತಿರಸ್ಕೃತವಾಗುವುದನ್ನು ಕೆಳಜಾತಿ ವರ್ಗಗಳ ಸಂದರ್ಭದಲ್ಲಿ ನೋಡಬಹುದು."[೪೯]

ಚಾಣಾಕ್ಯರಿಸಿಯ ಕಥೆಯಲ್ಲಿ ವಡ್ಡಾರಾಧನಕಾರ ಚಾಣಾಕ್ಯನಿಂದ ಬಡತನದ ಸ್ವರೂಪವನ್ನು ವಿಶ್ಲೇಷಿಸುತ್ತಾನೆ. ನಿಮಗಿಬ್ಬರಿಗೂ ಗಂಜಿಯ ಕೆನೆಯಿದೆಯೆಂದು ಸುಬಂಧುವಿನ ಹೆಂಡತಿ ನಂದವತಿಯು ಯಶೋಮತಿಗೆ ಕೊಟ್ಟು ಹೋದಾಗ ಚಾಣಾಕ್ಯ ತನ್ನ ಮನಸ್ಸಿನಲ್ಲಿ ಹೀಗೆ ಭಾವಿಸಿದನು, ಲೋಕದಲ್ಲಿ ಬಡತನ ಹೊರತಾಗಿ ದುಃಖಕರವಾದುದು ಯಾವುದೊಂದು ಇಲ್ಲ ಬಡತನವೇ ಲೋಕದಲ್ಲಿ ಮಹಾಪಾಪವು.

ಸಂಗಂ ನೈವ ಹಿ ಕಶ್ಚಿದೇವ ಕುರುತೇ ನಾಭಾಷತೇ ಬಾಂಧವಾತ್
ಸಂಪ್ರಾಪ್ತೇ ಗೃಹಮುತ್ತವೇಪಿ ಗೃಹಿಭಿಃ ಸಾಮಾನ್ಯಮಾಲೋಕ್ಯತೇ।
ದೂರಾದೇವ ಮಹಾಜನಃ ಪರಿಹರತ್ಯಲ್ಪಚ್ಛದಂ ಲಜ್ಜಯಾ
ಮನ್ಯೇ ನಿರ್ಧನತಾ ಪ್ರಕಾರಮಪರಂ ಕಷ್ಟಂ ಮಹಾಪಾತಕಂ॥[೫೦]

ಎಂದು ಭಾವಿಸುತ್ತಾನೆ. ಈ ಸಾಲುಗಳು ಬಡವನ ಜೊತೆಯಲ್ಲಿ ಪ್ರಭುತ್ವ ಮತ್ತು ಸಮಾಜ ಹೀಗೆ ಸ್ಪಂದಿಸುತ್ತವೆ ಎಂಬುದನ್ನು ಚಿತ್ರಿಸುತ್ತವೆ. ಇದು ಕೇವಲ ವ್ಯಾಖ್ಯಾನವಾಗದೆ ಅಂದಿನ ಬಡವರ ಚಿತ್ರಣವೂ ಆಗಿದೆ.

ಕಥೆಯಲ್ಲಿ ಚಾಣಾಕ್ಯಗಿಂತಲೂ ಬುದ್ಧಿವಂತೆಯಾದ ಮುದುಕಿಯ ಚಿತ್ರಣ ಸಿಗುತ್ತದೆ. "ಸಾಲಿಗರ ಮನೆಯಂಪೊಕ್ಕು ಸಾಲಿಗಾರ ಬಿರ್ದ್ದಿಯನುಣಲ್ವೇಡಿ-ದೊಡಾಕೆಯುಂ ಕುಳ್ಳಿರು ಮಗನೆಯೆಂದೇಱಿಕ್ಕಿ ಕುಳ್ಳಿರಿಸಿ ಕಂಚನಿಟ್ಟು ಬಿಸಿಯಂಬಲಿಯಂ ಬಡ್ಡಿಸಿದೊಡೆ..."[೨೧] ಎಂಬ ಸಾಲುಗಳು ಮುದುಕಿಯ ಉಪಚಾರದ ವೈಖರಿಯು ಹೃದಯ ಶ್ರೀಮಂತಿಕೆಯನ್ನು ಚಿತ್ರಿಸುತ್ತದೆ. ಅಂಬಲಿಯನ್ನು ಬಡಿಸಿದಾಗ ಹಸಿವಿನಿಂದ ಕಂಗಾಲಾಗಿದ್ದ ಚಾಣಾಕ್ಯ ಬಿಸಿ ಅಂಬಲಿಯನ್ನು ಬಾಯಿಗೆ ಸುರಿದುಕೊಂಡಾಗ ಅದನ್ನು ಕಂಡು ಮೂರು ಜನ ಮೂರ್ಖರನ್ನು ನೋಡಿದೆ ಎಂದು ಹೇಳುತ್ತಾಳೆ. ಚಾಣಾಕ್ಯ ಅಮ್ಮ ಆ ಮೂವರು ಯಾರು? ಎಂದಾಗ ಮುದುಕಿಯು ಆ ಮೂವರು ನೀನು, ನಂದ, ಚಾಣಾಕ್ಯ ಎನ್ನುತ್ತಾಳೆ. ನಂತರ ಚಾಣಾಕ್ಯನ ಮೂರ್ಖತನವನ್ನು ಹೇಳುತ್ತ ಯುದ್ಧ ತಂತ್ರವನ್ನು ಹೇಳಿಕೊಡುತ್ತಾಳೆ.

ಕಥೆಯಲ್ಲಿ ಸಿದ್ದರಸದ (ರಸದಿಂದ ಚಿನ್ನ ಮಾಡುವುದು) ಪ್ರಸ್ತಾಪವಿದೆ, ಚಿನ್ನದ ದುರಾಶೆಯಿಂದ ಬಾವಿಗಿಳಿದು ವಂಚನೆಗೊಂಡು ಸಾಮಾನ್ಯ ಮನುಷ್ಯ ಚಿತ್ರಣ ಅಲ್ಲಿ ದೊರೆಯುತ್ತದೆ. ಅದೇ ರೀತಿಯಲ್ಲಿ ಚಾಣಾಕ್ಯ ಒಬ್ಬ ಒಕ್ಕಲಿಗನಿಗೆ ಒಂದು ಹೇರು ಮಣ್ಣಿಗೆ ಒಂದು ಹೇರು ಚಿನ್ನದ ಪಡೆದ ವಿಷಯ ಕೇಳಿ ನಾಡಿನ ಒಕ್ಕಲಿಗರೆಲ್ಲರೂ ಮಣ್ಣಿನ ಹೇರೆಗಳನ್ನು ತಂದು ಶ್ರೀಪರ್ವತದ ಮೇಲೆ ಹಾಕಿ ಮೋಸಗೊಂಡವರ ಚಿತ್ರಣ ದೊರೆಯುತ್ತದೆ.

ಇದುವರೆಗೂ ಕಥೆಗಳಲ್ಲಿ ಸಿಕ್ಕ ಸಾಮಾನ್ಯರ ಬದುಕು ಅಂದಿನ ಸಾಮಾಜಿಕ ಅಂಶಗಳಾಗಿವೆ. ಇವು ಅವತ್ತಿನ ಸಾಮಾನ್ಯರ ಬದುಕನ್ನು ಪೂರ್ತಿಯಾಗಲ್ಲದಿದ್ದರೂ ಭಾಗಶಃವಾಗಿಯಾದರೂ ಚಿತ್ರಿಸುತ್ತವೆ ಎಂಬುದರಲ್ಲಿ ಅನುಮಾನವಿಲ್ಲ.

ಕೊನೆಟಿಪ್ಪಣಿಗಳು

೧. ಡಾ.ಎಂ.ಚಿದಾನಂದಮೂರ್ತಿ, ಹೊಸತು ಹೊಸತು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮, ಪು. ೩೦

೨. ವೀರಣ್ಣ ದಂಡೆ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೧. ಪು. ೧೦೫

೩. ವಡ್ಡಾರಾಧನೆ, ಸಂ: ಡಾ.ಡಿ.ಎಲ್.ನರಸಿಂಹಾಚಾರ್, ಪು. ೧೫೬, ಪಂಕ್ತಿ ೧೬-೧೭

೪. ಹಂಪನಾಗರಾಜಯ್ಯ, ಮೂಲಚೂಲ (ಆಯ್ದಲೇಖನಗಳು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬, ಪು. ೨೨೪

೫. ವಡ್ಡಾರಾಧನೆ, ಡಾ.ಡಿ.ಎಲ್.ನರಸಿಂಹಾಚಾರ್, ಪು. ೧೫೬, ಪಂಕ್ತಿ ೧-೨

೬. ಅದೇ, ಪು. ೧೫೮, ಪಂಕ್ತಿ ೨೩-೨೪

೭. ಅದೇ, ಪಂಕ್ತಿ ೨೫-೨೬

೮. ರಾಘವೇಂದ್ರ ಪಾಟೀಲ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧೧೦

೯. ಬಿ.ಎಂ.ಪುಟ್ಟಯ್ಯ, ಅದೇ, ಪು. ೧೩೫

೧೦. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೧೬೦, ಪಂಕ್ತಿ ೨-೪

೧೧. ಕೆ.ಕೇಶವಶರ್ಮ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೭೧

೧೨. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೨೧೧, ಪಂಕ್ತಿ ೩-೪

೧೩. ಅದೇ, ಪಂಕ್ತಿ ೬-೯

೧೪. ಅದೇ, ಪು. ೨೦೭, ಪಂಕ್ತಿ ೮

೧೫. ಅದೇ ಪಂಕ್ತಿ ೧೬-೧೭

೧೬. ಅದೇ, ಪು. ೨೦೮, ಪಂಕ್ತಿ ೨೦-೨೧

೧೭. ಡಾ.ಬಿ.ಕೆ.ಖಡಬಡಿ, ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೬, ಪು. ೭೮

೧೮. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೨೨೪, ಪಂಕ್ತಿ ೧೯-೨೧

೧೯. ಅದೇ, ಪು. ೨೨೫, ಪಂಕ್ತಿ ೨೦-೨೧

೨೦. ಅದೇ, ಪಂಕ್ತಿ ೨೪-೨೫

೨೧. ರಹಮತ್ ತರೀಕೆರೆ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೨೨

೨೨. ವಡ್ಡಾರಾಧನೆ, ಸಂ: ಡಾ.ಡಿ.ಎಲ್.ನರಸಿಂಹಾಚಾರ್, ಪು. ೨೨೮, ಪಂಕ್ತಿ ೧೮

೨೩. ಅದೇ, ಪು. ೩೦೧

೨೪. ಅದೇ, ಪು. ೧೫೭, ಪಂಕ್ತಿ ೧೦-೧೩

೨೫. ಅದೇ, ಪು. ೫೭, ಪಂಕ್ತಿ ೧೯-೨೧

೨೬. ಆರ್.ಎಲ್.ಅನಂತರಾಮಯ್ಯ, ಕನ್ನಡ ಸಾಹಿತ್ಯ ಚರಿತ್ರೆ ಸಂ-೩, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬, ಪು. ೩೮೧

೨೭. ಪ್ರೀತಿ ಶುಭಚಂದ್ರ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೫೫-೫೬

೨೮. ರಾಜಾರಾಮ ಹೆಗಡೆ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೨೭

೨೯. ಎಸ್.ಎಸ್.ಹಿರೇಮಠ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೭೯-೮೦

೩೦. ಡಾ.ಬಿ.ಕೆ.ಖಡಬಡಿ, ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ೧೯೯೬, ಪು. ೫೬

೩೧. ಅದೇ, ಪು. ೧೦೨

೩೨. ವೀರಣ್ಣ ದಂಡೆ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧೦೦

೩೩. ಡಾ.ಬಿ.ಕೆ.ಖಡಬಡಿ, ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ೧೯೯೬, ಪು. ೭೩-೭೪

೩೪. ಅದೇ, ಪು. ೭೫

೩೫. ಅದೇ, ಪು. ೭೫

೩೬. ಪ್ರೀತಿ ಶುಭಚಂದ್ರ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೬೩

೩೭. ರಾಘವೇಂದ್ರ ಪಾಟೀಲ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧೦೯

೩೮. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೬೦, ಪಂಕ್ತಿ ೨೪-೨೭

೩೯. ಅದೇ, ಪು. ೬೦ (ಪಂಕ್ತಿ ೨೯) ೬೧ (ಪಂಕ್ತಿ ೦೧)

೪೦. ಅದೇ, ಪು. ೬೧, ಪಂಕ್ತಿ ೦೨-೦೫

೪೧. ಅದೇ, ಪು. ೬೬, ಪಂಕ್ತಿ ೧೩-೧೫

೪೨. ಡಾ.ಹಂಪನಾಗರಾಜಯ್ಯ, ವಡ್ಡಾರಾಧನೆ : ಸಮಗ್ರ ಅಧ್ಯಯನ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯, ಪು. ೨೯೬-೨೯೭

೪೩. ಅದೇ, ಪು. ೨೯೬

೪೪. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೧೨೦, ಪಂಕ್ತಿ ೧೯-೨೦

೪೫. ಅದೇ, ಪು. ೧೨೧, ಪಂಕ್ತಿ ೧೧-೧೨

೪೬. ಡಾ. ಬಿ.ಕೆ.ಖಡಬಡಿ, ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೬, ಪು. ೬೬-೬೭

೪೭. ಪಂಪ ಭಾರತ (೨-೩೦)

೪೮. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೨೧೪, ಪಂಕ್ತಿ ೧೦-೧೩

೪೯. ಪ್ರೀತಿ ಶುಭಚಂದ್ರ, ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೬೦

೫೦. ವಡ್ಡಾರಾಧನೆ, ಸಂ : ಡಾ.ಡಿ.ಎಲ್.ನರಸಿಂಹಾಚಾರ್, ಪು. ೨೨೯, ಪಂಕ್ತಿ ೩-೬

೫೧. ಅದೇ, ಪು. ೨೩೨, ಪಂಕ್ತಿ ೧೬-೧೭

ಅಧ್ಯಾಯ – ೫

ಉಪಸಂಹಾರ

ಶಿವಕೋಟ್ಯಾಚಾರ್ಯ ಬರೆದನೆಂದು ಹೇಳಲಾಗಿರುವ ವಡ್ಡಾರಾಧನೆಯ ೧೯ ಕಥೆಗಳನ್ನು ರಾಜಪ್ರಭುತ್ವ, ಧರ್ಮಪ್ರಭುತ್ವ ಮತ್ತು ಅಧೀನ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತ ಅಂದಿನ ಸಾಮಾಜಿಕತೆಯನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಪ್ರತಿಯೊಬ್ಬ ಕವಿಯು ತನ್ನ ಸಮಕಾಲೀನತೆಗೆ ಸ್ಪಂದಿಸುವಂತೆ ಶಿವಕೋಟ್ಯಾಚಾರ್ಯನೂ ಸ್ಪಂದಿಸಿದ್ದಾನೆ. ತನ್ನ ಮುಖ್ಯ ಉದ್ದೇಶ ಧರ್ಮಬೋಧನೆಯಾದರೂ, ಅಂದಿನ ಸಮಾಜದ ಅನೇಕ ಮುಖಗಳನ್ನು ಸೂಕ್ಷ್ಮವಾಗಿ ಪರಿಚಯಿಸುತ್ತಾನೆ. ವಡ್ಡಾರಾಧನೆಯ ಕಥೆಗಳಲ್ಲಿ ವ್ಯಕ್ತವಾದ ಚಿತ್ರಣವೂ ಇಡಿಯಾಗಿ ಅಂದಿನ ಸಮಾಜದ ಸಂಪೂರ್ಣ ಚಿತ್ರಣವೆಂದು ಹೇಳಲಾಗದಿದ್ದರೂ ಅಂದಿನ ಸಮುದಾಯದ ಹಿತಾಸಕ್ತಿಗಳಿಗೆ ತಕ್ಕಂತೆ ಆಗುವ ಅನುಭವದ ಚಿತ್ರಣಗಳು ಎಂದು ಹೇಳುವ ಸಾಧ್ಯತೆಯನ್ನು ನಿರಾಕರಿಸಲಾಗದು. ಇದುವರೆಗೂ ವ್ಯಕ್ತಿ ಮತ್ತು ಸಾಂಘಿಕ ನೆಲೆಗಳಲ್ಲಿ ಇಂಥ ಚಿತ್ರಣಗಳನ್ನು ಕಟ್ಟಿಕೊಳ್ಳುವ ಪ್ರಯತ್ನಗಳು ಸಾಕಷ್ಟು ನಡೆದಿವೆ. ಅಂತಹ ಪ್ರಯತ್ನಗಳು ಒದಗಿಸುವ ಆತ್ಮವಿಶ್ವಾಸದಿಂದಲೇ ಸಾಗಿದ ಪ್ರಸ್ತುತ ಅಧ್ಯಯನ ರಾಜಪ್ರಭುತ್ವ, ಧರ್ಮಪ್ರಭುತ್ವ ಮತ್ತು ಅಧೀನ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಂದಿನ ಸಾಮಾಜಿಕ ಚಿತ್ರಣವನ್ನಷ್ಟೇ ಕಟ್ಟಿಕೊಳ್ಳುವುದು ಪ್ರಸ್ತುತ ಸಂಶೋಧನ ಬರಹದ ಮಿತಿಯಾಗಿದೆ. ಪ್ರತಿಯೊಬ್ಬ ಕವಿಯು ತನ್ನ ಸಮಕಾಲೀನ ಸಮಾಜವನ್ನು ಕೃತಿಯಲ್ಲಿ ಪ್ರಜ್ಞಾಪೂರಕವಾಗಿ ಅಥವಾ ಅಪ್ರಜ್ಞಾಪೂರಕವಾಗಿ ತರುತ್ತಾನೆಂಬುದನ್ನು ನಿರಾಕರಿಸುವಂತಿಲ್ಲ. ಹಾಗಾಗಿ ಕೃತಿಯ ಸಮಕಾಲೀನ ಸಾಮಾಜಿಕತೆಯನ್ನು ಅಧ್ಯಯನ ಮಾಡುವುದು ಸಂಶೋಧನ ಬರಹದ ವ್ಯಾಪ್ತಿಯಾಗಿದೆ. ಈ ಮಿತಿ ಮತ್ತು ವ್ಯಾಪ್ತಿಯ ಹಿನ್ನೆಲೆಯಲ್ಲಿ ಬಂದ ಫಲಿತ ಸ್ವಲ್ಪಮಟ್ಟಿಗಾದರೂ ಈಡೇರಿದೆ ಎಂಬ ಆಶಯ ನನ್ನದಾಗಿದೆ.

ವಡ್ಡಾರಾಧನೆ ಧರ್ಮ ಪ್ರಚಾರಕ್ಕಾಗಿಯೇ ರೂಪುಗೊಂಡಿರುವ ಕೃತಿ. ಇಲ್ಲಿ ಧರ್ಮಕ್ಕೆ ಪ್ರಧಾನಪಟ್ಟ. ಪ್ರತಿಯೊಂದು ಕಥೆಯಲ್ಲೂ ಧಾರ್ಮಿಕ ವಿಚಾರಗಳನ್ನು ಹಾಸುಹೊಕ್ಕಾಗಿ ಕೃತಿಗಾರ ತರುತ್ತಾನೆ. ಧರ್ಮದ ಬೋಧನೆಗೆ ಕಥೆಯ ಹಂದರ ಸಹಾಯಕವಾಗಿದೆ. ಲಲಿತಘಟೆಯ ಕಥೆ, ಧರ್ಮಘೋಷಭಟಾರರ ಕಥೆ, ವಿದ್ಯುಚ್ಚೋರ ರಿಸಿಯ ಕಥೆಯೊಳಗೊಂಡಂತೆ ಕೆಲವು ಕಥೆಗಳಲ್ಲಿ ಪುಟ್ಟಗಟ್ಟಲೇ ಧರ್ಮದ ನಿರೂಪಣೆ

ಅಖಂಡವಾಗಿ ಬರುತ್ತದೆ. ವೃಷಭಸೇನರೆಂಬ ರಿಸಿಯರ ಕಥೆಯಂಥ ಸಣ್ಣ ಕಥೆಯು ಧರ್ಮವನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತದೆ. ಆ ಮೂಲಕ ಧಾರ್ಮಿಕ ಯಜಮಾನಿಕೆಯನ್ನು ಸ್ಥಾಪಿಸುತ್ತದೆ. ಪ್ರಭುತ್ವಕ್ಕಿಂತಲೂ ಧರ್ಮ ಮುಖ್ಯವಾಗಿ ತನ್ನ ಪ್ರಾಬಲ್ಯವನ್ನು ಬಿತ್ತರಿಸುತ್ತದೆ. ಕಥೆಗಳಲ್ಲಿ ಅರಸರು ವ್ಯಾಪಾರಿಗಳು ತಾವು ಮಾಡುವ ಪಾಪಗಳನ್ನು ಕಳೆದುಕೊಂಡು ಸದ್ಗತಿಯನ್ನು ಪಡೆಯಲು ಜೈನಧರ್ಮವನ್ನು ಸ್ವೀಕರಿಸಿ ವ್ರತಗಳನ್ನು ಆಚರಿಸುತ್ತಾರೆ. ಬ್ರಾಹ್ಮಣರೂ ಜೈನಧರ್ಮವನ್ನು ಸ್ವೀಕರಿಸಿ ಮೋಕ್ಷಪಡೆಯುತ್ತಾರೆ. ಹುಟ್ಟು ಕುರುಡಿಯಾದ ಹೊಲತಿಗೂ, ಸೌದೆ ಮಾರಿ ಜೀವಿಸುವ ಸಾಮಾನ್ಯರಿಗೂ ಜೈನಧರ್ಮ ಸದ್ಗತಿಯನ್ನು ನೀಡುವ ಪರಿಯು ಮುಖ್ಯವಾಗಿ ಕಾಣಿಸುತ್ತದೆ. ಈ ಮೂಲಕ ವಡ್ಡಾರಾಧನೆಯ ಕಥೆಗಳು ವಹಿಸುವ ಮುಖ್ಯ ಪಾತ್ರವೆಂದರೆ ಶ್ರಾವಕ ವರ್ಗಕ್ಕೆ ನೈತಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ ತಳಹದಿಯ ಬಾಳಿನ ಮಾರ್ಗವನ್ನು ಬೋಧಿಸುತ್ತದೆ. ಶ್ರಾವಕರಿಗೆ ಅಣುವ್ರತಗಳನ್ನು ಬೋಧಿಸಿ ಸಮಾಜದ ದುರ್ಗುಣಗಳು ಕಡಿಮೆಯಾಗುವಂತೆ ಮಾಡುತ್ತದೆ. ವಡ್ಡಾರಾಧನೆಯ ಕಥೆಗಳು ಒಂದೆಡೆ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಈ ಅಣುವ್ರತಗಳ ಮಹತ್ವವನ್ನು ಹೇಳಿದರೆ ಮತ್ತೊಂದೆಡೆ ಮಾನವ ಶರೀರದ ಅನಿತ್ಯತೆ, ಬದುಕಿನ ಕ್ಷಣಿಕತೆಯನ್ನು ಹೇಳುತ್ತ ಲೌಕಿಕ ಬದುಕನ್ನೇ ನಿರಾಕರಿಸುತ್ತದೆ. ಮತ್ತು ಕ್ಷಮೆಯೆಂಬುದು ತುಂಬ ಮುಖ್ಯವಾದ ಶ್ರೇಷ್ಠಗುಣವೆಂಬುದನ್ನು ಸಾರುತ್ತವೆ.

ವಡ್ಡಾರಾಧನೆಯ ಕಥೆಗಳಲ್ಲಿ ಧರ್ಮಪ್ರಭುತ್ವವನ್ನು ಬಿಟ್ಟರೆ ರಾಜಪ್ರಭುತ್ವದ ಚಿತ್ರಣ ಮುಖ್ಯವಾಗುತ್ತದೆ. ಪ್ರಭುತ್ವ ಒಂದು ಆದರ್ಶ ವ್ಯವಸ್ಥೆಯಾದರೂ, ಪ್ರಜೆಗಳನ್ನು ರಕ್ಷಿಸುವ ಹೊಣೆ ಹೊತ್ತಿದ್ದರೂ ಅತ್ಯಂತ ಸೂಕ್ಷ್ಮವಾಗಿ ಸಾಮಾಜಿಕ ಮತ್ತು ನೈತಿಕ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದನ್ನು ವಡ್ಡಾರಾಧನೆಯ ಕಥೆಗಳಲ್ಲಿ ಕಾಣಬಹುದು. ಗಜಕುಮಾರ, ಅಗ್ನಿರಾಜ, ಚಿಲಾತಪುತ್ರ ಪ್ರಭುತ್ವದಡಿಯಲ್ಲಿ ಬರುವವರ ಸ್ವಾತಂತ್ರ್ಯವನ್ನು ಹರಣಮಾಡುತ್ತಾರೆ. ಪ್ರಭುತ್ವದ ಪ್ರತಿನಿಧಿಗಳಾದ ರಾಜ–ಮಹಾರಾಜ, ರಾಜಪರಿವಾರ, ಮಂತ್ರಿ, ಸೇನಾಧಿಪತಿ, ರಾಜವರ್ತಕ, ರಾಜಶ್ರೇಷ್ಠಿಯವರನ್ನು ಹೆಚ್ಚು ಚಿತ್ರಿಸುತ್ತ ವ್ಯವಸ್ಥೆಯ ಕ್ರೌರ್ಯ ಮುಖಗಳನ್ನು ವಡ್ಡಾರಾಧನಕಾರ ಚಿತ್ರಿಸುತ್ತಾನೆ. ರಾಜ ಎಲ್ಲರನ್ನು ತನ್ನ ಅಧೀನತೆಯಲ್ಲೆ ನಡೆಸಿಕೊಂಡು ತನ್ನ ಸರ್ವಾಧಿಕಾರವನ್ನು ಮೆರೆಯುತ್ತಾನೆ. ಸಾಮಾನ್ಯವಾಗಿ ಕಥೆಗಳಲ್ಲಿ ರಾಜನ ವಿಷಯಲಂಪಟತನಗಳು ಮತ್ತು ರಾಜತ್ವದ ವಂಚನೆ, ಮೋಸ, ಅಧಿಕಾರದ

ಸ್ವಾರ್ಥ ಚಿತ್ರಿತವಾಗಿವೆ. ಇವೆಲ್ಲ ಒಂದು ಕಡೆಯಾದರೆ ಮತ್ತೊಂದು ಕಡೆ ಅನೇಕ ರಾಜರು ಧರ್ಮಪರರಾಗಿರುತ್ತಾರೆ. ಋಷಿಗಳು ಬಂದಾಗ ಅವರ ಆಗಮನ ವಿಷಯ ಕೇಳಿ ತಿಳಿದು ಹೋಗಿ ಭಕ್ತಿಯಿಂದ ಪೂಜಿಸಿ, ಧರ್ಮದ ಉಪದೇಶವನ್ನು ಕೇಳಿ ಬರುತ್ತಾರೆ ಮತ್ತು ಪ್ರಜೆಗಳು ದೂರನ್ನು ನೀಡಿದಾಗ ಸ್ಪಂದಿಸುತ್ತಾರೆ. ಸುಕುಮಾರಸ್ವಾಮಿ ಕಥೆಯ ವೃಷಭಾಂಕ ದೊರೆ, ಚಂದ್ರವಾಹನ ದೊರೆ, ಚಿಲಾತಪುತ್ರ ಕಥೆಯ ಶ್ರೇಣಿಕ ಮಹಾರಾಜ, ವಿದ್ಯುಚ್ಚೋರನೆಂಬ ರಿಸಿಯ ಕಥೆಯ ವಾಮರಥ ರಾಜರು ಧರ್ಮನಿಷ್ಠರೂ, ನ್ಯಾಯಪರರೂ ಮತ್ತು ಪ್ರಜೆಗಳ ಕಷ್ಟಕ್ಕೆ ತಕ್ಷಣ ಸ್ಪಂದಿಸುವವರಾಗಿದ್ದಾರೆ.

ವಡ್ಡಾರಾಧನೆಯ ಕಥೆಗಳಲ್ಲಿ ಸಮಾಜದ ಅಧಿಕಾರಸ್ಥ ನೆಲೆಗಳನ್ನು ಒಪ್ಪಿಕೊಂಡು ಬದುಕನ್ನು ರೂಪಿಸಿಕೊಂಡ ಸಾಮಾನ್ಯ ಜನರ ಚಿತ್ರಣ ದೊರೆಯುತ್ತದೆ. ರಾಜತ್ವ ಮತ್ತು ಧರ್ಮ ಇವೆರೆಡು ಸಾಮಾನ್ಯರ ಮೇಲೆ ತನ್ನ ಹಿಡಿತವನ್ನು ಸಾಧಿಸಿತ್ತು. ಅದನ್ನು ಧಿಕ್ಕರಿಸದೆ ಒಪ್ಪಿಕೊಂಡು ಬದುಕುವ ಸಾಮಾನ್ಯರ ಚಿತ್ರಣ ವಡ್ಡಾರಾಧನೆಯಲ್ಲಿದೆ. ಇವರ ಚಿತ್ರಣಗಳು ಅರಸುಕೇಂದ್ರಿತವಾಗಿ ಇಲ್ಲವೇ ಧರ್ಮಕೇಂದ್ರಿತವಾಗಿ ಮಾತ್ರ ಸಿಗುತ್ತವೆ. ಅರಸರು, ಮಂತ್ರಿ, ತಳಾರ ಮತ್ತು ವ್ಯಾಪಾರಸ್ಥರು ತಮ್ಮ ತಮ್ಮ ಮಗನ ಮೂಲಕ ಅಧಿಕಾರವನ್ನು ಅಥವಾ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಈ ಅಧೀನ ಪರಿಕಲ್ಪನೆಯಲ್ಲಿ ಮುಖ್ಯವಾಗಿ ಶೋಷಣೆಗೆ ಒಳಗಾಗಿರುವವಳು ಹೆಣ್ಣು. ಆಕೆ ಪುರುಷನ ಅಧೀನದಲ್ಲಿರುವುದು ಕಾಣಿಸುತ್ತದೆ. ಇದಕ್ಕೆ ಕೃತಿಕೆಯಂಥ ಪಾತ್ರಗಳು ಉದಾಹರಣೆಯಾಗಿವೆ. ಇಂತಹ ಪಾತ್ರಗಳಿಗೆ ವಿರುದ್ಧವಾದ ನೆಲೆಯಲ್ಲಿ ತನ್ನ ಆಸೆಯನ್ನು ಹೇಳುವ ಗುಣಸೌಂದರಿ, ಬುದ್ಧಿವಂತೆಯಾದ ಸುಮತಿ, ಗಂಭೀರೆಯೆಂಬ ಮುದುಕಿ ಕಂಡು ಬರುತ್ತಾರೆ. ಬಹುಪತ್ನಿತ್ವವನ್ನು ಚಿತ್ರಿಸುವ ಕಥೆಗಳು ಹೆಣ್ಣಿನ ಲೈಂಗಿಕ ಹಕ್ಕನ್ನು ಹಾದರವೆಂದು ಗುರುತಿಸುತ್ತದೆ. ಅಂದು ಪುರುಷ ಪ್ರಧಾನ ವ್ಯವಸ್ಥೆಯಿದ್ದುದರಿಂದ ವಡ್ಡಾರಾಧನೆ ಕಥೆಗಳಲ್ಲಿ ಪುರುಷಾಧೀನ ಸ್ತ್ರೀಯರ ಚಿತ್ರಣಗಳೇ ಹೆಚ್ಚು ಕಾಣಿಸುತ್ತವೆ. ಸ್ತ್ರೀ ಪಾತ್ರಗಳು ತಳೆದಿರುವ ಮೌನಗಳಲ್ಲಿ ಅವರ ಸ್ಥಿತಿಗತಿಗಳು ಗೋಚರಿಸುತ್ತವೆ.

ವಡ್ಡಾರಾಧನೆಯಲ್ಲಿ ಪ್ರಾಚೀನ ಭಾರತದ ಸಾಮಾಜಿಕ ಚೌಕಟ್ಟಿಗಿಂತ ಭಿನ್ನವಾಗಿರದ ಚಾತುರ್ವರ್ಣಾಶ್ರಮಕ್ಕೆ ಸಂಬಂಧಿಸಿದ ಸಾಮಾನ್ಯ ಜೀವನದ ಚೌಕಟ್ಟು ಗೋಚರಿಸುತ್ತದೆ. ಈ ಚೌಕಟ್ಟಿನಲ್ಲಿ ಜನರು ಸಾಮಾನ್ಯವಾಗಿ ಧಾರ್ಮಿಕ ಮತ್ತು ನೈತಿಕತೆಯ ಜೀವನ ನಡೆಸುತ್ತಿದ್ದರು ಮತ್ತು ಅನ್ಯಧರ್ಮದವರು ಧರ್ಮ

ಸಾಮರಸ್ಯದಿಂದ ಬದುಕುತ್ತಿದ್ದರು. ಉಣ್ಣಲು ಸಾಕಷ್ಟು ಅನ್ನ, ತೊಡಲು ಬಟ್ಟೆ, ಇರಲು ಮನೆ, ಇತ್ಯಾದಿಗಳಿಂದ ಸುಖದಿಂದಿರುವ ಜನರಲ್ಲದೆ; ಹಸಿದ, ಕೂದಲಿಗೆ ಎಣ್ಣೆಯಿಲ್ಲದ, ಬಟ್ಟೆಯಿಲ್ಲದ ಬಡ ಕೂಲಿಗಳೂ ಇದ್ದರು. ಒಟ್ಟಿನಲ್ಲಿ ವಡ್ಡಾರಾಧನೆಯ ಕಥೆಗಳಲ್ಲಿ ಧರ್ಮವನ್ನು ಹೊರತುಪಡಿಸಿದರೆ ಸಾಮಾಜಿಕ ಅಂಶಗಳೇ ಮಹತ್ತ್ವದಾಗಿವೆ.

ಆಕರ ಸಾಮಗ್ರಿಗಳು

೧. ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ
ಸಂ : ಡಾ. ಡಿ.ಎಲ್.ನರಸಿಂಹಾಚಾರ್
ಡಿ.ವಿ.ಕೆ.ಮೂರ್ತಿ, ಮೈಸೂರು – ೪
೨೦೦೬ (ಹನ್ನೆರಡೆಯ ಮುದ್ರಣ)

೨. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ
ಗದ್ಯಾನುವಾದ : ಟಿ.ಕೇಶವಭಟ್ಟ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

ಪರಾಮರ್ಶನ ಗ್ರಂಥಗಳು

೧. ಕನ್ನಡ ಸಾಹಿತ್ಯ ಚರಿತ್ರೆ
ಸಂಪುಟ–೦೩,
ಸಂ : ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ
ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

೨. ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ
ಸಂಪುಟ–೦೫ : ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು
ಸಂಪುಟ–೦೬ : ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೩. ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ
ಡಾ. ಬಿ.ಕೆ. ಖಡಬಡಿ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾಪನ ಮಠ, ಗದಗ, ೧೯೯೬

೪. ವಡ್ಡಾರಾಧನೆ : ಸಮಗ್ರ ಅಧ್ಯಯನ
ಡಾ. ಹಂಪ ನಾಗರಾಜಯ್ಯ
ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯

೫. ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ
ಸಂ : ಡಾ. ಬಿ.ಎಂ.ಪುಟ್ಟಯ್ಯ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೬. ಪ್ರಭುತ್ವ ಮತ್ತು ಜನತೆ
ಡಾ. ಕೆ. ಮೋಹನ್ ಕೃಷ್ಣರೈ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೭. ಕನ್ನಡ ಸಾಹಿತ್ಯ ಚರಿತ್ರೆ
ರಂ. ಶ್ರೀ. ಮುಗಳಿ
ಗೀತಾ ಬುಕ್ ಹೌಸ್, ಮೈಸೂರು, ೨೦೧೧ (ಇಪ್ಪತ್ತನೆಯ ಮುದ್ರಣ)

ಲೇಖನಗಳು

೧. ವಡ್ಡಾರಾಧನೆ – ಸಿ.ವೀರಣ್ಣ
ಕನ್ನಡ ಸಾಹಿತ್ಯ : ಚಾರಿತ್ರಿಕ ಬೆಳವಣಿಗೆ – ೧ (೮೯ – ೧೦೬)
ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೮೬

೨. ಸಾಮಾಜಿಕ ಪ್ರಜ್ಞೆ : ಮಾರ್ಗಕವಿ ಪರಂಪರೆಯಲ್ಲಿ – ಡಾ. ಎಂ. ಚಿದಾನಂದ ಮೂರ್ತಿ
ಹೊಸತು ಹೊಸತು (೩೦ – ೪೭)
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮

೩. ಪ್ರಭುತ್ವ ಮತ್ತು ಜನತೆ : ಹರಿಶ್ಚಂದ್ರ ಚಾರಿತ್ರ ಮುಖೇನ – ಕೆ.ಆರ್.ದುರ್ಗಾದಾಸ್
ಹರಿಶ್ಚಂದ್ರ ಚಾರಿತ್ರ ಸಾಂಸ್ಕೃತಿಕ ಮುಖಾಮುಖಿ (೧೦೧ – ೧೧೨)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪. ಪುರಂದರದಾಸರ ಕೀರ್ತನೆಗಳಲ್ಲಿ ಪ್ರಭುತ್ವ – ಡಾ. ಕೇಶವಶರ್ಮ
ಅರುಹು ಕುರುಹು, ವಿಶೇಷ ಸಂಚಿಕೆ – ೧೬ (೨೦೯ – ೨೩೦)
(ಜನವರಿ – ಮಾರ್ಚ್ ೨೦೧೩)

*****